# ಅಧ್ಯಾಯ – ೧೩

# ಶಿಕ್ಷಣ ಮತ್ತು ಕ್ರೀಡೆ

ಉದ್ಯಮಶೀಲತೆಯ ಸಾಹಸಕ್ಕೆ ಹೆಸರುವಾಸಿಯಾದ ಉಡುಪಿ ಜಿಲ್ಲೆಯ ಶೈಕ್ಷಣಿಕ ಪ್ರಗತಿ ಅಚ್ಚರಿ ಮೂಡಿಸುವಂತಹುದು. ಶಿಕ್ಷಣ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದುಕೊಂಡು, ರಾಜಧಾನಿಯಾದ ಬೆಂಗಳೂರು ಹಾಗೂ ಪಕ್ಕದ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಉತ್ತಮ ಪೈಪೋಟಿ ನೀಡುತ್ತಿರುವ ಉಡುಪಿ ಜಿಲ್ಲೆ ಈ ಎರಡೂ ಕ್ಷೇತ್ರಗಳಲ್ಲಿ ದೇಶಕ್ಕೆ ಉತ್ತಮ ಕೊಡುಗೆ ನೀಡಿದೆ. ಅನೇಕ ರಾಜವಂಶಗಳ ನೆಲೆವೀಡಾಗಿದ್ದ ಈ ಪ್ರದೇಶವನ್ನು ನೂರಾರು ವರ್ಷ ಆಳಿದ ಜಿಲ್ಲೆಯ ಪ್ರಮುಖ ಹಾಗೂ ಪ್ರಥಮ ರಾಜವಂಶವಾದ ಆಳುಪರು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು. ಹಲವಾರು ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ಶೈಕ್ಷಣಿಕ ಏಳಿಗೆಗೆ ಇವರು ನೀಡಿರುವ ಸೇವೆ ಅಪಾರ.

## ಶಾಸನೋಕ್ತ ಶಿಕ್ಷಣ ಕೇಂದ್ರಗಳು

ಜಿಲ್ಲೆಯ ಬಾರಕೂರು, ಬಸರೂರು, ಕೋಟೇಶ್ವರ, ಕುಂದಾಪುರ, ಬ್ರಹ್ಮಾವರ, ಉದ್ಯಾವರ, ಉಡುಪಿ, ಮುಂತಾದ ಸ್ಥಳಗಳಲ್ಲಿನ ದೇವಾಲಯಗಳಿಗೆ ಹೊಂದಿಕೊಂಡಂತಿದ್ದ ಮಠಗಳಲ್ಲಿ ಹಿಂದೆ ಶಿಕ್ಷಣ ನೀಡುತ್ತಿದ್ದುದ್ದಕ್ಕೆ ಶಾಸನಗಳಲ್ಲಿ ಉಲ್ಲೇಖ ಲಭಿಸುತ್ತದೆ. ಅದರಲ್ಲೂ ಬಾರಕೂರು, ಬಸರೂರು, ಉಡುಪಿಯಂತಹ ಸ್ಥಳಗಳು ಬಹು ಹಿಂದಿನಿಂದಲೂ ಶೈಕ್ಷಣಿಕ ಮಹತ್ವದ ಕೇಂದ್ರಗಳಾಗಿದ್ದು, ಇದನ್ನು ಜಿಲ್ಲೆಯಲ್ಲಿ ಲಭಿಸಿರುವ ನಾಲ್ಕಾರು ಶಾಸನಗಳು ಖಚಿತಪಡಿಸುತ್ತವೆ. ಉಡುಪಿಯ ಅನಂತೇಶ್ವರ ಗುಡಿ ಬಳಿಯಿರುವ ೧೩೫೬ರ ಶಾಸನ, ಉಡುಪಿಯ ಅನಂತೇಶ್ವರ ಗುಡಿ, ಮಠ ಹಾಗೂ ಛತ್ರಗಳ ನಿರ್ವಹಣೆಗೆಂದು ಮಲ್ಲಯ್ಯ ದಂಡನಾಯಕನು ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ಹರಿಹರನ ಕಾಲಕ್ಕೆ ಸೇರಿದ ಕಾಂತಾವರದ ಶಾಸನ ಅಮಾವಾಸೆಯಂದು ಬ್ರಾಹ್ಮಣರಿಗೆ ದಾನ ನೀಡಿದ ಅಂಶವನ್ನು ದಾಖಲಿಸಿದೆ. ಬಾರಕೂರಿನ ೧೩೬೦ರ ಶಾಸನ ಪಾಂಡೇಶ್ವರ ದೇವರ ಮಠದಲ್ಲಿದ್ದ ಏಳು ಉಪಾಧ್ಯಾಯರಿಗೆ ಪ್ರತೀ ತಿಂಗಳ ಅಮಾವಾಸೆಯಂದು ತಲಾ ಐದೈದು ಮುಡಿ (ಮುಡೆ)* ಅಕ್ಕಿಯನ್ನು ದತ್ತಿಬಿಟ್ಟ ಅಂಶವನ್ನು ತಿಳಿಸುತ್ತದೆ. ಬಾರಕೂರಿನ ಮೂಡಗೇರಿಯ

---

* *'ಮುಡಿ' ಅಥವಾ 'ಮುಡೆ' ಧಾನ್ಯದ ಪ್ರಮಾಣವನ್ನೂ ಅಥವಾ ಧಾನ್ಯ ಬೆಳೆಯುವ ಭೂಮಿಯ ಪ್ರಮಾಣವನ್ನೂ ಸೂಚಿಸುವ ಅಳತೆ ಮಾಪನ.*

ಗೋಪಾಲಕೃಷ್ಣ ಗುಡಿ ಬಳಿಯಿರುವ ಇಮ್ಮಡಿ ಹರಿಹರನ ಆಳ್ವಿಕೆಗೆ ಸೇರಿದ ೧೩೮೦ರ ಶಾಸನ, ಭಂಡಿಮಠದಲ್ಲಿ ವೇದಾಧ್ಯಯನ ಮಾಡುವ ವಟುಗಳಿಗೆಂದು ೧೨ ಗದ್ಯಾಣವನ್ನು ದಾನ ಬಿಟ್ಟ ಅಂಶವನ್ನು ಉಲ್ಲೇಖಿಸುತ್ತದೆ. ಬಾರಕೂರಿನ ೧೩೮೧ರ ಇನ್ನೊಂದು ಶಾಸನ, ಭಂಡಿಯಮಠದ ಆದಾಯದಲ್ಲಿ ಒಂದು ಭಾಗವನ್ನು ನಿಗದಿತ ದಿನದಂದು ಬ್ರಾಹ್ಮಣರ ವೇದಾಧ್ಯಯನಕ್ಕೆಂದು ಮೀಸಲ್ಪಟ್ಟಿದ್ದ ಅಂಶವನ್ನು ತಿಳಿಸುತ್ತದೆ. ಇದೇ ಊರಿನ ೧೩೮೭ರ ಇನ್ನೊಂದು ಶಾಸನ ಕೆಲ್ಲಂಗೆರೆಯಲ್ಲಿದ್ದ ಬ್ರಹ್ಮಪುರಿ ಹಾಗೂ ೧೨ ಬ್ರಾಹ್ಮಣ ಕುಟುಂಬಗಳಿಗೆ ೧೨೦ ಮುಡಿ ಭೂಮಿಯನ್ನು ಬಿಟ್ಟಿದ್ದನ್ನು ದಾಖಲಿಸಿದೆ. ಬಾರಕೂರಿನ ೧೩೮೭ರ ಶಾಸನ, ಕೆಲ್ಲಂಗೆರೆಯ ವಿನಾಯಕ ದೇವಾಲಯದಲ್ಲಿ ಪುರಾಣ ವಾಚನಕ್ಕೆಂದು ೧೫ ಮುಡಿ ಅಕ್ಕಿ ಉತ್ಪನ್ನದ ಭೂಮಿಯನ್ನು ದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಪೆರ್ಡೂರಿನ ೧೪೦೬ರ ಶಾಸನ, ಶೃಂಗೇರಿಯ ಯತಿ ಶ್ರೀ ನರಸಿಂಹ ಭಾರತಿಯವರ ಆಶಯದಂತೆ ಇಮ್ಮಡಿ ಬುಕ್ಕನು, ಶೃಂಗೇರಿ ಮಠದ ಗ್ರಂಥಾಲಯದ ನಿರ್ವಹಣೆ, ಸುಧಾರಣೆಗಳಿಗೆಂದು ಪೌರಾಣಿಕ ಕವಿ ಕೃಷ್ಣಭಟ್ಟನಿಗೆ ಭೂದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಇದೇ ಊರಿನ ೧೪೩೧ರ ಇನ್ನೊಂದು ಶಾಸನದಿಂದ ಶೃಂಗೇರಿ ಮಠದ ಕವಿ ಕೃಷ್ಣಭಟ್ಟನ ಮಗ ಶಂಕರಭಟ್ಟನಿಗೆ ರಾಜ್ಯಪಾಲ ಚಂದ್ರಪ್ಪನು ಭೂದಾನ ನೀಡಿದ ಅಂಶ ವ್ಯಕ್ತವಾಗುತ್ತದೆ. ನಡೂರಿನ ೧೪೩೧ರ ಶಾಸನದಿಂದ, ಪಾಠಶಾಲಂಗೇರಿಯ ಗೋಪಿನಾಥದೇವರ ಗುಡಿಗೆ ಹಿಂದೆ ತುಳುವ(ಆಳುಪ)ರಸರು ನೀಡಿದ್ದ ದತ್ತಿಯನ್ನು ಪುನರ್ಭರಣ ಮಾಡಿದ ಅಂಶ ಗೊತ್ತಾಗುತ್ತದೆ. ಇದರಿಂದ ಈ ಕೇರಿಯಲ್ಲಿ ಹಿಂದೆ ಪಾಠಶಾಲೆ ಇದ್ದ ಅಂಶ ವೇದ್ಯವಾಗುತ್ತದೆ. ಇಮ್ಮಡಿ ದೇವರಾಯನ ಆಳ್ವಿಕೆಗೆ ಸೇರಿದ ೧೪೩೩ರ ಶಾಸನದಲ್ಲಿಯೂ ಸಾಲಿ(ಶಾಲೆ)ಯ ಉಲ್ಲೇಖವಿದ್ದು, ಬ್ರಹ್ಮದೇಯ ಭೂಮಿಯ ಪ್ರಸ್ತಾಪವಿದೆ. ಬಸರೂರಿನ ೧೪೫೫ರ ಶಾಸನ ಬಸರೂರಿನಲ್ಲಿದ್ದ ನಾಲ್ಕು ಮಠಗಳ ಅಯ್ಯನವರಿಗೆ ಬಿಟ್ಟ ದತ್ತಿಯನ್ನು ದಾಖಲಿಸಿದೆ. ಹಿರಿಯಂಗಡಿಯ ಜೈನಬಸದಿಯಲ್ಲಿರುವ ೧೫೭೯ರ ಶಾಸನ, ಶಾಸ್ತ್ರದಾನಕ್ಕೆಂದು ಶ್ರಾವಕರಿಗೆ ೧೦೦ ಗದ್ಯಾಣಗಳನ್ನು ದಾನ ನೀಡಿದ್ದನ್ನು ಹೇಳುತ್ತಾ, ಕಾರ್ಕಳದ ೫೦೦೦ ಹಲರ ಮಠದಲ್ಲಿ ಮಕ್ಕಳ ಓದಿಸುವಾತನಿಗೆ ಕೊಟ್ಟ ತಾಮ್ರ ಪತ್ರದಂತೆ ೨೫ ಮುಡಿ ಅಕ್ಕಿಯನ್ನು ನೀಡಬೇಕಾಗಿತ್ತು ಎಂದು ತಿಳಿಸುತ್ತದೆ.

ಜಿಲ್ಲೆಯಲ್ಲಿ ಪೂರ್ವದಲ್ಲಿ "ಅಯ್ಯಗಳ ಮಠ"ಗಳೆಂಬ ಸ್ಥಳೀಯ ಶಾಲೆಗಳು ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದವು. ಸಾಮಾನ್ಯವಾಗಿ ಮಠಗಳಲ್ಲಿ ಅಥವಾ ದೇವಸ್ಥಾನಗಳಲ್ಲಿ ನಡೆಸಲ್ಪಡುತ್ತಿದ್ದ ಈ ಹಂತದಲ್ಲಿ ಪಂಡಿತರು ಅಥವಾ ಅರ್ಚಕರು ಶಿಕ್ಷಕರಾಗಿದ್ದರು. ಇಂತಹ ವ್ಯವಸ್ಥೆಯನ್ನು ಕೆಲವೊಮ್ಮೆ ಜಮೀನ್ದಾರರ ಬಳಿ ಇದ್ದ ಕಾರಕೂನರು ಅಥವಾ ಶಾನುಭೋಗರು ತಮ್ಮ ಒಡೆಯರ ಮಕ್ಕಳ ವಿದ್ಯಾರ್ಜನೆಗಾಗಿ ಖಾಸಗಿಯಾಗಿಯೂ ನಡೆಸುತ್ತಿದ್ದರು. ಈ ಹಂತದ ಶಿಕ್ಷಣ ಕ್ರಮ ಕಂಠಸ್ಥ ಮುಖೇನ ನಡೆಯುತ್ತಿತ್ತು. ತಮ್ಮ ಮುಂದೆ ಹರಡಲ್ಪಟ್ಟ ಮರಳಿನ ಮೇಲೆ ಕನ್ನಡ ವರ್ಣಮಾಲೆಯನ್ನು ಬರೆಯುವ ಮೂಲಕ ಬೋಧನೆ ಸಾಗುತ್ತಿತ್ತು. ಗಣಿತವು ಕಲಿಕೆಯ ಮುಖ್ಯ ವಿಷಯವಾಗಿದ್ದು, ಮಗ್ಗಿಯ ಕೋಷ್ಟಕಗಳನ್ನು ಕಂಠಸ್ಥ ಮಾಡಿಸಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳನ್ನು ಮಕ್ಕಳಿಗೆ ಬೋಧಿಸಲಾಗುತ್ತಿತ್ತು. ಮಹಾಭಾರತ, ರಾಮಾಯಣ ಹಾಗೂ ಗೀತೆಗಳ ಪ್ರಮುಖ ಭಾಗಗಳನ್ನು ಬಾಯಿಪಾಠ ಮಾಡಿಸಲಾಗುತ್ತಿತ್ತು. ಕನ್ನಡ ಮಾಧ್ಯಮದ ಕಲಿಕೆಯೂ ಸೇರಿತ್ತು. ರಾಜ್ಯದ ಈ ಪ್ರಾಂತದಲ್ಲಿ ಯಕ್ಷಗಾನ ಒಂದು ಜನಪ್ರಿಯ ಕಲಾಪ್ರಕಾರವಾಗಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದ್ದರಿಂದ, ಈ ಕಲೆಯನ್ನು ಪರಿಚಯಿಸಲಾಗುತ್ತಿತ್ತು. ಯಕ್ಷಗಾನ ಬಯಲಾಟ ಕೇವಲ ಕಲಾ ಮಾಧ್ಯಮ ಮಾತ್ರ ಆಗಿರದೆ, ಅನಕ್ಷರಸ್ಥ ಮಂದಿಗೆ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರ ಪರಿಚಯದ ಹೆಬ್ಬಾಗಿಲಾಗಿತ್ತು. ಉಪಾಧ್ಯಾಯ ವೃತ್ತಿ ಗೌರವಯುತವಾಗಿದ್ದು, ಶಿಕ್ಷಕರನ್ನು ದೇವರಂತೆ ಭಾವಿಸಿ, ಅವರಿಗೆ ಪೂಜನೀಯ ಸ್ಥಾನ ನೀಡಲಾಗಿತ್ತು. ಅವರ ಜೀವನಾವಶ್ಯಕ ಪದಾರ್ಥಗಳನ್ನು ಸಂಭಾವನೆಯ ರೂಪದಲ್ಲಿ ನೀಡಿ, ಅವರಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು.

ಜಿಲ್ಲೆಯಲ್ಲಿ ಹಿಂದಿನ ರಾಜ ಮಹಾರಾಜರು ಅಗ್ರಹಾರ ಕೇಂದ್ರಗಳನ್ನು ಶಿಕ್ಷಣ ಕೇಂದ್ರಗಳನ್ನು ಮತ್ತು ಘಟಿಕಾ ಸ್ಥಾನಗಳನ್ನು ಹಾಗೂ ಅಧ್ಯಯನ ಸಂಸ್ಥೆಗಳನ್ನು ಸ್ಥಾಪಿಸುವ ಅಥವಾ ಅಂತಹವುಗಳಿಗೆ

ಧನಸಹಾಯ, ದತ್ತಿಗಳನ್ನು ನೀಡಿದುದರ ಬಗ್ಗೆ ಉಲ್ಲೇಖಗಳು ವಿರಳವೆಂದು ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರಕಾರ ಡಾ. ಗುರುರಾಜಭಟ್ಟರು ಅಭಿಪ್ರಾಯಪಟ್ಟರೂ, ಗುರುಕುಲಗಳಲ್ಲಿ ಬ್ರಾಹ್ಮಣರಿಗೆ ವೇದವೇದಾಂಗಗಳ ಬೋಧನೆ, ಜೈನ ಮಠಗಳಲ್ಲಿ ಜೈನರಿಗೂ, ವೀರಶೈವ ಮಠಗಳಲ್ಲಿ ವೀರಶೈವರಿಗೂ ಅವರವರ ಧಾರ್ಮಿಕ ಗ್ರಂಥಗಳ ಬೋಧನೆ ಹಾಗೂ ವ್ಯಾಸಂಗ ಸೌಲಭ್ಯಗಳಿದ್ದವು. ಶಾಲೆ ಇಲ್ಲದ ಹಳ್ಳಿಗಳಲ್ಲಿ ಹೆತ್ತವರು ತಮ್ಮ ಮಕ್ಕಳಿಗೆ ತಾವೇ ಬೋಧಕರಾಗಿದ್ದರು. ತಿಥಿ, ವಾರ, ನಕ್ಷತ್ರ ಹಾಗೂ ಸಂವತ್ಸರಗಳ ಹೆಸರುಗಳನ್ನು ಬಾಯಿಪಾಠ ಮಾಡಿಸುತ್ತಿದ್ದರು. ದೇವರ ಶ್ಲೋಕ, ಪದ್ಯ, ಲಾವಣಿ, ಕಥೆ ಹಾಗೂ ಕೀರ್ತನೆಗಳು ಇದರ ನಂತರ ಹೇಳಿಕೊಡಲ್ಪಡುತ್ತಿದ್ದವು. ಸ್ಲೇಟು, ಬಳಪಗಳ ಬಳಕೆ ಇದೆಲ್ಲದರ ಬಳಿಕ ಪ್ರಾರಂಭವಾಗುತ್ತಿತ್ತು. ಹಲವೆಡೆ ಕೆಲವು ಮನೆಗಳ ಮಂದಿ ಒಟ್ಟಿಗೆ ಸೇರಿ, ಒಬ್ಬ ಶಿಕ್ಷಕನನ್ನು ತಮ್ಮ ಸ್ವಂತ ಖರ್ಚಿನಲ್ಲಿ ಗೊತ್ತುಮಾಡಿ, ದೇವಸ್ಥಾನ, ಭೂತಸ್ಥಾನ, ಜಗಲಿಗಳ ಮೇಲೆ ಮಕ್ಕಳಿಗೆ ಕಲಿಕೆಯ ಏರ್ಪಾಡು ಮಾಡುತ್ತಿದ್ದರು. ಸಾಮಾನ್ಯವಾಗಿ ಇಂತಹ ಪ್ರಾಥಮಿಕ ಕಲಿಕೆಯ ನಂತರವೂ ಮಕ್ಕಳು ತಾಯ್ತಂದೆಗಳ ವೃತ್ತಿಯನ್ನೇ ಅವಲಂಬಿಸುತ್ತಿದ್ದರು.

ಪ್ರಾಥಮಿಕ ಹಂತದ ಶಾಲೆಗಳೇ ಅಲ್ಲದೆ, ಜಿಲ್ಲೆಯಲ್ಲಿ ಅನೇಕ ವೇದಪಾಠಶಾಲೆಗಳೂ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ವೇದವೇದಾಂಗಗಳನ್ನು ಪುರಾಣ ಉಪನಿಷತ್ತುಗಳನ್ನು, ವ್ಯಾಕರಣ, ತರ್ಕ, ಮೀಮಾಂಸೆ, ಸಾಹಿತ್ಯ, ಖಗೋಳಶಾಸ್ತ್ರಗಳೇ ಅಲ್ಲದೆ, ಹಲವೆಡೆ ವೈದ್ಯಕೀಯ ಚಿಕಿತ್ಸಾಕ್ರಮವನ್ನೂ ಸಂಸ್ಕೃತ ಮಾಧ್ಯಮದಲ್ಲಿ ಬೋಧಿಸಲಾಗುತ್ತಿತ್ತು. ಇಂತಹ ಪಾಠಶಾಲೆಗಳಲ್ಲಿ ಅಮೂಲ್ಯ ತಾಳೆಗರಿಗಳ ಗ್ರಂಥಾಲಯಗಳೂ ಕಾರ್ಯನಿರ್ವಹಿಸುತ್ತಿದ್ದವು. ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣ ಮಸೀದಿ-ಮದ್ರಸಾಗಳಲ್ಲಿ ನೀಡಲ್ಪಡುತ್ತಿತ್ತು. ಕಾಲಕ್ರಮದಲ್ಲಿ ಹಲವು ಕ್ಯಾಥೊಲಿಕ್ ಪಾದ್ರಿಗಳು ಇಗರ್ಜಿಗಳಲ್ಲಿ ಅಧ್ಯಾಪನ ಪ್ರಾರಂಭಿಸಿದರು.

## ಬ್ರಿಟಿಷರ ಆಗಮನಾನಂತರ

ಜಿಲ್ಲೆಯಲ್ಲಿ ಆಧುನಿಕ ಶಿಕ್ಷಣಕ್ಕೆ ಬ್ರಿಟಿಷರಿಂದ ಅಡಿಪಾಯ ಹಾಕಲ್ಪಟ್ಟಿತು. ಶ್ರೀರಂಗಪಟ್ಟಣದ ಕದನದಲ್ಲಿ (೧೭೯೯) ಟಿಪ್ಪು ಹತನಾದಾಗ ಅವನ ರಾಜ್ಯದ ಪಶ್ಚಿಮ ಕರಾವಳಿಯನ್ನು ಕಂಪನಿಯು ಮದರಾಸು ಅಧಿಪತ್ಯಕ್ಕೆ ಸೇರಿಸಿತು. ಆದರೂ ಮೇಲ್ಕಂಡ ಶೈಕ್ಷಣಿಕ ವ್ಯವಸ್ಥೆಯು ಮುಂದಿನ ಐದು ದಶಕಗಳವರೆವಿಗೂ ಮೊದಲಿನಂತೆಯೇ ಮುಂದುವರೆಯಿತು. ಬಾಸೆಲ್ ಮಿಷನ್ನಿನವರು ೧೮೩೮ರಲ್ಲಿ ಮಂಗಳೂರಿನಲ್ಲಿ ಪ್ರಥಮ ಪ್ರಾಥಮಿಕ ಶಾಲೆ ಪ್ರಾರಂಭಿಸುವವರೆವಿಗೂ ಐಗಳ ಮಠಗಳು ಅಸ್ತಿತ್ವದಲ್ಲಿದ್ದವು. ನಂತರ ವೈಜ್ಞಾನಿಕ ಚೌಕಟ್ಟನ್ನು ಅವಲಂಬಿಸಿ ಸರ್ಕಾರ ನಿಗದಿಪಡಿಸಿದ ಪಠ್ಯಕ್ರಮದಂತೆ ಶಾಲೆಗಳು ಪ್ರಾರಂಭಗೊಂಡು ನಾಲ್ಕನೇ ತರಗತಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಸಂಖ್ಯೆಯನ್ನವಲಂಬಿಸಿ ಅವುಗಳಿಗೆ ಅನುದಾನವೂ ದೊರಕಿತು. ಬಾಸೆಲ್ ಮಿಷನ್ನಿನ ಪ್ರಚಾರಕರು ಪ್ರಥಮತಃ ಶಿಕ್ಷಣವನ್ನು ಸಾರ್ವತ್ರೀಕರಿಸಿ, ೧೮೩೭ರ ವೇಳೆಗೆ ಜಾತಿ, ಲಿಂಗ, ಮತ ಭೇದವಿಲ್ಲದೆ ಎಲ್ಲರಿಗೂ ಮುಕ್ತ ಪ್ರವೇಶವಿದ್ದ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರು. ಇದನ್ನನುಸರಿಸಿ ಹಲವು ದೇಶೀಯರೂ ಆಧುನಿಕ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರು.

ಬ್ರಿಟಿಷ್ ಆಡಳಿತಕ್ಕೆ ಈ ಪ್ರಾಂತ ಹಸ್ತಾಂತರಗೊಂಡ ನಂತರ, ಸರ್ ಥಾಮಸ್ ಮುನ್ರೋ ಶಿಕ್ಷಣ ಕ್ಷೇತ್ರಕ್ಕೆ ವ್ಯವಸ್ಥಿತರೂಪ ನೀಡುವ ಸಲುವಾಗಿ ಶೈಕ್ಷಣಿಕ ಸಮೀಕ್ಷೆಗಾಗಿ ಆಜ್ಞೆ ಮಾಡಿದನು. ಮದ್ರಾಸಿನಲ್ಲಿ ೧೮೩೭ರಲ್ಲಿ ಶಿಕ್ಷಣ ಮಂಡಳಿ ಸ್ಥಾಪಿಸಲ್ಪಟ್ಟಿತು. ೧೮೫೪ರ ವುಡ್ಸ್ ವರದಿಯಂತೆ ಮದರಾಸು ಸಂಸ್ಥಾನದಲ್ಲಿ ಶಿಕ್ಷಣ ಇಲಾಖೆಯು ಪ್ರಾರಂಭವಾಯಿತು. ಈ ವೇಳೆಯಲ್ಲಿ ಪ್ರಾಂತದ ಶೈಕ್ಷಣಿಕ ರಂಗ ಪ್ರಗತಿಗೊಂಡಿದ್ದೇ ಅಲ್ಲದೆ, ಶಿಕ್ಷಕರ ತರಬೇತಿಗಾಗಿ ಮಂಗಳೂರಿನಲ್ಲಿ ನಾರ್ಮಲ್ ಶಾಲೆಯೊಂದು ಸ್ಥಾಪನೆಯಾಯಿತು. ೧೮೩೫ರಲ್ಲಿ ಶಿಕ್ಷಣರಂಗಕ್ಕೆ ಪಾದಾರ್ಪಣೆ ಮಾಡಿದ ಕ್ರೈಸ್ತ ಮಿಷನರಿಗಳು ಉಡುಪಿ, ಮಂಗಳೂರುಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಆಂಗ್ಲ ಶಿಕ್ಷಣದ ಪರಿಕಲ್ಪನೆ ಮೂಡಿಸಿದರು. ಹರಿಜನ ಹಾಗೂ ಗಿರಿಜನರಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನಿರಾಕರಿಸಲ್ಪಡುತ್ತಿದ್ದ ಕಾಲದಲ್ಲಿ ಬಾಸಲ್ ಮಿಷನ್ನಿನವರು ತಾವು ಜಿಲ್ಲೆಯಲ್ಲಿ ಸ್ಥಾಪಿಸಿದ ಶಾಲೆಗಳಲ್ಲಿ ಇವರಿಗೆ ಸಮಾನಾವಕಾಶ ನೀಡಿದರು. ೧೮೮೮ರಲ್ಲಿ ಮಂಗಳೂರಿನಲ್ಲಿ ಜೆಸ್ಯೂಟ್ ಮಿಷನ್ನಿನವರು ತಮ್ಮ

ಪ್ರಥಮ ಶಾಲೆಯನ್ನು ಪ್ರಾರಂಭಿಸಿದರು. ಪ್ರಥಮ ಬಾರಿಗೆ ೧೮೫೫ರಲ್ಲಿ ಸರಕಾರದಿಂದ ಅನುದಾನ ನೀತಿ ಜಾರಿಯಾಗಿ ವೇತನ ಪರಿಷ್ಕರಣಗೊಂಡಿತು. ೧೮೫೬ರಲ್ಲಿ ಸರಕಾರ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿತು. ಮಂಗಳೂರಿನ ಸ್ಥಳೀಯರು ನೀಡಿದ ಆರ್ಥಿಕ ನೆರವಿನೊಂದಿಗೆ ೧೮೬೭ರಲ್ಲಿ ಶಾಲೆಯೊಂದನ್ನು ಸ್ಥಾಪಿಸಿದ ಸರಕಾರವು ಪಠ್ಯಕ್ರಮ, ಪಠ್ಯಪುಸ್ತಕ, ಶಾಲಾ ಪದ್ಧತಿಗಳ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ನೀಡಿತು. ೧೮೫೭ರಲ್ಲಿ ಸ್ಥಾಪನೆಗೊಂಡ ಮದ್ರಾಸ್ ವಿಶ್ವವಿದ್ಯಾಲಯ ಉನ್ನತ ಶೈಕ್ಷಣಿಕ ಮಟ್ಟದಲ್ಲಿ ಒಂದು ಮೈಲಿಗಲ್ಲಾಯಿತು. ಈ ಪ್ರಾಂತದ ಮೆಟ್ರಿಕ್ಯುಲೇಷನ್ ಹಾಗೂ ಪದವಿ ಪರೀಕ್ಷೆಗಳನ್ನು ಇದು ನಡೆಸುತ್ತಿದ್ದಿತು. ೧೮೬೫ರಲ್ಲಿ ಮಂಗಳೂರಿನಲ್ಲಿ ಮದರಾಸು ಸರಕಾರ ಸ್ಥಾಪಿಸಿದ 'ಪ್ರಾಂತೀಯ ಪ್ರೌಢಶಾಲೆ' ನಂತರ ಇಂಟರ್‌ಮೀಡಿಯೇಟ್ ಕಾಲೇಜಾಗಿ, ಪ್ರಸ್ತುತ ಪ್ರಥಮ ದರ್ಜೆ ಕಾಲೇಜಾಗಿ ಕಾರ್ಯನಿರ್ವಹಿಸುತ್ತಿದೆ. ಮಂಗಳೂರಿನ ಸರಕಾರಿ ಶಾಲೆಯನ್ನು ೧೮೭೯ರಲ್ಲಿ ದ್ವಿತೀಯ ದರ್ಜೆ ಕಾಲೇಜಾಗಿ ಮಾರ್ಪಡಿಸಲಾಯಿತು. ಇದರೊಟ್ಟಿಗೆ ಜೆಸ್ಯೂಟ್ ಮಿಷನ್ನಿನವರೂ ಒಂದು ಕಾಲೇಜನ್ನು ಪ್ರಾರಂಭಿಸಿದರು. ೧೮೬೩ರ ಮದ್ರಾಸ್ ಪ್ರಾಥಮಿಕ ಶಿಕ್ಷಣ ಕಾಯ್ದೆ ಹಾಗೂ ೧೮೭೧ರ ಸ್ಥಳೀಯ ಫಂಡ್ ಕಾಯ್ದೆಗಳಿಂದಾಗಿ, ಪ್ರಾಥಮಿಕ ಶಿಕ್ಷಣ ಒಂದು ನಿರ್ದಿಷ್ಟ ರೂಪ ಪಡೆಯಿತು. ಜಿಲ್ಲಾ ಕಲೆಕ್ಟರು ಪದನಿಮಿತ್ತ ಅಧ್ಯಕ್ಷರಾಗಿದ್ದ, ನಾಲ್ಕು ಅಧಿಕಾರಿ ಹಾಗೂ ನಾಲ್ಕು ಅಧಿಕಾರೇತರ ಸದಸ್ಯರನ್ನೊಳಗೊಂಡ ಸ್ಥಳೀಯ ಮಂಡಳಿ, ಶಾಲೆಗಳ ಸ್ಥಾಪನೆ, ನಿರ್ವಹಣೆ ಹಾಗೂ ತಪಾಸಣೆ ಮುಂತಾದ ಜವಾಬ್ದಾರಿಗಳನ್ನು ನಿರ್ವಹಿಸಲು ಮೇಲ್ಕಂಡ ಕಾಯ್ದೆ ಅವಕಾಶ ನೀಡಿತು. ಜಿಲ್ಲಾ ಮಂಡಳಿ ಸಹ ಶಿಕ್ಷಣದ ಜವಾಬ್ದಾರಿ ಹೊಂದಿತ್ತು. ಪುರಸಭೆಗಳೂ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡವು. ರಾಜಸ್ವದ ಸೆಸ್‌ನಲ್ಲಿ ಶಿಕ್ಷಣ ರಂಗಕ್ಕೆ ಆದ್ಯತೆ ನೀಡಲಾಯಿತು.

ಇವೆಲ್ಲ ಕಾರಣಗಳಿಂದಾಗಿ ೧೮೭೦–೭೧ರಲ್ಲಿ ೭೩ ಆಗಿದ್ದ ಶಾಲೆಗಳ ಸಂಖ್ಯೆ, ೧೮೮೦–೮೧ರ ವೇಳೆಗೆ ೧೪೮ಕ್ಕೆ ಏರಿತು. ಇವುಗಳಲ್ಲಿ ೧೨೩ ಪ್ರಾಥಮಿಕ ಶಾಲೆಗಳಾಗಿದ್ದು, ಇವುಗಳಲ್ಲಿ ಒಟ್ಟು ೪,೧೯೯ ಮಕ್ಕಳಿದ್ದರು. ಮೊದಲ ಮಹಾಯುದ್ಧದಿಂದಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಆರ್ಥಿಕ ನೆರವು ಅಲಭ್ಯವಾಗಿ, ಹಲವಾರು ಉತ್ತಮ ಯೋಜನೆಗಳು ಜಾರಿಯಾಗದೆ, ಪ್ರಗತಿ ಕುಂಠಿತವಾಯಿತು. ಮಿಷನರಿಗಳಿಂದ ಉತ್ತೇಜಿತರಾದ ಇತರ ಖಾಸಗಿ ಸಂಸ್ಥೆಗಳವರೂ ವಿದ್ಯಾ ಸಂಸ್ಥೆಗಳ ಸ್ಥಾಪನೆಗೆ ಮುಂದಾದರು. ಅದೇ ಸಂದರ್ಭದಲ್ಲಿ ಗಣಪತಿ ಪ್ರಾಥಮಿಕ ಶಾಲೆ ೧೮೭೦ರಲ್ಲಿ ಸಾರಸ್ವತ ಸಮುದಾಯದವರಿಂದ ಸ್ಥಾಪನೆಗೊಂಡು, ೧೮೮೦ರಲ್ಲಿ ಜೆಸುವಿಟ್ ಪಾದ್ರಿಗಳು ಮಂಗಳೂರಿನಲ್ಲಿ ಸೇಂಟ್ ಅಲೋಸಿಯಸ್ ಸಂಸ್ಥೆಯನ್ನು ಸ್ಥಾಪಿಸಿದರು. ಇದು ೧೮೯೦ರಲ್ಲಿ ಮಾಧ್ಯಮಿಕ ಶಾಲೆಯಾಗಿ, ಆಗಿ, ೧೯೧೮ರಲ್ಲಿ ಪ್ರೌಢ ಶಾಲೆಯಾಯಿತು. ಏತನ್ಮಧ್ಯೆ ೧೮೯೧ರಲ್ಲಿ ಕೆನರಾ ಹೈಸ್ಕೂಲು ಸ್ಥಾಪಿತವಾಯಿತು. ಈ ಎಲ್ಲಾ ಸಂಸ್ಥೆಗಳೂ ಉನ್ನತೀಕರಣಗೊಂಡು ಇಂದಿಗೂ ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸುತ್ತಿವೆ.

## ಸಾಕ್ಷರತೆ

ದಕ್ಷಿಣ ಕನ್ನಡ ಜಿಲ್ಲೆಯು ೧೯೫೬ರಲ್ಲಿ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾಗುವ ಮೊದಲು ಮದರಾಸು ರಾಜ್ಯದ ಆಡಳಿತದಲ್ಲಿದ್ದು, ಮಂಗಳೂರು, ಕುಂದಾಪುರ, ಉಡುಪಿ, ಕಾರ್ಕಳ, ಪುತ್ತೂರು, ಬೆಳ್ತಂಗಡಿ ಹಾಗೂ ಕಾಸರಗೋಡು ತಾಲೂಕುಗಳನ್ನು ಒಳಗೊಂಡಿತ್ತು. ಭಾಷಾವಾರು ಪ್ರಾಂತ ವಿಂಗಡಣಾ ಸಮಯದಲ್ಲಿ ಕಾಸರಗೋಡು ಕೇರಳರಾಜ್ಯಕ್ಕೆ ಸೇರ್ಪಡೆಯಾಯಿತು. ಹಾಗಾಗಿ ೧೯೫೬ರ ಪೂರ್ವದ ಸಾಕ್ಷರತಾ ಸಮೀಕ್ಷೆ ಕಾಸರಗೋಡು ತಾಲೂಕನ್ನೂ ಒಳಗೊಂಡಿರುತ್ತದೆ. ೧೮೮೧–೧೮೯೧ರ ದಶಕದ ಒಂದು ಸಮೀಕ್ಷೆಯಂತೆ ಜಿಲ್ಲೆಯಲ್ಲಿ ೧೫ ವರ್ಷಗಳ ಮೇಲ್ಪಟ್ಟ ಜನಸಂಖ್ಯೆಯ ಶೇಕಡಾ ೮೨.೨ ರಷ್ಟು ಗಂಡಸರು ಮತ್ತು ೯೯.೦೨ ರಷ್ಟು ಹೆಂಗಸರು ಅನಕ್ಷರಸ್ಥರಾಗಿದ್ದರು. ಉಪ್ಪಿನಂಗಡಿ ಮತ್ತು ಕುಂದಾಪುರಗಳಲ್ಲಿ ಕ್ರಮವಾಗಿ ಶೇಕಡಾ ೯೦.೮೦ ರಷ್ಟು ಹಾಗೂ ೮೬.೯೫ರಷ್ಟು ಅನಕ್ಷರಸ್ಥರಿದ್ದರು. ೧೯೨೧ರ ವೇಳೆಗೆ ಶೇಕಡಾ ೧೬.೨ರಷ್ಟು ಗಂಡಸರು ಹಾಗೂ ೩.೮ರಷ್ಟು ಹೆಂಗಸರು ಓದು ಬರಹ ಬಲ್ಲವರಾಗಿದ್ದರು. ಈ ವರ್ಷದಲ್ಲಿದ್ದಂತೆ ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತಾ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ : ೧೩.೧**

| ತಾಲೂಕು | ಸಾಕ್ಷರರ ಸಂಖ್ಯೆ | | ಪ್ರತೀ ೧,೦೦೦ ಜನಸಂಖ್ಯೆಗೆ | |
|---|---|---|---|---|
| | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು |
| ಕುಂದಾಪುರ | ೯,೫೮೩ | ೮೧೦ | ೧೪೭ | ೧೧ |
| ಕಾರ್ಕಳ | ೧೦,೧೧೪ | ೧,೫೮೬ | ೧೫೧ | ೨೨ |
| ಉಡುಪಿ | ೧೭,೬೫೨ | ೨,೮೧೪ | ೧೭೫ | ೨೬ |
| ಮಂಗಳೂರು | ೨೯,೪೨೨ | ೮,೦೧೧ | ೧೯೭ | ೫೨ |
| ಉಪ್ಪಿನಂಗಡಿ | ೧೧,೪೪೮ | ೧,೮೭೩ | ೧೧೮ | ೧೯ |
| **ಒಟ್ಟು** | ೬೮,೬೩೬ | ೧೫,೦೯೪ | ೭೮೮ | ೧೩೦ |

*ಆಧಾರ : ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್*

ಮುಂದಿನ ದಶಕದಲ್ಲಿ (೧೯೩೧) ಗಂಡಸರ ಸಾಕ್ಷರತೆ ಶೇಕಡಾ ೧೭.೧ಕ್ಕೂ ಹೆಂಗಸರ ಸಾಕ್ಷರತೆ ಶೇಕಡಾ ನಾಲ್ಕಕ್ಕೂ ಹೆಚ್ಚಳಗೊಂಡಿತು. ಈ ದಶಕದಲ್ಲಿ ಶಾಲೆಗಳ ಸಂಖ್ಯೆ ಹೆಚ್ಚಳಗೊಂಡಿದ್ದೇ ಇದಕ್ಕೆ ಕಾರಣವಾಯಿತು. ೧೯೫೧ರ ಜನಗಣತಿಯಂತೆ ಗಂಡಸರ ಸಾಕ್ಷರತೆ ಶೇಕಡಾ. ೩೩.೫ ಮತ್ತು ಹೆಂಗಸರ ಸಾಕ್ಷರತೆ ಶೇಕಡಾ ೧೫.೬ ಆಗಿದ್ದು, ಇದು ಒಟ್ಟು ಜನಸಂಖ್ಯೆಯ ಶೇಕಡಾ ೨೩ ಆಗಿದ್ದಿತು. ಈ ಸಮಯದಲ್ಲಿ ಅವಿಭಜಿತ ಜಿಲ್ಲೆಯಲ್ಲಿ ಹೆಂಗಸರ ಶಿಕ್ಷಣದ ಪ್ರಗತಿ ಕ್ಷಿಪ್ರಗತಿಯಲ್ಲಿ ನಡೆದುದು ಕಂಡುಬರುತ್ತದೆ. ೧೯೬೧ರ ಜನಗಣತಿಯಂತೆ ಗಂಡಸರ ಸಾಕ್ಷರತೆ ಶೇಕಡಾ ೪೧.೩೮ ಹಾಗೂ ಮಹಿಳೆಯರ ಸಾಕ್ಷರತೆ ಶೇಕಡಾ. ೨೩.೯ಕ್ಕೆ ಹೆಚ್ಚಳಗೊಂಡು, ಅವಿಭಜಿತ ಜಿಲ್ಲೆಯ ಒಟ್ಟು ಸಾಕ್ಷರತಾ ಪ್ರಮಾಣ ೩೨.೫೫ ಆಗಿದ್ದಿತು. ೧೯೭೧ರ ದಶಕಕ್ಕೆ ಜಿಲ್ಲೆಯು ಒಟ್ಟು ಶೇಕಡಾ ೧೦ರಷ್ಟು ಸಾಕ್ಷರತಾ ಪ್ರಮಾಣ ಹೆಚ್ಚಳವನ್ನು ದಾಖಲು ಮಾಡಿತು. ಗಂಡಸರ ಸಾಕ್ಷರತೆ ಶೇಕಡಾ ೫೨.೩೪ಕ್ಕೆ ಹಾಗೂ ಹೆಂಗಸರ ಸಾಕ್ಷರತೆ ಶೇಕಡಾ ೪೩.೪೫ಕ್ಕೆ ಹೆಚ್ಚಳಗೊಂಡಿತು. ಗಂಡಸರ ಸಾಕ್ಷರತಾ ಪ್ರಮಾಣದಲ್ಲಿ ಈ ದಶಕದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನವನ್ನೂ ಹೆಂಗಸರ ಸಾಕ್ಷರತಾ ಪ್ರಮಾಣದಲ್ಲಿ ದ್ವಿತೀಯ ಸ್ಥಾನವನ್ನು ಹೊಂದಿದ್ದಿತು. ೧೯೭೧ರ ಜನಗಣತಿಯಂತೆ ಜಿಲ್ಲೆಯ ತಾಲೂಕುವಾರು ಸಾಕ್ಷರತಾ ವಿವರವು ಕೆಳಗಿನ ಕೋಷ್ಟಕದಲ್ಲಿದೆ.

**ಕೋಷ್ಟಕ : ೧೩.೨**

| ಕ್ರ.ಸಂ | ತಾಲೂಕು | | ಅಕ್ಷರಸ್ಥರ ಸಂಖ್ಯೆ | | ಒಟ್ಟು |
|---|---|---|---|---|---|
| | | | ಗಂಡಸರು | ಹೆಂಗಸರು | |
| ೧. | **ಬೆಳ್ತಂಗಡಿ** | ನಗರ * | – | – | – |
| | | ಗ್ರಾಮ | ೨೯,೬೩೦ | ೧೭,೬೨೦ | ೪೭,೨೫೦ |
| | | **ಒಟ್ಟು** | **೨೯,೬೩೦** | **೧೭,೬೨೦** | **೪೭,೨೫೦** |
| ೨. | **ಬಂಟ್ವಾಳ** | ನಗರ * | – | – | – |
| | | ಗ್ರಾಮ | ೫೩,೨೭೫ | ೨೯,೬೧೦ | ೮೨,೮೮೫ |
| | | **ಒಟ್ಟು** | **೫೩,೨೭೫** | **೨೯,೬೧೦** | **೮೨,೮೮೫** |
| ೩. | **ಕುಂದಾಪುರ** | ನಗರ | ೬೩,೭೧೨ | ೯,೮೭೩ | ೭೩,೫೮೫ |
| | | ಗ್ರಾಮ | ೧೬,೭೯೭ | ೪೧,೨೫೫ | |
| | | **ಒಟ್ಟು** | **೮೦,೫೦೯** | **೫೧,೧೨೮** | |
| ೪. | **ಕಾರ್ಕಳ** | ನಗರ | ೭,೭೭೬ | ೬,೫೪೭ | ೧೪,೩೨೩ |
| | | ಗ್ರಾಮ | ೩೯,೨೮೦ | ೩೨,೨೪೫ | ೭೧,೫೨೫ |
| | | **ಒಟ್ಟು** | **೪೭,೦೫೬** | **೩೮,೭೯೨** | **೮೫,೮೪೮** |

| ೧ | ೨ | | ೩ | | ೪ |
|---|---|---|---|---|---|
| | | | ಗಂಡಸರು | ಹೆಂಗಸರು | |
| ೫ | ಮಂಗಳೂರು | ನಗರ | ೮೩,೭೦೪ | ೬೬,೬೫೫ | ೧,೫೦,೩೫೯ |
| | | ಗ್ರಾಮ | ೬೪,೨೨೩ | ೪೬,೩೪೮ | ೧,೧೦,೫೭೧ |
| | | **ಒಟ್ಟು** | **೧,೪೭,೯೨೭** | **೧,೧೩,೦೦೩** | **೨,೬೦,೩೯೦** |
| ೬ | ಪುತ್ತೂರು | ನಗರ | ೬,೬೨೮ | ೪,೬೧೭ | ೧೧,೨೪೫ |
| | | ಗ್ರಾಮ | ೩೨,೩೨೪ | ೧೭,೦೪೧ | ೪೯,೩೬೫ |
| | | **ಒಟ್ಟು** | **೩೮,೯೫೨** | **೨೧,೬೫೮** | **೬೦,೬೧೦** |
| ೭ | ಸುಳ್ಯ | ನಗರ | – | – | – |
| | | ಗ್ರಾಮ | ೨೨,೦೨೮ | ೧೨,೬೮೩ | ೩೪,೭೧೧ |
| | | **ಒಟ್ಟು** | **೨೨,೦೨೮** | **೧೨,೬೮೩** | **೩೪,೭೧೧** |
| ೮ | ಉಡುಪಿ | ನಗರ | ೨೬,೫೩೨ | ೨೩,೧೦೩ | ೪೯,೬೩೫ |
| | | ಗ್ರಾಮ | ೭೬,೭೫೧ | ೬೩,೪೬೫ | ೧,೪೦,೨೧೬ |
| | | **ಒಟ್ಟು** | **೧,೦೩,೨೮೩** | **೮೬,೫೬೮** | **೧,೮೯,೮೫೧** |

** ೧೯೭೧ರ ವೇಳೆಗೆ ಬಂಟ್ವಾಳ, ಬೆಳ್ತಂಗಡಿಗಳು ಪ್ರತ್ಯೇಕವಾಗಿ ನಗರ ಪ್ರದೇಶವನ್ನು ಹೊಂದಿರಲಿಲ್ಲ.* ***ಆಧಾರ: ಜನಗತಿ ೧೯೭೧***

೧೯೮೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಪ್ರತಿ ಚ.ಕಿ.ಮೀಗೆ ಜನಸಂಖ್ಯಾ ಸಾಂದ್ರತೆ ೨೮೨ ಆಗಿದ್ದು, ಆ ದಶಕದ ಸಾಕ್ಷರತೆಯ ಶೇಕಡಾವಾರು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ : ೧೩.೩ ಶೇಕಡಾ ಸಾಕ್ಷರತೆ**

| | ಹೆಣ್ಣು | ಗಂಡು | ಒಟ್ಟು |
|---|---|---|---|
| ಗ್ರಾಮೀಣ ಪ್ರದೇಶ | ೪೦.೧೫ | ೫೭.೪೨ | ೪೮.೪೭ |
| ನಗರ ಪ್ರದೇಶ | ೬೦.೩೯ | ೭೪.೧೫ | ೬೭.೨೨ |
| **ಒಟ್ಟು** | ೪೪.೯೯ | ೬೧.೬೧ | ೫೩.೦೬ |

*ಆಧಾರ: ಜನಗಣತಿ–೧೯೮೧*

೨೦೦೧ರ ಜನಗಣತಿಯಂತೆ ಜಿಲ್ಲೆಯ ಸಾಕ್ಷರತಾ ಪ್ರಮಾಣವು ಶೇಕಡ ೮೧.೨೦ ಇದ್ದು ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣವು ಶೇಕಡ ೮೬.೨೦ ಇದ್ದರೆ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇಕಡ ೭೫.೨೦ ಇತ್ತು. ಜಿಲ್ಲೆಯ ಸಾಕ್ಷರಸ್ಥರ ತಾಲುಕುವಾರು ವಿವರವನ್ನು ಈ ಕೆಳಗಿನ ಕೋಷ್ಟಕಗಳಲ್ಲಿದೆ.

**ಕೋಷ್ಟಕ : ೧೩.೪ ಜನಸಂಖ್ಯೆ ೨೦೦೧ರ ಜನಗಣತಿ ಪ್ರಕಾರ (ಅಕ್ಷರಸ್ಥರು)**

| ತಾಲೂಕು | ಅಕ್ಷರಸ್ಥರು (ಒಟ್ಟು) | | | ಅಕ್ಷರಸ್ಥರು (ಗ್ರಾಮೀಣ) | | | ಅಕ್ಷರಸ್ಥರು (ನಗರ) | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ಕುಂದಾಪುರ | ೧,೨೯,೩೨೬ | ೧,೨೪,೪೪೦ | ೨,೫೩,೭೬೬ | ೧,೧೭,೭೬೨ | ೧,೧೩,೫೯೮ | ೨,೩೧,೩೬೦ | ೧೧,೫೬೪ | ೧೦,೮೪೨ | ೨೨,೪೦೬ |
| ಕಾರ್ಕಳ | ೭೪,೪೨೭ | ೭೪,೭೬೦ | ೧,೪೯,೧೮೭ | ೬೩,೬೭೮ | ೬೫,೦೧೩ | ೧,೨೮,೬೯೧ | ೧೦,೭೪೯ | ೯,೭೪೭ | ೨೦,೪೯೬ |
| ಉಡುಪಿ | ೨,೦೫,೩೮೨ | ೨,೦೨,೨೪೯ | ೪,೦೭,೬೩೧ | ೧,೪೧,೮೦೫ | ೧,೪೧,೦೪೭ | ೨,೮೨,೮೫೨ | ೬೩,೫೭೭ | ೬೧,೨೦೨ | ೧೨,೪೭೭೯ |
| ಒಟ್ಟು | ೪,೦೯,೧೩೫ | ೪,೦೧,೪೪೯ | ೮,೧೦,೫೮೪ | ೩,೨೩,೨೪೫ | ೩,೧೯,೬೫೮ | ೬,೪೨,೯೦೩ | ೮೫,೮೯೦ | ೮೧,೭೯೧ | ೧,೬೭,೬೮೧ |

**ಕೋಷ್ಟಕ : ೧೩.೫ ಜನಸಂಖ್ಯೆ ೨೦೦೧ರ ಜನಗಣತಿ ಪ್ರಕಾರ (ಅನಕ್ಷರಸ್ಥರು)**

| ತಾಲೂಕು | ಅನಕ್ಷರಸ್ಥರು (ಒಟ್ಟು) | | | ಅನಕ್ಷರಸ್ಥರು (ಗ್ರಾಮೀಣ) | | | ಅನಕ್ಷರಸ್ಥರು (ನಗರ) | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ಕುಂದಾಪುರ | ೪೫,೧೨೯ | ೭೮,೫೨೫ | ೧,೨೩,೬೫೪ | ೪೨,೭೭೪ | ೭೪,೬೯೫ | ೧,೧೭,೪೬೯ | ೨,೩೫೫ | ೩,೮೩೦ | ೬,೧೮೫ |
| ಕಾರ್ಕಳ | ೨೨,೩೨೮ | ೩೪,೦೮೩ | ೫೬,೪೧೧ | ೨೦,೩೯೧ | ೩೧,೪೦೦ | ೫೧,೭೯೧ | ೧,೯೩೭ | ೨,೬೮೩ | ೪,೬೨೦ |
| ಉಡುಪಿ | ೪೫,೬೩೯ | ೭೫,೯೫೫ | ೧,೨೧,೫೯೪ | ೩೪,೬೪೬ | ೫೯,೦೮೧ | ೯೩,೭೨೭ | ೧೦,೯೯೩ | ೧೬,೮೭೪ | ೨೭,೮೬೭ |
| ಒಟ್ಟು | ೧,೧೩,೦೯೬ | ೧,೮೮,೫೬೩ | ೩,೦೧,೬೫೯ | ೯೭,೮೧೧ | ೧,೬೫,೧೭೬ | ೨,೬೨,೯೮೭ | ೧೫,೨೮೫ | ೨೩,೩೮೭ | ೩೮,೬೭೨ |

## ಪೂರ್ವ ಪ್ರಾಥಮಿಕ ಶಿಕ್ಷಣ

ಈ ಹಂತದ ಶಿಕ್ಷಣ ಸಾಮಾನ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ನೀಡಲ್ಪಡುತ್ತಿತ್ತು. ಇದರಲ್ಲಿ ಸರ್ಕಾರದ ನೇರ ಹಸ್ತಕ್ಷೇಪವಿರಲಿಲ್ಲವಾದರೂ, ಇದಕ್ಕೆ ಉತ್ತೇಜನ ಹಾಗೂ ಸಹಾಯವನ್ನು ಅದು ನೀಡುತ್ತಿತ್ತು. ಕಿಂಡರ್‌ಗಾರ್ಟನ್ ಹಾಗೂ ನರ್ಸರಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಅನುದಾನವನ್ನು ನೀಡುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ೧೯೬೫ರ ನಂತರದಲ್ಲಿ ಸರ್ಕಾರ ಸಮಾಜಕಲ್ಯಾಣ ಮಂಡಳಿಗಳ ಸಹಕಾರದೊಂದಿಗೆ ಬಾಲವಾಡಿಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ಕ್ರಮ ಕೈಗೊಂಡಿತು. ಇದಕ್ಕಾಗಿ ಈ ಹಂತದ ಶಾಲೆಗಳನ್ನು ನಡೆಸಲು ಗ್ರಾಮಾಂತರ ಪ್ರದೇಶಕ್ಕೆ ಒಟ್ಟು ಖರ್ಚಿನ ಶೇಕಡಾ ೭೦ ರಷ್ಟು ಹಾಗೂ ಪಟ್ಟಣ ಪ್ರದೇಶಗಳಿಗೆ ಶೇಕಡಾ ೫೦ ರಷ್ಟು ಅನುದಾನವನ್ನು ಸರ್ಕಾರ ನೀಡಿತು. ಇಂತಹ ಶಾಲೆಗಳಲ್ಲಿ ಸಾಮಾನ್ಯವಾಗಿ ಎಸ್ಸೆಸ್ಸೆಲ್ಸಿ ಪಾಸು ಮಾಡಿದ ಹಾಗೂ ಪೂರ್ವ ಪ್ರಾಥಮಿಕ ತರಬೇತಿ ಹೊಂದಿದ ಮಹಿಳೆಯರು ಬೋಧಕರಾಗಿದ್ದರು.

ಅವಿಭಜಿತ ಜಿಲ್ಲೆಯಲ್ಲಿ ೧೯೭೧–೭೨ರಲ್ಲಿ ಸರ್ಕಾರದಿಂದ ಅಂಗೀಕೃತವಾದ ಒಟ್ಟು ೧೭ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಒಟ್ಟು ೬೨೪ ಮಕ್ಕಳು (೨೯೮ ಗಂ ಹಾಗೂ ೩೨೬ ಹೆ) ಅಧ್ಯಯನ ಮಾಡುತ್ತಿದ್ದರು. ಈ ಶಾಲೆಗಳಲ್ಲಿ ೧೭ ಮಂದಿ ಬೋಧಕ ಸಿಬ್ಬಂದಿ (೧೬ ಹೆ–ಒಂದು ಗಂ) ಇದ್ದರು. ಜೊತೆಗೆ ಮುನಿಸಿಪಾಲಿಟಿಗಳ ಅನುದಾನದಿಂದ ನಡೆಯುತ್ತಿದ್ದ ಹಲವಾರು ಶಿಶುವಿಹಾರಗಳೂ ಕಾರ್ಯನಿರ್ವಹಿಸುತ್ತಿದ್ದವು. ಇವಲ್ಲದೆ ಇದೇ ವರ್ಷಕ್ಕೆ ಜಿಲ್ಲೆಯಲ್ಲಿ ಸಮಾಜಕಲ್ಯಾಣ ಇಲಾಖೆಯ ವತಿಯಿಂದ ನಡೆಸಲ್ಪಡುತ್ತಿದ್ದ ೨೨ ಮಹಿಳಾ ಕಲ್ಯಾಣ ಕೇಂದ್ರಗಳು ಸುಮಾರು ೧,೦೦೦ ನಿಮ್ನ ವರ್ಗದ ಮಕ್ಕಳಿಗೆ ಉಚಿತ ನರ್ಸರಿ ಶಿಕ್ಷಣವನ್ನು ಭೋಜನವನ್ನು ನೀಡುತ್ತಿದ್ದವು. ಇಂತಹ ಪ್ರತೀ ಕೇಂದ್ರವು ಒಬ್ಬ ಸಮಾಜಕಲ್ಯಾಣ ವ್ಯವಸ್ಥಾಪಕಿ ಹಾಗೂ ಒಬ್ಬ ನಿರ್ವಾಹಕಿಯರ ಆಡಳಿತದಲ್ಲಿದ್ದಿತು.

### ಎಲಿಮೆಂಟರಿ ಶಿಕ್ಷಣ

ಈ ಹಂತದ ಶಿಕ್ಷಣ ೧೯೨೦ರ ವರೆಗೆ ಸ್ಥಳೀಯ ಮಂಡಳಿಗಳು, ಮುನಿಸಿಪಲ್ ಸಂಸ್ಥೆಗಳು, ಕ್ರಿಶ್ಚಿಯನ್ ಮಿಷನರಿಗಳು ಹಾಗೂ ಇತರೆ ಖಾಸಗಿ ಸಂಸ್ಥೆಗಳಿಂದ ನೀಡಲ್ಪಡುತ್ತಿತ್ತು. ಆ ವರ್ಷ ಮದ್ರಾಸ್ ಎಲಿಮೆಂಟರಿ ಶಿಕ್ಷಣ ಕಾಯ್ದೆ (೧೯೨೦ರ ೮ನೇ ಕಾಯ್ದೆ) ಜಾರಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಗೋಚರಿಸಿದವು. ಇದರಂತೆ ಪ್ರತೀ ಜಿಲ್ಲೆಗೆ ಇವುಗಳಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ಸದಸ್ಯರನ್ನೊಳಗೊಂಡ ಜಿಲ್ಲಾ ಶೈಕ್ಷಣಿಕ ಕೌನ್ಸಿಲ್‌ಗಳು ಈ ಹಂತದ ಶಿಕ್ಷಣದ ವಿಸ್ತರಣೆ ಮಾಡುವುದು, ಇದಕ್ಕಾಗಿ ಹಲವಾರು ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳ ಸಹಕಾರ ಪಡೆಯುವುದು, ಎಲ್ಲಾ ಎಲಿಮೆಂಟರಿ ಶಾಲೆಗಳ ಅಂಗೀಕಾರವನ್ನು ನಿಯಂತ್ರಿಸುವುದು, ಇವುಗಳಿಗೆ ಅನುದಾನ ವಿತರಿಸುವುದು, ತರಬೇತಿ ಹೊಂದಿದ ಶಿಕ್ಷಕರ ಪೂರೈಕೆ, ಎಲ್ಲಾ ವಿಚಾರಗಳಲ್ಲಿ ಇಲಾಖೆಗೆ ಸಲಹೆ ನೀಡುವುದು, ಇವೇ ಮುಂತಾದ ಕಾರ್ಯಗಳನ್ನು ನಿರ್ವಹಿಸಬೇಕಿತ್ತು. ಇದೇ ವೇಳೆಗೆ ಜಿಲ್ಲಾ ಮುನಿಸಿಪಾಲಿಟಿ ಕಾಯ್ದೆ ಹಾಗೂ ಸ್ಥಳೀಯ ಬೋರ್ಡ್‌ಗಳ ಕಾಯ್ದೆಗಳು ಪರಿಷ್ಕರಣಗೊಂಡು, ಎಲಿಮೆಂಟರಿ ಶಿಕ್ಷಣದ ಮೇಲಿನ ಹತೋಟಿಯನ್ನು ಜಿಲ್ಲಾ ಬೋರ್ಡುಗಳಿಗೆ ವಹಿಸಲಾಯಿತು. ಸರಕಾರದ ವತಿಯಿಂದ ೧೯೨೩ರಲ್ಲಿ ನಡೆದ ಎರಡು ವಿಚಾರ ಸಂಕಿರಣಗಳಲ್ಲಿ ಎಲಿಮೆಂಟರಿ ಶಿಕ್ಷಣವನ್ನು ಕಾಲಕ್ರಮದಲ್ಲಿ ವಿಸ್ತರಿಸಬೇಕೆಂದೂ, ೫೦೦ ಜನಸಂಖ್ಯೆ ಇರುವ ಪ್ರತೀ ಹಳ್ಳಿಯಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಬೇಕೆಂದೂ, ಚಾಲ್ತಿಯಲ್ಲಿರುವ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕೆಂದೂ, ಸ್ಥಳೀಯ ಸಂಸ್ಥೆಗಳು ನೂತನ ಶಾಲೆಗಳನ್ನು ಪ್ರಾರಂಭಿಸಬೇಕೆಂದೂ ಅಭಿಪ್ರಾಯಪಡಲಾಯಿತು. ೧೯೨೪ರಲ್ಲಿ ಈ ಹಂತದ ಶಿಕ್ಷಣದ ಬಗ್ಗೆ ಮದರಾಸು ಪ್ರಾಂತದ ಎಲ್ಲಾ ತಾಲೂಕುಗಳಲ್ಲಿ ವಿಶೇಷ ಸಮೀಕ್ಷೆ ನಡೆಸಿ, ಇಂತಹ ಶಾಲೆಗಳಿಲ್ಲದೆಡೆಗಳಲ್ಲೆಲ್ಲ ಅವುಗಳನ್ನು ಪ್ರಾರಂಭಿಸಲು ಅನುದಾನ ನೀಡಲಾಯಿತು. ಮದರಾಸ್ ಎಲಿಮೆಂಟರಿ ಶಿಕ್ಷಣ ಕಾಯ್ದೆ ನಂತರದ ವರ್ಷಗಳಲ್ಲಿ ತಿದ್ದುಪಡಿಗೊಂಡು, ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ

ಮಕ್ಕಳೂ ಆ ವಯಸ್ಸು ಪೂರ್ಣಗೊಳಿಸುವವರೆಗೂ ಶಾಲೆಗಳಲ್ಲಿ ಮುಂದುವರೆಯಬೇಕೆಂದು ಕಡ್ಡಾಯಗೊಳಿಸಲಾಯಿತು. ಕಡ್ಡಾಯ ಶಿಕ್ಷಣ ಜಾರಿಯಾದ ಎಲ್ಲಾ ಪ್ರದೇಶಗಳಲ್ಲಿ ಈ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಇದನ್ನು ಪಾಲಿಸದ ತಾಯ್ತಂದೆಗಳ ಮೇಲೆ ದಂಡ ವಿಧಿಸುವ ಅಧಿಕಾರವನ್ನು ಮುನಿಸಿಪಾಲಿಟಿಗಳ ಅಧ್ಯಕ್ಷರಿಗೂ ಹೊಸದಾಗಿ ನಿರ್ಮಿತವಾಗಿದ್ದ ಜಿಲ್ಲಾ ಹಾಗೂ ತಾಲೂಕು ಮಂಡಳಿಗಳ ಅಧ್ಯಕ್ಷರಿಗೂ ನೀಡಲಾಯಿತು. ಈ ಅಧಿಕಾರವನ್ನು ೧೯೪೬ರಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಸಮರ್ಥವಾಗಿ ಕಾರ್ಯನಿರ್ವಹಿಸದ ಅಶಕ್ತ ಎಲಿಮೆಂಟರಿ ಶಾಲೆಗಳನ್ನು ಮುಚ್ಚಿ, ಅವುಗಳ ಬದಲು ಒಂದರಿಂದ ಐದನೇ ತರಗತಿಗಳುಳ್ಳ ಹಾಗೂ ಪೂರ್ಣ ಪರಿಕರಗಳನ್ನು ಹೊಂದಿದ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಜಿಲ್ಲಾ ಶಿಕ್ಷಣ ಕೌನ್ಸಿಲ್ ಹಾಗೂ ತಾಲೂಕು ಸಲಹಾ ಕೌನ್ಸಿಲ್‌ಗಳ ಅಧಿಕಾರವನ್ನು ಶಿಕ್ಷಣ ಇಲಾಖೆಗೆ ಪ್ರದತ್ತ ಮಾಡಲಾಯಿತು. ಈ ಕ್ರಮಗಳು ಫಲಕಾರಿಯಾಗಿ ಐದೂ ತರಗತಿಗಳಲ್ಲಿ ಶೈಕ್ಷಣಿಕ ಪ್ರಗತಿಯು ಇಲಾಖೆಯ ನಿರೀಕ್ಷೆಗಿಂತಲೂ ಉತ್ತಮಗೊಂಡಿತು.

ಗ್ರಾಮೀಣ ಜನರ ದೈನಂದಿನ ಜೀವನಮಟ್ಟಕ್ಕೆ ಹೆಚ್ಚು ಸಹಕಾರಿಯಾಗುವಂತೆ ಎಲಿಮೆಂಟರಿ ಶಿಕ್ಷಣ ಪದ್ಧತಿಯನ್ನು ಅರ್ಥಬದ್ಧವಾಗಿಸುವ ಯೋಜನೆಯೊಂದನ್ನು ೧೯೨೭ರಲ್ಲಿಯೇ ಮುಂದೆ ಡಿಪಿಐ ಆದ ಸರ್. ಮೆವರೆಲ್ ಸ್ತೆಥಂ ರೂಪಿಸಿದ್ದರು. ಇದಕ್ಕಾಗಿ ೧೯೪೦ರಲ್ಲಿ ಒಂದು ವಿಶೇಷ ಪಠ್ಯಕ್ರಮವನ್ನು ಸಿದ್ಧಪಡಿಸಲಾಯಿತು. ಇದರಂತೆ ಲೋಯರ್ ಎಲಿಮೆಂಟರಿ ತರಗತಿಗಳಲ್ಲಿ ಮಾತೃಭಾಷೆ ಹಾಗೂ ಕರಕುಶಲ ಕಲೆಗಳ ಬೋಧನೆಗೆ ಮತ್ತು ಹೈಯರ್ ತರಗತಿಯಲ್ಲಿ ವೃತ್ತಿ ಶಿಕ್ಷಣ ಪೂರ್ವದ ಯಾವುದಾದರೂ ಒಂದು ವಿಷಯದ ಬೋಧನೆಗೆ ಒತ್ತು ನೀಡಲಾಯಿತು. ಹೆಣ್ಣುಮಕ್ಕಳಿಗೆ ವಿಶೇಷವಾಗಿ ಗೃಹ ಕಲೆ ಹಾಗೂ ಶುಚಿ ಮುಂತಾದ ದಿನನಿತ್ಯದ ವಿಷಯಗಳನ್ನು ಹಾಗೂ ಎಲ್ಲರಿಗೂ ತೋಟಗಾರಿಕೆ, ಸಂಗೀತ ಮುಂತಾದ ವಿಷಯಗಳನ್ನು ಕಡ್ಡಾಯಗೊಳಿಸಲಾಯಿತು. ಅಲ್ಲದೆ, ಭೂಗೋಳ, ಚರಿತ್ರೆ, ಗಣಿತ, ಪ್ರಕೃತಿ ಅಧ್ಯಯನ ಮತ್ತು ದೈಹಿಕ ಶಿಕ್ಷಣಗಳನ್ನು ಬೋಧನಾ ವಿಷಯಗಳಾಗಿ ಪಠ್ಯದಲ್ಲಿ ಸೇರಿಸಲಾಯಿತು. ಕರಕುಶಲ ವಿಭಾಗದಲ್ಲಿ ನೇಯ್ಗೆ, ಚಾಪೆ ತಯಾರಿಕೆ, ಜೇನು ಸಾಕಣೆ, ಕುಂಬಾರಿಕೆ, ಲೇಸ್ ಹಾಗೂ ಎಂಬ್ರಾಯಿಡರಿಗಳನ್ನೂ ಮತ್ತು ಐಚ್ಛಿಕ ವಿಷಯಗಳಡಿ ಇಂಗ್ಲಿಷ್, ಪ್ರಥಮ ಚಿಕಿತ್ಸೆ ಹಾಗೂ ಒಂದು ದ್ವಿತೀಯ ಭಾಷೆಯನ್ನು ಸೇರಿಸಲಾಯಿತು. ಇವುಗಳನ್ನು ಬೋಧಿಸಲು ಶಿಕ್ಷಕರಿಗೆ ಪುನರ್ಮನನ ಕಾರ್ಯಾಗಾರಗಳನ್ನು ನಡೆಸಲಾಯಿತು.

ಅವಿಭಜಿತ ಜಿಲ್ಲೆಯಲ್ಲಿ ಈ ಹಂತದ ಶಿಕ್ಷಣದ ಪ್ರಗತಿ ಗಮನಾರ್ಹವಾಗಿದ್ದಿತು. ೧೯೩೩ ರಿಂದ ೩೪ರಲ್ಲಿ ಕ್ರಮವಾಗಿ ಒಂದು ಸಾವಿರದಿಂದ ಎರಡು ಸಾವಿರ ಜನಸಂಖ್ಯೆಯ ಶೇಕಡಾ ೯೪ ಹಳ್ಳಿಗಳು, ೫೦೦ ರಿಂದ ೧,೦೦೦ ಜನಸಂಖ್ಯೆಯ ಶೇಕಡಾ ೯೮ ಹಳ್ಳಿಗಳು ಹಾಗೂ ೨೦೦ ರಿಂದ ೫೦೦ ಜನಸಂಖ್ಯೆಯ ಶೇಕಡಾ. ೬೭ ಹಳ್ಳಿಗಳು ಎಲಿಮೆಂಟರಿ ಶಾಲೆಗಳನ್ನು ಹೊಂದಿದ್ದವು. ೧೯೩೪ರಲ್ಲಿ ಜಿಲ್ಲೆಯಲ್ಲಿ ೧೬,೦೧೧ ಮಕ್ಕಳನ್ನುಳ್ಳ ಒಟ್ಟು ೪೩೭ ಎಲಿಮೆಂಟರಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದರೆ, ೧೯೫೪ರಲ್ಲಿ ಇವುಗಳ ಸಂಖ್ಯೆ ೧,೧೭೯ ಆಗಿ, ಒಟ್ಟು ಮಕ್ಕಳ ಸಂಖ್ಯೆ ೮೬,೩೭೯ ಆಗಿದ್ದಿತು.

ಅವಿಭಜಿತ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣವು ಎರಡು ಹಂತಗಳನ್ನು ಹೊಂದಿದ್ದು, ಲೋಯರ್ ಎಲಿಮೆಂಟರಿ ಶಾಲೆಗಳಲ್ಲಿ ಒಂದರಿಂದ ಐದು ಹಾಗೂ ಹೈಯರ್ ಎಲಿಮೆಂಟರಿ ಶಾಲೆ (ಮಿಡಲ್‌ಸ್ಕೂಲ್)ಗಳಲ್ಲಿ ಒಂದರಿಂದ ಎಂಟರವರೆಗೆ ತರಗತಿಗಳಿದ್ದವು. ೧೯೫೮ರಲ್ಲಿ ಶಿಕ್ಷಣ ಇಲಾಖೆ ನಡೆಸಿದ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ಒಟ್ಟು ೧,೫೦೨ ಎಲಿಮೆಂಟರಿ ಶಾಲೆಗಳಿದ್ದು, ಇವುಗಳಲ್ಲಿ ೧೧೫ ಪ್ರಾಥಮಿಕ ಹಾಗೂ ೬೭ ಮಾಧ್ಯಮಿಕ ಶಾಲೆಗಳು ನಗರ ಪ್ರದೇಶಗಳಲ್ಲಿಯೂ, ೧,೦೯೬ ಪ್ರಾಥಮಿಕ ಹಾಗೂ ೨೨೪ ಮಾಧ್ಯಮಿಕ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದವು. ಇವುಗಳ ಸವಿವರ ಅಂಕಿ ಅಂಶಗಳನ್ನು ಕೋಷ್ಟಕ ೧೩.೬ರಲ್ಲಿ ನೀಡಲಾಗಿದೆ.

**ಕೋಷ್ಟಕ : ೧೩.೬**

| ಶಾಲೆಗಳ ಮಾದರಿ | ಸಂಖ್ಯೆ | ಗಂಡು | ಹೆಣ್ಣು | ಒಟ್ಟು |
|---|---|---|---|---|
| ನಗರ | | | | |
| ಲೋಯರ್ ಎಲಿಮೆಂಟರಿ (ಪ್ರೈಮರಿ) | ೧೧೫ | ೧೫,೭೯೪ | ೧೨,೩೫೮ | ೨೮,೧೫೨ |
| ಹೈಯರ್ ಎಲಿಮೆಂಟರಿ (ಮಿಡ್ಲ್) | ೬೭ | ೬,೩೪೮ | ೪,೨೫೯ | ೧೦,೬೦೭ |
| ಗ್ರಾಮೀಣ | | | | |
| ಲೋಯರ್ ಎಲಿಮೆಂಟರಿ (ಪ್ರೈಮರಿ) | ೧,೦೯೬ | ೭೭,೧೯೯ | ೫೦,೧೭೦ | ೧,೨೭,೩೬೯ |
| ಹೈಯರ್ ಎಲಿಮೆಂಟರಿ (ಮಿಡ್ಲ್) | ೨೨೪ | ೧೩,೭೮೦ | ೬,೮೪೧ | ೨೦,೬೨೧ |
| **ಒಟ್ಟು** | **೧,೫೦೨** | **೧,೧೩,೧೨೧** | **೭೩,೬೨೮** | **೧,೮೬,೭೪೯** |

***ಆಧಾರ: ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ ೧೯೭೮***

ನೂತನ ಯೋಜನೆಯಂತೆ ಮಾಧ್ಯಮಿಕ ಶಾಲೆಗಳನ್ನು ರದ್ದುಪಡಿಸಿ, ಇವುಗಳನ್ನು ಹೈಯರ್ ಎಲಿಮೆಂಟರಿ ಶಾಲೆಗಳೊಡನೆ ವಿಲೀನಗೊಳಿಸಲಾಯಿತು. ಜಿಲ್ಲೆಯ ಹಲವು ಪ್ರೌಢಶಾಲೆಗಳಲ್ಲಿ ಆರರಿಂದ ಎಂಟರವರೆಗಿನ ತರಗತಿಗಳು ಸೇರಿದ್ದವು.

## ಕಿಂಡರ್ ಗಾರ್ಟನ್ ವ್ಯವಸ್ಥೆ

ಪೂರ್ವ ಪ್ರಾಥಮಿಕ ಅಥವಾ ಎಲಿಮೆಂಟರಿ ಹಂತದ ಶಿಕ್ಷಣಕ್ಕೆ ಆಧುನಿಕ ಹೆಸರೇ 'ಕಿಂಡರ್ ಗಾರ್ಟನ್'. ಈ ಪದ ಹಳೆಯದಾದರೂ ಈ ವ್ಯವಸ್ಥೆ ಜನಪ್ರಿಯತೆ ಗಳಿಸಿದ್ದು, ೧೯೭೦ ದಶಕದ ನಂತರವೇ. ವೃತ್ತಿ ಶಿಕ್ಷಣದಷ್ಟೇ ಪ್ರಾಮುಖ್ಯತೆ ಹಾಗೂ ಸ್ಪರ್ಧಾತ್ಮಕ ಮನೋಭಾವ ಮೂಡಿಸಿರುವ ಈ ಹಂತದ ಶಿಕ್ಷಣ ಅಷ್ಟೇ ದುಬಾರಿ ಕೂಡ ಆಗಿದೆ. ಮೂರು ವರ್ಷ ಹತ್ತು ತಿಂಗಳು ತುಂಬಿದ ಮಕ್ಕಳನ್ನು ಆಂಗ್ಲ ಮಾಧ್ಯಮದ 'ಲೋಯರ್ ಕಿಂಡರ್ ಗಾರ್ಟನ್' (ಎಲ್.ಕೆ.ಜಿ.) ಹಾಗೂ ತದನಂತರದ 'ಅಪ್ಪರ್ ಕಿಂಡರ್ ಗಾರ್ಟನ್' (ಯು.ಕೆ.ಜಿ.) ತರಗತಿಗಳಿಗೆ ಸೇರಿಸಲಾಗುತ್ತದೆ. ಐದು ವರ್ಷ ಹತ್ತು ತಿಂಗಳು ತುಂಬಿದ ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲಾಗುತ್ತದೆ. ಈ ವಯೋಮಾನ ಮುಟ್ಟದ ಮಕ್ಕಳನ್ನು ಯುಕೆಜಿ ನಂತರ 'ಪ್ರಿಪ್ರೇಟರಿ' ತರಗತಿಗೆ ಸೇರಿಸಲಾಗುತ್ತದೆ. ಸಾಮಾನ್ಯವಾಗಿ ಆಂಗ್ಲ ಹೆಸರುಗಳನ್ನು ಹೊಂದಿರುವ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧನೆ ನಡೆಯುತ್ತದೆ. ತಮ್ಮ ಮಕ್ಕಳ ಶೈಕ್ಷಣಿಕ ಭವಿಷ್ಯದ ಬಗ್ಗೆ ಕಾಳಜಿ ಹಾಗೂ ಆತಂಕ ಹೊಂದಿದ ತಾಯ್ತಂದೆಗಳು ಅತೀ ಖ್ಯಾತಿವೆತ್ತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಹಾತೊರೆಯುವುದೂ, ಅವುಗಳಲ್ಲಿ ಅರ್ಜಿ ಪಡೆಯಲು ಸರತಿಯ ಸಾಲು ಸೇರುವುದೂ, ಶಾಲಾ ಆಡಳಿತ ಮಂಡಳಿಯಿಂದ ಮೌಖಿಕ ಪರೀಕ್ಷೆಗೆ ಒಳಪಡುವುದೂ ಸಾಮಾನ್ಯ ಸಂಗತಿಗಳಾಗಿವೆ. ಜನ ಸಾಮಾನ್ಯರ ಮಕ್ಕಳಿಗಾಗಿ ಸರಕಾರ ಅಂಗನವಾಡಿಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಅನುಸರಿಸಲಾಗುತ್ತದೆ.

## ಪ್ರಾಥಮಿಕ ಶಿಕ್ಷಣ

**ಕಿರಿಯ ಪ್ರಾಥಮಿಕ ಶಾಲೆಗಳು** : ೧೯೫೭-೫೮ ರಿಂದ ೧೯೬೭-೬೮ರ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣ ಗಮನಾರ್ಹ ಪ್ರಗತಿ ಸಾಧಿಸಿತು. ಈ ಹಂತದ ಶಿಕ್ಷಣದಡಿ ಒಂದರಿಂದ ನಾಲ್ಕನೇ ತರಗತಿಗಳ ಲೋಯರ್ ಅಥವಾ ಜ್ಯೂನಿಯರ್ ಎಲಿಮೆಂಟರಿ ಹಾಗೂ ಒಂದರಿಂದ ಏಳು ಅಥವಾ ಐದರಿಂದ ಎಂಟನೇ ತರಗತಿ ಹೊಂದಿದ ಸೀನಿಯರ್ ಅಥವಾ ಹೈಯರ್ ಎಲಿಮೆಂಟರಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ೧೯೬೭-೬೮ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು ೪೧೧ (೩೦೮ ಸರಕಾರಿ, ೯೭ ಸ್ಥಳೀಯ ಮಂಡಳಿ ಹಾಗೂ ಆರು ಖಾಸಗಿ) ಜ್ಯೂನಿಯರ್ ಎಲಿಮೆಂಟರಿ ಶಾಲೆಗಳಲ್ಲಿ ಒಟ್ಟು ೨,೦೧,೧೪೬ (೧,೧೪,೧೪೬ ಗಂ-೮೭,೦೦೦ ಹೆ) ಮಂದಿ ಮಕ್ಕಳಿದ್ದರು. ಇದರಂತೆ, ಪ್ರತೀ ೧೦,೦೦೦ ಜನಸಂಖ್ಯೆಗೆ ೧,೧೨೬

ಮಂದಿ ಜ್ಯೂನಿಯರ್ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದರು. ಇವುಗಳ ಅಂಕಿಅಂಶಗಳನ್ನು ಕೆಳಗೆ ನೀಡಿರುವ ಕೋಷ್ಟಕಗಳಲ್ಲಿ ಕಾಣಬಹುದು.

**ಕೋಷ್ಟಕ: ೧೩.೭ ೨೦೦೫-೦೬ನೇ ಸಾಲಿಗೆ ಕಿರಿಯ ಪ್ರಾಥಮಿಕ ಶಾಲೆಗಳ ವಿವರ**

| ಕ್ರ.ಸಂ | ತಾಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಉಡುಪಿ | ೫೨ | ೧೧ | ೯ | ೨,೦೫೫ | ೧,೮೮೧ | ೭೧ | ೧೧೬ |
| ೨ | ಕಾರ್ಕಳ | ೬೫ | ೩ | ೯ | ೧,೪೭೬ | ೧,೪೦೮ | ೫೯ | ೮೧ |
| ೩ | ಕುಂದಾಪುರ | ೧೫೧ | ೩ | ೯ | ೩,೮೬೦ | ೩,೬೭೧ | ೨೩೪ | ೧೪೧ |
| | ಒಟ್ಟು | ೨೬೮ | ೧೭ | ೨೭ | ೭,೩೯೧ | ೬,೯೬೦ | ೩೬೪ | ೩೩೮ |

**ಹಿರಿಯ ಪ್ರಾಥಮಿಕ ಶಾಲೆಗಳು :** ಜಿಲ್ಲೆಯಲ್ಲಿ ೧೯೬೭-೬೮ರಲ್ಲಿ ಒಟ್ಟು ೧,೧೫೫ ಹಿರಿಯ ಅಥವಾ ಹೈಯರ್ ಪ್ರೈಮರಿ ಶಾಲೆಗಳಿದ್ದು, ಇವುಗಳಲ್ಲಿ ೭೮ ಸರಕಾರಿ, ೬೦೬ ಸ್ಥಳೀಯ ಸಂಸ್ಥೆಗಳ ಹಾಗೂ ೪೭೧ ಖಾಸಗಿ ಶಾಲೆಗಳಿದ್ದವು. ಈ ಎಲ್ಲಾ ಶಾಲೆಗಳಲ್ಲಿ ಒಟ್ಟು ೮೪,೦೫೪ (೫೦,೧೩೩ ಗಂಡು ಮತ್ತು ೩೩,೯೨೧ ಹೆಣ್ಣು) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಪ್ರತೀ ೧೦,೦೦೦ ಜನಸಂಖ್ಯೆಯಲ್ಲಿ ೪೭೦ ಮಕ್ಕಳು ಈ ಶಾಲೆಗಳಲ್ಲಿದ್ದರು. ಸವಿವರ ಅಂಕಿಅಂಶಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ: ೧೩.೮ ೨೦೦೫-೦೬ನೇ ಸಾಲಿಗೆ ಹಿರಿಯ ಪ್ರಾಥಮಿಕ ಶಾಲೆಗಳ ವಿವರ**

| ಕ್ರ.ಸಂ. | ತಾಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ ರಹಿತ | ಅನುದಾನ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಉಡುಪಿ | ೧೦೨ | ೧೪೦ | ೨೯ | ೨೭,೪೨೩ | ೨೫,೯೩೪ | ೬೩೬ | ೧,೨೭೮ |
| ೨ | ಕಾರ್ಕಳ | ೮೨ | ೪೦ | ೭ | ೧೨,೩೫೮ | ೧೧,೪೩೮ | ೩೦೨ | ೪೭೦ |
| ೩ | ಕುಂದಾಪುರ | ೧೫೮ | ೩೪ | ೧೬ | ೨೧,೭೪೨ | ೨೦,೩೫೬ | ೮೦೦ | ೭೨೭ |
| | ಒಟ್ಟು | ೩೪೨ | ೨೧೪ | ೫೨ | ೬೧,೫೨೩ | ೫೭,೭೨೮ | ೧,೭೩೮ | ೨,೪೭೫ |

ಕಾಲಕ್ರಮದಲ್ಲಿ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದ ಶಾಲೆಗಳನ್ನು ಸರಕಾರವೇ ವಹಿಸಿಕೊಂಡಿತು. ಹಾಗಾಗಿ ೧೯೭೧-೭೨ರ ವೇಳೆಗೆ ಜಿಲ್ಲೆಯಲ್ಲಿ ೪೮೯ ಕಿರಿಯ ಹಾಗೂ ೧,೧೬೦ ಹಿರಿಯ ಪ್ರಾಥಮಿಕ ಶಾಲೆಗಳಿದ್ದವು. ಇವುಗಳ ಪೈಕಿ ಆರು ಕಿರಿಯ ಹಾಗೂ ೪೮೦ ಹಿರಿಯ ಪ್ರಾಥಮಿಕ ಶಾಲೆಗಳು ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದವು. ಈ ವರ್ಷ ಒಂದರಿಂದ ನಾಲ್ಕನೇ ತರಗತಿಗಳಲ್ಲಿ ೧,೨೬,೯೩೨ ಗಂಡು ಮತ್ತು ೯೬,೫೯೪ ಹೆಣ್ಣು ಹಾಗೂ ಐದರಿಂದ ಏಳರವರೆಗಿನ ತರಗತಿಗಳಲ್ಲಿ ೫೭,೯೪೪ ಗಂಡು ಮತ್ತು ೩೯,೯೯೦ ಹೆಣ್ಣು ಮಕ್ಕಳು ದಾಖಲಾಗಿದ್ದರು. ಒಟ್ಟು ೬೦೭ ಮಂದಿ ಶಿಕ್ಷಕರು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರಲ್ಲಿ ೪೦೩ ಶಿಕ್ಷಕರು ಮತ್ತು ೧೩೩ ಶಿಕ್ಷಕಿಯರು ತರಬೇತಿ ಹೊಂದಿದವರಾಗಿದ್ದರು ಹಾಗೂ ಅನುಕ್ರಮವಾಗಿ ೬೧, ೧೦ ತರಬೇತಿ ಹೊಂದಿರಲಿಲ್ಲ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೭,೨೦೦ ಬೋಧಕ ಸಿಬ್ಬಂದಿ ಇದ್ದು, ಇವರಲ್ಲಿ ೪,೦೧೮ ಪುರುಷರು ಹಾಗೂ ೨,೯೦೫ ಮಹಿಳೆಯರು ತರಬೇತಿ ಹೊಂದಿದ್ದರು ಮತ್ತು ೧೬೯ ಪುರುಷ ಹಾಗೂ ೧೦೮ ಮಹಿಳಾ ಸಿಬ್ಬಂದಿ ತರಬೇತಿ ಹೊಂದಿರಲಿಲ್ಲ. ಒಟ್ಟು ಶಿಕ್ಷಕರ ಪೈಕಿ ತರಬೇತಿ ಹೊಂದಿದ ಶಿಕ್ಷಕರ ಶೇಕಡಾವಾರು ಸಂಖ್ಯೆ ೯೫.೫ ಆಗಿದ್ದಿತು. ಸರ್ಕಾರಿ ಶಾಲೆಯಲ್ಲಿನ ೧ರಿಂದ ೭ನೇ ತರಗತಿಯ ಎಲ್ಲಾ (ಗಂಡು – ಹೆಣ್ಣು) ಮಕ್ಕಳಿಗೆ ಹಾಗೂ ೮ ರಿಂದ ೧೦ನೇ ತರಗತಿಯ ಎಲ್ಲಾ ಹೆಣ್ಣುಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳನ್ನು ನೀಡುವ ಸರ್ಕಾರಿ ಯೋಜನೆಯಂತೆ ಜಿಲ್ಲೆಯ ಫಲಾನುಭವಿಗಳ ತಾಲೂಕುವಾರು ವಿವರಗಳನ್ನು ಕೋಷ್ಟಕ ೧೩.೯ ಮತ್ತು ೧೩.೧೦ರಲ್ಲಿ ನೀಡಲಾಗಿದೆ.

**ಕೋಷ್ಟಕ: ೧೩.೯**

**೨೦೦೫-೦೬ನೇ ಸಾಲಿಗೆ ಉಚಿತ ಪಠ್ಯಪುಸ್ತಕದ ಫಲಾನುಭವಿಗಳ ತಾಲೂಕುವಾರು ವಿವರ***

| ಕ್ರ.ಸಂ. | ತಾಲೂಕು | ಒಟ್ಟು ಫಲಾನುಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಉಡುಪಿ | ೧೦,೨೭೪ | ೧೩,೮೦೭ |
| ೨ | ಕಾರ್ಕಳ | ೮,೧೧೫ | ೧೦,೯೨೧ |
| ೩ | ಕುಂದಾಪುರ | ೧೯,೪೭೦ | ೨೪,೮೦೧ |
| | ಒಟ್ಟು | ೩೭,೮೫೯ | ೪೯,೫೨೯ |

* ಸರ್ಕಾರಿ ಶಾಲೆಯಲ್ಲಿನ ೧ ರಿಂದ ೭ನೇ ತರಗತಿಯವರೆಗಿನ ಎಲ್ಲ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಹಾಗೂ ೮ ರಿಂದ ೧೦ನೇ ತರಗತಿಯಲ್ಲಿನ ಎಲ್ಲ ಹೆಣ್ಣು ಮಕ್ಕಳಿಗೆ

**ಕೋಷ್ಟಕ : ೧೩.೧೦**

**೨೦೦೫-೦೬ನೇ ಸಾಲಿಗೆ ಉಚಿತ ಸಮವಸ್ತ್ರ ಫಲಾನುಭವಿಗಳ ತಾಲೂಕುವಾರು ವಿವರ***

| ಕ್ರ.ಸಂ | ತಾಲೂಕು | ಒಟ್ಟು ಫಲಾನುಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಉಡುಪಿ | ೧೦,೨೭೪ | ೧೩,೮೦೭ |
| ೨ | ಕಾರ್ಕಳ | ೮,೧೧೫ | ೧೦,೯೨೧ |
| ೩ | ಕುಂದಾಪುರ | ೧೯,೪೭೦ | ೨೪,೮೦೧ |
| | ಒಟ್ಟು | ೩೭,೮೫೯ | ೪೯,೫೨೯ |

* ಸರ್ಕಾರಿ ಶಾಲೆಯಲ್ಲಿನ ೧ ರಿಂದ ೭ನೇ ತರಗತಿಯವರೆಗಿನ ಎಲ್ಲ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಹಾಗೂ ೮ ರಿಂದ ೧೦ನೇ ತರಗತಿಯಲ್ಲಿನ ಎಲ್ಲ ಹೆಣ್ಣು ಮಕ್ಕಳಿಗೆ

## ಕಡ್ಡಾಯ ಪ್ರಾಥಮಿಕ ಶಿಕ್ಷಣ

ಮದರಾಸ್ ಪ್ರಾಥಮಿಕ ಶಿಕ್ಷಣ ಕಾಯ್ದೆ ೧೯೩೪ರಲ್ಲಿ ತಿದ್ದುಪಡಿಗೊಂಡಾಗ, ಶಾಲಾ ವಯಸ್ಸಿನ ಯಾವುದೇ ಮಗು ಶಾಲೆಗೆ ಹಾಜರಾಗುವಂತೆ ಹಾಗೂ ಕಲಿಕೆಯ ವಯಸ್ಸು ದಾಟುವವರೆಗೆ ಶಾಲೆಯಿಂದ ನಿರ್ಗಮಿಸದಂತೆ ಗಮನಹರಿಸಲು ಪೋಷಕರಿಗೆ ಕಡ್ಡಾಯ ಮಾಡಲಾಯಿತು. ಈ ಯೋಜನೆ ರಾಜ್ಯದ ತೀರಪ್ರದೇಶಗಳ ಜಿಲ್ಲೆಗಳಲ್ಲಿ ೧೯೪೫-೪೬ರಲ್ಲಿ ಜಾರಿಯಾಯಿತು. ೧೯೫೭ರ ವೇಳೆಗೆ ಜಿಲ್ಲೆಯ ಒಂಬತ್ತು ನಗರ ಹಾಗೂ ೧೮೬ ಗ್ರಾಮೀಣ ಶಾಲೆಗಳಲ್ಲಿ ಅಂದರೆ ಎರಡು ನಗರ ಹಾಗೂ ೨೨೨ ಗ್ರಾಮಗಳಲ್ಲಿ ಜಾರಿಯಲ್ಲಿದ್ದಿತು. ಈ ಕಾಯ್ದೆಯಂತೆ ನಗರ ಪ್ರದೇಶದ ಶಾಲೆಗಳಲ್ಲಿ ಒಟ್ಟು ೧,೧೫೨ ಗಂಡು ಮತ್ತು ೯೬೫ ಹೆಣ್ಣು ಮಕ್ಕಳು ದಾಖಲಾದರೆ, ಗ್ರಾಮೀಣ ಪ್ರದೇಶಗಳಲ್ಲಿ ೧೬,೬೮೪ ಗಂಡು ಮತ್ತು ೧೧,೭೫೩ ಹೆಣ್ಣು ಮಕ್ಕಳು ದಾಖಲಾಗಿ, ಇದರ ಶೇಕಡಾವಾರು ದಾಖಲಾತಿ ೯೮.೭ ರಷ್ಟಿತ್ತು.

## ೧೯೬೧ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ

ಒಂದನೇ ಆಗಸ್ಟ್ ೧೯೬೧ರಲ್ಲಿ ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯ್ದೆ ರಾಜ್ಯಾದ್ಯಂತ ಈ ಕೆಳಕಂಡ ನಿಯಮಗಳನ್ನು ಒಳಗೊಂಡು ಜಾರಿಯಾಯಿತು.

ಅ) ಪ್ರತೀ ಮಗುವಿರುವ ಮನೆಯ ಒಂದು ಮೈಲಿ ಫಾಸಲೆಯಲ್ಲಿ ಪ್ರಾಥಮಿಕ ಶಾಲೆಗಳ ಸ್ಥಾಪನೆ.

ಆ) ಸರಕಾರದಿಂದ ಅಂಗೀಕೃತ ಶಾಲೆಯಲ್ಲಿ ತಮ್ಮ ಮಗು ದಾಖಲಾಗುವಂತೆ ಮಾಡುವ ಹೊಣೆ ಪೋಷಕರಿಗೆ ವಹಿಸುವುದು.

ಇ) ಮಕ್ಕಳ ದಾಖಲಾತಿ ಪರಿಶೀಲನೆಗೆ ಹಾಜರಾತಿ ಅಧಿಕಾರಿಯನ್ನು ನೇಮಿಸುವುದು.

ಈ) ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡಲು ಬಾಲ ಕಾರ್ಮಿಕ ಪಿಡುಗನ್ನು ತಡೆಗಟ್ಟುವುದು.

ಉ) ಈ ಕಾಯ್ದೆಯಡಿಯ ಪ್ರಕರಣಗಳನ್ನು ಪರಿಶೀಲಿಸಲು ಪ್ರಾಥಮಿಕ ಶಾಲೆ ಪಂಚಾಯ್ತಿ ನ್ಯಾಯಾಲಯಗಳನ್ನು ಸ್ಥಾಪಿಸುವುದು.

ವರ್ಷದ ಮೇ ೨೨ ರಂದು ಐದು ವರ್ಷ ಹತ್ತು ತಿಂಗಳು ಪೂರ್ಣಗೊಳಿಸುವ ಪ್ರತೀ ಮಗುವು ಒಂದು ಅಂಗೀಕೃತ ಶಾಲೆಗೆ ದಾಖಲಾಗಬೇಕು. ಐದು ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳಿಗೂ ಸ್ವಪ್ರೇರಣೆಯಿಂದ ಬಂದಲ್ಲಿ ಒಂದನೇ ತರಗತಿಗೆ ದಾಖಲಾತಿ ನೀಡಬಹುದು. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಏಪ್ರಿಲ್ ೧೯೬೧ರಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಅಂಗೀಕೃತವಾದ ಹಲವಾರು ಶಿಫಾರಸ್ಸುಗಳು ಇಂತಿದ್ದವು. i) ಕನಿಷ್ಠ ೩೦೦ ಜನಸಂಖ್ಯೆಯ ಪ್ರತೀ ಗ್ರಾಮದಲ್ಲಿ ಶಾಲೆಗಳನ್ನು ಪ್ರಾರಂಭಿಸಬೇಕು. ii) ಚಾಲ್ತಿಯಲ್ಲಿದ್ದ ಶಾಲೆಗಳಲ್ಲಿ ಅವಶ್ಯವಿದ್ದರೆ, ಹೆಚ್ಚಿನ ಶಿಕ್ಷಕರನ್ನು ನೇಮಿಸಬೇಕು. iii) ಶಾಲೆಯ ದಾಖಲಾತಿ ಉತ್ತಮಪಡಿಸಲು ಉಚಿತ ಮಧ್ಯಾಹ್ನ ಭೋಜನ, ಪುಸ್ತಕ ಹಾಗೂ ವಿದ್ಯಾರ್ಥಿ ವೇತನಗಳನ್ನು ನೀಡಬೇಕು. iv) ಪ್ರತೀ ಶಾಲೆಗೆ ಶಾಲಾ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಬೇಕು. v) ತಂತಮ್ಮ ಪ್ರದೇಶಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿ ಮಾಡುವ ಹೊಣೆಗಾರಿಕೆಯನ್ನು ತಾಲೂಕು ಅಭಿವೃದ್ಧಿ ಮಂಡಳಿ ಹಾಗೂ ಮುನಿಸಿಪಾಲಿಟಿಗಳಿಗೆ ವಹಿಸಬೇಕು. ಮೇಲ್ಕಂಡಂತೆ ಶಿಫಾರಸ್ಸುಗಳನ್ನು ಅಳವಡಿಸಿದ ಸರಕಾರ ಗಣನೀಯ ಶೈಕ್ಷಣಿಕ ಪ್ರಗತಿ ಸಾಧಿಸಿದ್ದು, ಅದರ ಪ್ರಸ್ತುತದ ಅಂಕಿ ಅಂಶಗಳ ವಿವರಗಳನ್ನು ಕೆಳಗಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

**ಕೋಷ್ಟಕ : ೧೩.೧೧**

**೨೦೦೫–೦೬ನೇ ಸಾಲಿಗೆ ಮಧ್ಯಾಹ್ನ ಭೋಜನ ಫಲಾನುಭವಿಗಳ ತಾಲೂಕುವಾರು ವಿವರ***

| ಕ್ರ.ಸಂ. | ತಾಲೂಕು | ಒಟ್ಟು ಫಲಾನುಭವಿಗಳ ಸಂಖ್ಯೆ | |
|---|---|---|---|
| | | ಗಂಡು | ಹೆಣ್ಣು |
| ೧ | ಉಡುಪಿ | ೨೩,೭೦೫ | ೨೧,೭೪೦ |
| ೨ | ಕಾರ್ಕಳ | ೧೦,೧೫೧ | ೧೧,೦೭೨ |
| ೩ | ಕುಂದಾಪುರ | ೨೧,೬೩೦ | ೨೦,೭೧೫ |
| | ಒಟ್ಟು | ೫೫,೪೮೬ | ೫೩,೫೨೭ |

* ಸರ್ಕಾರಿ ಶಾಲೆಯಲ್ಲಿನ ೧ ರಿಂದ ೭ನೇ ತರಗತಿಯವರೆಗಿನ ಎಲ್ಲ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಹಾಗೂ ೮ ರಿಂದ ೧೦ನೇ ತರಗತಿಯಲ್ಲಿನ ಎಲ್ಲ ಹೆಣ್ಣು ಮಕ್ಕಳಿಗೆ

**ಕೋಷ್ಟಕ. ೧೩.೧೨ : ೨೦೦೫–೦೬ನೇ ಸಾಲಿಗೆ ಜಿಲ್ಲೆಯಲ್ಲಿ ಒಂದರಿಂದ ಏಳನೇ ತರಗತಿಯ ತಾಲೂಕುವಾರು ಮಕ್ಕಳ ಸಂಖ್ಯೆ**

| ತಾಲೂಕು | ತರಗತಿ ಒಂದು | | ತರಗತಿ ಎರಡು | | ತರಗತಿ ಮೂರು | | ತರಗತಿ ನಾಲ್ಕು | | ತರಗತಿ ಐದು | | ತರಗತಿ ಆರು | | ತರಗತಿ ಏಳು | |
|---|---|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ಉಡುಪಿ | ೩೮೯೭ | ೩೭೦೫ | ೩೭೫೭ | ೩೫೮೫ | ೪೦೦೪ | ೩೯೬೩ | ೪೧೦೦ | ೩೯೪೮ | ೪೫೫೪ | ೪೧೬೮ | ೪೪೪೨ | ೪೦೦೫ | ೪೭೨೪ | ೪೪೪೧ |
| ಕಾರ್ಕಳ | ೧೯೦೬ | ೧೮೨೯ | ೧೬೮೯ | ೧೫೫೦ | ೧೮೮೨ | ೧೭೭೭ | ೧೯೦೫ | ೧೮೩೨ | ೨೦೮೮ | ೧೮೩೬ | ೨೦೭೬ | ೧೯೫೬ | ೨೨೮೮ | ೨೦೬೬ |
| ಕುಂದಾಪುರ | ೩೨೪೨ | ೩೧೧೬ | ೩೦೬೪ | ೨೯೫೭ | ೩೩೮೬ | ೩೧೩೨ | ೩೫೪೬ | ೩೪೭೬ | ೪೦೧೨ | ೩೬೫೩ | ೪೦೪೨ | ೩೭೯೯ | ೪೩೧೦ | ೩೯೪೪ |
| ಒಟ್ಟು | ೯೦೪೫ | ೮೬೫೦ | ೮೫೧೦ | ೮೦೯೨ | ೯೨೭೨ | ೮೮೭೨ | ೯೫೫೧ | ೯೨೫೬ | ೧೦೬೫೪ | ೯೬೫೭ | ೧೦೫೬೦ | ೯೭೧೦ | ೧೧೩೨೨ | ೧೦೪೫೧ |

*ಆಧಾರ: ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ,*

**ಆಡಳಿತ :** ಶಿಕ್ಷಣ ಇಲಾಖೆ ೧೯೭೦ರಲ್ಲಿ ಪುನಾರಚನೆ ಹೊಂದುವ ಮೊದಲು, ಇಡೀ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಆಡಳಿತಾತ್ಮಕ ಹತೋಟಿಯನ್ನು ಜಿಲ್ಲಾ ಶಿಕ್ಷಣಾಧಿಕಾರಿ (ಡಿ.ಇ.ಓ) ಹೊಂದಿದ್ದರು. ಇವರ ಸಹಾಯಕ್ಕೆ ಇಬ್ಬರು ಸಹಾಯಕ ಶಿಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಜಿಲ್ಲೆಯ ಅಧೀನ ಕಛೇರಿಗಳ ಪ್ರಶಿಕ್ಷಣ ಕೇಂದ್ರಗಳ ಹಾಗೂ ಪ್ರೌಢಶಾಲೆಗಳ ತಪಾಸಣೆ ಮಾಡುವುದು ಇವರ ಕರ್ತವ್ಯವಾಗಿದ್ದು, ಇದಕ್ಕಾಗಿ ವಲಯಕ್ಕೆ ಒಬ್ಬರಂತೆ ಇವರ ಅಧೀನದಲ್ಲಿ ಎಂಟು ಮಂದಿ ಶಾಲಾ ನಿರೀಕ್ಷಕರು ಕಾರ್ಯನಿರ್ವಹಿಸುತ್ತಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ೧೯೫೬ರಿಂದೀಚೆಗೆ ಉಂಟಾದ ಸಮಗ್ರ ಕ್ಷಿಪ್ರ ಪ್ರಗತಿಯಿಂದಾಗಿ ಶಾಲೆಗಳಲ್ಲಿ ದಾಖಲಾತಿ ಅಧಿಕಗೊಂಡಿತು. ಇದರಿಂದ ಆವರೆವಿಗೂ ಜಾರಿಯಲ್ಲಿ ಇದ್ದ ಆಡಳಿತಾತ್ಮಕ ವ್ಯವಸ್ಥೆ ಅಸಮರ್ಪಕವೆನಿಸಿತು. ಶೈಕ್ಷಣಿಕ ಮಟ್ಟದ ಸುಧಾರಣೆ ಹಾಗೂ ಅಭಿವೃದ್ಧಿಗಾಗಿ ಇಡೀ ಇಲಾಖೆಯ ಗುಣಮಟ್ಟವನ್ನೇ ಹೆಚ್ಚಿಸಬೇಕೆಂದು ಮೈಸೂರು ವೇತನ ಆಯೋಗ (೧೯೬೬-೬೮) ಅಭಿಪ್ರಾಯಪಟ್ಟಿತು. ಶಾಲೆಗಳಲ್ಲಿ ಗುಣಮಟ್ಟ ಕಾಪಾಡಲು ಹಾಗೂ ಉತ್ತಮ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಬೇಕೆಂದು ಯೋಜನಾ ಆಯೋಗವೂ ನಿರ್ದೇಶನ ನೀಡಿತು. ಈ ಎಲ್ಲಾ ಕಾರಣಗಳಿಂದ ಮೈಸೂರು ಸರಕಾರ ೧೯೭೦ರಲ್ಲಿ ಶಿಕ್ಷಣ ಇಲಾಖೆಯನ್ನು ಪುನಾರಚಿಸಿತು. ಇದರಂತೆ ತಾಲೂಕುಮಟ್ಟದ ವಲಯ ಕಚೇರಿಯನ್ನು ಶಾಲಾ ತನಿಖಾಧಿಕಾರಿಗೆ ಬದಲಾಗಿ ಎರಡನೇ ವರ್ಗದ ಗೆಜೆಟೆಡ್ ಮಟ್ಟದ ಒಬ್ಬ ಸಹಾಯಕ ಶಿಕ್ಷಣಾಧಿಕಾರಿ (ಎ.ಇ.ಓ)ಯ ಆಡಳಿತದಲ್ಲಿರಿಸಲಾಯಿತು. ಇವರಿಗೆ ಸಹಾಯಕರಾಗಿ ಪ್ರತೀ ೭೫ ಶಾಲೆಗಳಿಗೆ ಒಬ್ಬರಂತೆ ಪದವೀಧರ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲಾಯಿತು. ಉರ್ದು ಶಾಲೆಗಳ ತನಿಖೆಯನ್ನು ಆಯಾಯ ವಲಯಕ್ಕೆ ವಹಿಸಲಾಯಿತು. ೧೯೭೨ರ ವೇಳೆಗೆ ಪ್ರತೀ ಜಿಲ್ಲೆಯ ಶೈಕ್ಷಣಿಕ ಆಡಳಿತ ನಿರ್ವಹಿಸಲು ಒಬ್ಬ ಉಪನಿರ್ದೇಶಕರನ್ನು (ಡಿ.ಡಿ.ಪಿ.ಐ), ಶಿಕ್ಷಕರಿಗೆ ಮಾರ್ಗದರ್ಶನ ಮಾಡಲು ವಿಷಯ ತಜ್ಞ (ಸಬ್ಜೆಕ್ಟ್ ಇನ್ಸ್‌ಪೆಕ್ಟರ್)ರ ವಿಭಾಗವನ್ನು ಪ್ರಾರಂಭಿಸಲಾಯಿತು. ಜಿಲ್ಲಾ ಶಿಕ್ಷಣ ಕಛೇರಿಯಿಂದ ಕಾರ್ಯನಿರ್ವಹಿಸುತ್ತಿದ್ದ ಇವರು ಇಂಗ್ಲಿಷ್, ಕನ್ನಡ, ಗಣಿತ, ಸಮಾಜಶಾಸ್ತ್ರ, ವಿಜ್ಞಾನ ಮುಂತಾದ ವಿಷಯಗಳಲ್ಲಿ ಮಾರ್ಗದರ್ಶಕರಾಗಿದ್ದರು. ಇದರಂತೆ, ಆ ವರ್ಷಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಕ್ಷೇತ್ರ ಒಬ್ಬ ಡಿಡಿಪಿಐ, ಮೂರು ಶಿಕ್ಷಣಾಧಿಕಾರಿಗಳು, ಎಂಟು ಸಹಾಯಕ ಶಿಕ್ಷಣಾಧಿಕಾರಿಗಳು, ೨೦ ಮಂದಿ ಪದವೀಧರ ತಪಾಸಣಾಧಿಕಾರಿಗಳು (ಒಬ್ಬ ಉರ್ದು ತಪಾಸಣಾಧಿಕಾರಿ ಸೇರಿ) ಹಾಗೂ ಐದು ಮಂದಿ ವಿಷಯ ತಜ್ಞರ ಆಡಳಿತಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಜಿಲ್ಲೆಯ ಡಿ.ಡಿ.ಪಿ.ಐ. ಅವರು ಮೈಸೂರಿನ ಸಹ ನಿರ್ದೇಶಕ (ಜೆ.ಡಿ.ಪಿ.ಐ) ಅಧೀನಾಧಿಕಾರಿಯಾಗಿದ್ದರು.

೧೯೮೭ ರಿಂದ ರಾಜ್ಯಾದ್ಯಂತ ಶೈಕ್ಷಣಿಕ ಆಡಳಿತ ಜಿಲ್ಲಾ ಪರಿಷತ್‌ನ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು. ಪ್ರಸ್ತುತ (೨೦೦೪-೦೫) ಜಿಲ್ಲೆಯ ಶೈಕ್ಷಣಿಕ ಆಡಳಿತ ಉಪನಿರ್ದೇಶಕರ ಅಧೀನದಲ್ಲಿದ್ದು, ಇವರಡಿ ಜಿಲ್ಲಾ ಕೇಂದ್ರದಲ್ಲಿ ಒಬ್ಬ ಶಿಕ್ಷಣಾಧಿಕಾರಿ ಇವರ ಪ್ರಾತಿನಿಧಿಕಾರಿಯಾಗಿರುತ್ತಾರೆ. ಇವರಲ್ಲದೆ ಆರುಮಂದಿ ವಿಷಯ ನಿರೀಕ್ಷಕರು (ಸಬ್ಜೆಕ್ಟ್ ಇನ್ಸ್‌ಪೆಕ್ಟರ್ಸ್), ಒಬ್ಬ ದೈಹಿಕ ಶಿಕ್ಷಣ ಜಿಲ್ಲಾ ಸೂಪರಿಂಟೆಂಡೆಂಟ್, ಒಬ್ಬ ಉರ್ದು ಶಿಕ್ಷಣ ಸಂಯೋಜಕರು ಬೋಧಕ ವೃಂದದಡಿ ಕಾರ್ಯನಿರ್ವಹಿಸುತ್ತಾರೆ. ಬೋಧಕೇತರ (ಆಡಳಿತಾತ್ಮಕ) ಸಿಬ್ಬಂದಿ ವರ್ಗದಡಿ ಮೂವರು ಅಧೀಕ್ಷಕರು, ಒಬ್ಬ ಸಹಾಯಕ ಅಂಕಿ ಸಂಖ್ಯಾಧಿಕಾರಿ, ಎಂಟು ಮಂದಿ ಪ್ರಥಮ ದರ್ಜೆ ಸಹಾಯಕರು, ಐವರು ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಶೀಘ್ರಲಿಪಿಗಾರ, ಮೂವರು ಬೆರಳಚ್ಚುಗಾರರು, ಒಬ್ಬ ಚಾಲಕ, ಮೂವರು ಜಮೇದಾರರು ಹಾಗೂ ನಾಲ್ವರು ದಫೇದಾರರೂ ಕಾರ್ಯನಿರ್ವಹಿಸುತ್ತಿದ್ದು, ಈ ಎಲ್ಲಾ ಸಿಬ್ಬಂದಿ ಆಡಳಿತಾಧಿಕಾರಿಯಾದ ಹಾಗೂ ಉಪನಿರ್ದೇಶಕರ ಅಧೀನಾಧಿಕಾರಿಯಾದ ಗೆಜೆಟೆಡ್ ಅಸಿಸ್ಟೆಂಟ್ ಅವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಾರೆ.

## ಸರ್ವ ಶಿಕ್ಷಣ ಅಭಿಯಾನ

ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಏಕಕಾಲಕ್ಕೆ ಉಪಯುಕ್ತವಾದ ಮೇಲ್ಕಂಡ ಬೃಹತ್ ಶಿಕ್ಷಣ ಯೋಜನೆಯನ್ನು ಸರಕಾರ ಹಮ್ಮಿಕೊಂಡು, ಇದನ್ನು ೨೦೦೩-೦೪ನೇ ಸಾಲಿನಿಂದ ಜಾರಿಗೊಳಿಸಿದೆ. ಇದಕ್ಕಾಗಿ ಬೆಂಗಳೂರಿನ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯಲ್ಲಿ ಒಂದು ಪ್ರತ್ಯೇಕ ಕೋಶವನ್ನು ತೆರೆಯಲಾಗಿದೆ. ಇದು ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಮೇಲುಸ್ತುವಾರಿ ವಹಿಸಿಕೊಂಡಿದೆ. ಪ್ರತಿಯೊಬ್ಬ ಶಿಕ್ಷಕ ಈ ಕಾರ್ಯಕ್ರಮದಡಿ ಕನಿಷ್ಠ ೨೦ ದಿನಗಳ ತರಬೇತಿಯನ್ನು ಒಂದು ವರ್ಷದಲ್ಲಿ ಪಡೆಯಬೇಕಿದೆ. ಇದಕ್ಕಾಗಿ ಡಿ.ಎಸ್.ಇ.ಆರ್.ಟಿ. ಯಿಂದ ಬಿಡುಗಡೆಯಾದ ಅನುದಾನವು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್)ಗಳ ಮೂಲಕ ಸಂಬಂಧಪಟ್ಟ ಕೇಂದ್ರಗಳನ್ನು ತಲುಪುತ್ತದೆ.

ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಯೋಜನೆಯನ್ನು ತಯಾರಿಸಿ, ವಿಷಯ ತಜ್ಞರ ಸಹಾಯದಿಂದ ಸಂಚಿಕೆಗಳನ್ನು ಸಿದ್ಧಪಡಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ಶಿಕ್ಷಕರಿಗೆ ಪುನರ್ಮನನ ಕಮ್ಮಟಗಳನ್ನೇರ್ಪಡಿಸಿ, ಜಿಲ್ಲಾ ಹಾಗೂ ತಾಲೂಕುಮಟ್ಟಗಳಲ್ಲಿ ಸೇವಾನಿರತ ಹಾಗೂ ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ ತರಬೇತಿ ನೀಡುವುದೇ ಈ ಯೋಜನೆಯ ಉದ್ದೇಶವಾಗಿದೆ. ಸರ್ಕಾರೇತರ ಸಂಸ್ಥೆಗಳೊಡನೆ "ಕೇಳಿ–ಕಲಿ", 'ಬಾನ್ದನಿ', 'ಎಜುಸ್ಯಾಟ್' ಹಾಗೂ 'ಕಂಪ್ಯೂಟರ್ ಆಧಾರಿತ ಶಿಕ್ಷಣ' ಕಾರ್ಯಕ್ರಮ ಇತ್ಯಾದಿಗಳು ಈ ಅಭಿಯಾನದಡಿ ನಡೆಯುತ್ತವೆ. ಅಜೀಂ ಪ್ರೇಂಜಿ ಪ್ರತಿಷ್ಠಾನದ ಸಹಯೋಗದೊಂದಿಗೆ ಜಿಲ್ಲೆಯ ಹಲವಾರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗಣಕ ಶಿಕ್ಷಣ ಬೋಧನೆಯನ್ನು ಪ್ರಾರಂಭಿಸಲಾಗಿದೆ. ಅಧಿಕಾರ ವಿಕೇಂದ್ರಿಕರಣಕ್ಕಾಗಿ ಶಾಲೆಗಳಲ್ಲಿ ಪೋಷಕರನ್ನೊಳಗೊಂಡ ಶಾಲಾಭಿವೃದ್ಧಿ ಹಾಗೂ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿದೆ. ಪ್ರೌಢ ಶಾಲಾ ಮಟ್ಟದಲ್ಲಿ ಪ್ರಾಯೋಗಿಕವಾಗಿ ಪರೀಕ್ಷೆ ಹಾಗೂ ಮೌಲ್ಯಮಾಪನ ಸುಧಾರಣೆಗಾಗಿ, ವಸ್ತುನಿಷ್ಠತೆ ಹೆಚ್ಚಿಸಿ ಅವ್ಯವಹಾರ ತಡೆಗಟ್ಟಲು ಟ್ರೈಮೆಸ್ಟರ್ ಪದ್ಧತಿ ಜಾರಿಮಾಡಿ, ಅದರಂತೆ, ಪ್ರಶ್ನೆಪತ್ರಿಕೆಗಳನ್ನು ರೂಪಿಸಲಾಗಿದೆ.

**ಶತಮಾನ ಪೂರೈಸಿರುವ ಉಡುಪಿ ಜಿಲ್ಲೆಯ ಹಳೆಯ ಶಾಲೆಗಳ ಪಟ್ಟಿ**

| ಕ್ರ.ಸಂ. | ಶಾಲೆಯ ಹೆಸರು | ಸ್ಥಳ | ಸ್ಥಾಪನಾ ವರ್ಷ |
|---|---|---|---|
| ೧ | ಸಂತ ಜೋಸೆಫರ ಹೈಯರ್ ಎಲಿಮೆಂಟರಿ ಶಾಲೆ | ಕಲ್ಯಾಣಪುರ | ೧೮೦೭ |
| ೨ | ಶ್ರೀ ವೆಂಕಟರಮಣ ಪ್ರೈವೇಟ್ ಹೈಯರ್ ಎಲಿಮೆಂಟರಿ ಶಾಲೆ | ಅವರಾಲಬೆಟ್ಟು | ೧೮೨೦ |
| ೩ | ಶ್ರೀಮನ್ ಮಧ್ವ ಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾಪಾಠಶಾಲಾ | ಉಡುಪಿ | ೧೮೨೭ |
| ೪ | ಎಲಿಮೆಂಟರಿ ಶಾಲೆ | ಬಡಾವಿಡಿಯೂರು | ೧೮೫೭ |
| ೫ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಮೂಳೂರು | ೧೮೫೮ |
| ೬ | ಹಿಂದೂ ಹೈಯರ್ ಎಲಿಮೆಂಟರಿ ಶಾಲೆ | ಉದ್ಯಾವರ | ೧೮೬೧ |
| ೭ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಶಿರ್ವ | ೧೮೬೫ |
| ೮ | ಕಡಿಯಾಳಿ ಹೈಯರ್ ಎಲಿಮೆಂಟರಿ ಶಾಲೆ | ಕಡಿಯಾಳಿ | ೧೮೭೨ |
| ೯ | ಕಾಂಪೋಸಿಟ್ ಹೈಯರ್ ಎಲಿಮೆಂಟರಿ ಶಾಲೆ | ಕಾರ್ಕಳ ಮೇನ್ | ೧೮೭೮ |
| ೧೦ | ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಹೈಯರ್ ಎಲಿಮೆಂಟರಿ ಶಾಲೆ | ಉದ್ಯಾವರ | ೧೮೮೧ |
| ೧೧ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಕುಂದಾಪುರ | ೧೮೮೧ |
| ೧೨ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಮಲ್ಪೆ | ೧೮೮೧ |
| ೧೩ | ಬಿ.ಇ.ಎಂ ಹೈಯರ್ ಎಲಿಮೆಂಟರಿ ಶಾಲೆ | ಉದ್ಯಾವರ | ೧೮೮೩ |
| ೧೪ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಸಂಸೂರು | ೧೮೮೫ |
| ೧೫ | ಎಲಿಮೆಂಟರಿ ಶಾಲೆ | ಉಪ್ಪುಂದ | ೧೮೮೬ |
| ೧೬ | ಬೋರ್ಡ್ ಹೈಸ್ಕೂಲ್ | ಕುಂದಾಪುರ | ೧೮೮೭ |
| ೧೭ | ಬೋರ್ಡ್ ಹೈಸ್ಕೂಲ್ | ಕಾರ್ಕಳ | ೧೮೮೮ |
| ೧೮ | ಬೋರ್ಡ್ ಹೈಸ್ಕೂಲ್ | ಉಡುಪಿ | ೧೮೯೦ |
| ೧೯ | ಎಲಿಮೆಂಟರಿ ಶಾಲೆ | ಎಲ್ಲೂರು | ೧೮೯೦ |
| ೨೦ | ಹೈಯರ್ ಎಲಿಮೆಂಟರಿ ಶಾಲೆ | ತೆಕ್ಕಟ್ಟೆ | ೧೮೯೨ |

| ಕ್ರ.ಸಂ. | ಶಾಲೆಯ ಹೆಸರು | ಸ್ಥಳ | ಸ್ಥಾಪನಾ ವರ್ಷ |
|---|---|---|---|
| ೨೧ | ಗೌರ್ನಮೆಂಟ್ ಪ್ರೈಮರಿ ಶಾಲೆ | ಸಾಲಿಗ್ರಾಮ | ೧೮೯೨ |
| ೨೨ | ಯು.ಬಿ.ಎಂ.ಸಿ. ಹೈಯರ್ ಎಲಿಮೆಂಟರಿ ಶಾಲೆ | ಪಾದೂರು | ೧೮೯೨ |
| ೨೩ | ಬುದ್ನಾರ್ ಹೈಯರ್ ಎಲಿಮೆಂಟರಿ ಶಾಲೆ | ಬಸರೂರು | ೧೮೯೨ |
| ೨೪ | ಬಿ.ಎಂ.ಎ ಹೈಯರ್ ಎಲಿಮೆಂಟರಿ ಶಾಲೆ | ಬಸರೂರು | ೧೮೯೨ |
| ೨೫ | ಉಡುಪಿ ಜಿಲ್ಲಾ ಪಂಚಾಯತ್ ಹೈಯರ್ ಎಲಿಮೆಂಟರಿ ಶಾಲೆ | ತೆಕ್ಕಟ್ಟೆ | ೧೮೯೩ |
| ೨೬ | ಉಡುಪಿ ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಕೊಕ್ಕರ್ಣೆ | ೧೮೯೫ |
| ೨೭ | ಉಡುಪಿ ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ವಾರಂಬಳ್ಳಿ ಬ್ರಹ್ಮಾವರ | ೧೮೯೫ |
| ೨೮ | ಸುಬೋಧಿನಿ ಹೈಯರ್ ಎಲಿಮೆಂಟರಿ ಶಾಲೆ | ಅಲೆವೂರು | ೧೮೯೫ |
| ೨೯ | ಜಿಲ್ಲಾ ಪಂಚಾಯತ್ ಮಹಾತ್ಮಗಾಂಧಿ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಉಡುಪಿ | ೧೮೯೬ |
| ೩೦ | ಬೈಕಾಡಿ ಪ್ರೈವೇಟ್ ಹೈಯರ್ ಎಲಿಮೆಂಟರಿ ಶಾಲೆ | ಬೈಕಾಡಿ | ೧೮೯೬ |
| ೩೧ | ಮಾಡಲ್ ಹೈಯರ್ ಎಲಿಮೆಂಟರಿ ಶಾಲೆ | ಉಡುಪಿ | ೧೮೯೮ |
| ೩೨ | ಡಾನ್‌ಬಾಸ್ಕೋ ಪ್ರೈವೇಟ್ ಏಡೆಡ್ ಹೈಯರ್ ಎಲಿಮೆಂಟರಿ ಶಾಲೆ | ಶಿರ್ವ | ೧೮೯೮ |
| ೩೩ | ಕ್ರಿಶ್ಚಿಯನ್ ಶಾಲೆ | ಉಡುಪಿ | ೧೮೯೮ |
| ೩೪ | ತೋನ್ಸೆಖಂಡಿಗೆ ಜಿಲ್ಲಾ ಪಂಚಾಯತ್ ಹೈಯರ್ ಎಲಿಮೆಂಟರಿ ಶಾಲೆ | ಕೆಮ್ಮಣ್ಣು | ೧೯೦೦ |
| ೩೫ | ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಕಂಬದ ಕೋಣೆ | ೧೯೦೦ |
| ೩೬ | ಜಿಲ್ಲಾ ಪಂಚಾಯತ್ ಹೈಯರ್ ಎಲಿಮೆಂಟರಿ ಶಾಲೆ | ಕೋಟ | ೧೯೦೨ |
| ೩೭ | ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಹಂಗಾರಕಟ್ಟೆ | ೧೯೦೪ |
| ೩೮ | ಹೈಯರ್ ಎಲಿಮೆಂಟರಿ ಶಾಲ | ಹಾಲಾಡಿ | ೧೯೦೫ |
| ೩೯ | ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಇನ್ನಾ | ೧೯೦೫ |
| ೪೦ | ಬಿ.ಆರ್. ರಾವ್ ಹಿಂದೂ ಹೈಯರ್ ಎಲಿಮೆಂಟರಿ ಶಾಲೆ | ಕುಂದಾಪುರ | ೧೯೦೫ |
| ೪೧ | ಜಿಲ್ಲಾ ಪಂಚಾಯತ್ ಉರ್ದು ಹೈಯರ್ ಎಲಿಮೆಂಟರಿ ಶಾಲೆ | ಪಡುತೋನ್ಸೆ | ೧೯೦೯ |
| ೪೨ | ಜಿಲ್ಲಾ ಪಂಚಾಯತ್ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಹೆಜಮಾಡಿ | ೧೯೦೯ |
| ೪೩ | ಸರ್ಕಾರಿ ಮಾಡೆಲ್ ಹೈಯರ್ ಎಲಿಮೆಂಟರಿ ಶಾಲೆ | ಮುಂಡಕೂರು | ೧೯೦೯ |
| ೪೪ | ಜಿಲ್ಲಾ ಪಂಚಾಯತ್ ಉರ್ದು ಹೈಯರ್ ಎಲಿಮೆಂಟರಿ ಶಾಲೆ | ಸಾಲ್ಮರ | ೧೯೦೭ |
| ೪೫ | ಹಿಂದೂ ಹೈಯರ್ ಎಲಿಮೆಂಟರಿ ಶಾಲೆ | ಕಲ್ಯಾಣಪುರ | ೧೯೦೭ |
| ೪೬ | ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (ಪೆರ್ವಾಜೆ ಶಾಲೆ) | ಕಾರ್ಕಳ | --- |

## ಪ್ರೌಢಶಿಕ್ಷಣ

ಜಿಲ್ಲೆಯ ಪ್ರಥಮ ಪ್ರೌಢಶಾಲೆಯಾದ ಬೋರ್ಡ್ ಹೈಸ್ಕೂಲ್ ೧೮೯೦ರಲ್ಲಿ ಉಡುಪಿಯಲ್ಲಿ ಪ್ರಾರಂಭಗೊಂಡಿತೆಂದು ತಿಳಿದುಬರುತ್ತದೆ (೧೯೯೦ರಲ್ಲಿ ಇದರ ಶತಮಾನೋತ್ಸವ ಸಮಾರಂಭವು ನಡೆದಿರುತ್ತದೆ). ತದನಂತರ ೧೮೯೮ರಲ್ಲಿ ಉಡುಪಿಯಲ್ಲಿ ಕ್ರಿಶ್ಚಿಯನ್ ಹೈಸ್ಕೂಲ್ ಪ್ರಾರಂಭವಾಯಿತು. ಜಿಲ್ಲೆಯು ೧೯೫೬ರ ನವಂಬರ್ ಒಂದಕ್ಕೆ ಮೊದಲು ಮದರಾಸ್ ಸರ್ಕಾರದ ಆಡಳಿತಕ್ಕೊಳಪಟ್ಟಿದುದರಿಂದ, ಇಲ್ಲಿನ ಶೈಕ್ಷಣಿಕ ಚಟುವಟಿಕೆ ಮದರಾಸ್ ರಾಜ್ಯದ ಮಾದರಿಯಲ್ಲಿಯೇ ನಡೆಯುತ್ತಿತ್ತು. ಮದರಾಸ್ ವಿಶ್ವವಿದ್ಯಾಲಯ ನಡೆಸುತ್ತಿದ್ದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಬದಲಾಗಿ ೧೯೧೧ರಲ್ಲಿ ಸರಕಾರಿ ಮಂಡಳಿ ನಡೆಸುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಜಾರಿಯಾಯಿತು. ತದನಂತರ ಮದರಾಸ್ ಸರಕಾರ ಖಾಸಗಿ ಹಾಗೂ ಮುನಿಸಿಪಲ್ ಶಾಲೆಗಳಿಗೆ ತಾನು ನೀಡುತ್ತಿದ್ದ ಅನುದಾನವನ್ನು ಹೆಚ್ಚಳ ಮಾಡಿತು. ೧೯೨೩ರಲ್ಲಿ ಶೈಕ್ಷಣಿಕ ಸಲಹಾ ಮಂಡಳಿಯಾದ ಜಿಲ್ಲಾ ಶಿಕ್ಷಣ ಮಂಡಳಿ ಸ್ಥಾಪಿಸಲ್ಪಟ್ಟು, ೧೯೨೮ರಲ್ಲಿ ಸರ್ಕಾರದಿಂದ ಅಂಗೀಕೃತವಾಯಿತು. ಪ್ರೌಢಶಾಲೆಯ ನಾಲ್ಕು, ಐದು ಹಾಗೂ ಆರನೇ ವರ್ಗಗಳಲ್ಲಿ ಇಂಗ್ಲಿಷನ್ನು ಅಥವಾ ರಾಜ್ಯ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ಶಾಲೆಗಳಿಗೆ ನೀಡಲಾಯಿತು.

೧೯೨೧ರಲ್ಲಿ ಜಿಲ್ಲೆಯಲ್ಲಿ ೨೪ ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ೧೮, ಗಂಡುಮಕ್ಕಳದ್ದಾದರೆ ಆರು, ಹೆಣ್ಣುಮಕ್ಕಳ ಶಾಲೆಗಳಾಗಿದ್ದವು. ಇವುಗಳಲ್ಲದೆ ಸ್ಥಳೀಯರ ಸಹಕಾರದಿಂದ ಖಾಸಗಿ ಪ್ರೌಢಶಾಲೆಗಳೂ ಅಸ್ತಿತ್ವಕ್ಕೆ ಬಂದವು. ಆ ಸಮಯದಲ್ಲಿ ಹೀಗೆ ಪ್ರಾರಂಭಗೊಂಡ ಶಾಲೆಗಳೆಂದರೆ, ಮಂಗಳೂರಿನ ಕೆನರಾ ಪ್ರೌಢಶಾಲೆ ಮತ್ತು ಗಣಪತಿ ಪ್ರೌಢಶಾಲೆ. ೧೯೨೧ ರಿಂದ ೧೯೪೭ರ ಕಾಲದಲ್ಲಿ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರ ಗಣನೀಯವಾಗಿ ಅಭಿವೃದ್ಧಿ ಹೊಂದಿತು. ೧೯೨೩ರಲ್ಲಿ ಪ್ರೌಢಶಾಲಾ ವ್ಯವಸ್ಥೆಯನ್ನು ಪರಿಷ್ಕರಣಗೊಳಿಸುವ ಪ್ರಯತ್ನಗಳು ಮಾಡಲ್ಪಟ್ಟವು. ತತ್ಪರಿಣಾಮವಾಗಿ ಪ್ರೌಢ ಶಿಕ್ಷಣಕ್ಕೆ ಬರುವ ಯುವಕರು ವಿಶ್ವವಿದ್ಯಾಲಯ ಅಥವಾ ವೃತ್ತಿ ಶಿಕ್ಷಣಕ್ಕೆ ಮಾತ್ರವಲ್ಲದೆ ಇನ್ನಿತರ ವೃತ್ತಿಗಳಿಗೂ ಸಿದ್ಧರಾಗುವಂತೆ ಪಠ್ಯಕ್ರಮವನ್ನು ರೂಪಿಸಲಾಯಿತು. ಇದರಂತೆ ಬಡಗಿ, ಪುಸ್ತಕ ಬೈಂಡಿಂಗ್, ನೇಯ್ಗೆ, ಮುದ್ರಣಕಾರ್ಯ ಮುಂತಾದ ದೈಹಿಕ ಹಾಗೂ ವೃತ್ತಿಪರ ವಿಷಯಗಳ ಬೋಧನೆಯನ್ನು ಪ್ರೌಢಶಾಲೆಗಳಲ್ಲಿ ಕಡ್ಡಾಯಗೊಳಿಸಲಾಯಿತು. ಪ್ರತೀ ಪ್ರೌಢಶಾಲೆಯಲ್ಲಿ ಇಂತಹ ಯಾವುದಾದರೊಂದು ವೃತ್ತಿಪರ ವಿಷಯ ಲಭ್ಯವಿದ್ದು, ಇವುಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿತು. ಈ ಪದ್ಧತಿ ೧೯೩೯ರ ವರೆಗೆ ಮುಂದುವರೆಯಿತು. ನಂತರ ದೈಹಿಕ ಶಿಕ್ಷಣ ಕಡ್ಡಾಯಗೊಂಡು ಒಂದು ನೂತನ ಯೋಜನೆ ಪ್ರಾರಂಭವಾದರೂ, ಇದು ಪರೀಕ್ಷಾ ವಿಷಯವಾಗಿರಲಿಲ್ಲ. ಇತಿಹಾಸ, ಬೀಜಗಣಿತ, ರೇಖಾಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಬುಕ್-ಕೀಪಿಂಗ್, ಹಾಗೂ ಬೆರಳಚ್ಚು ಐಚ್ಛಿಕ ವಿಷಯಗಳಾಗಿದ್ದವು. ೧೯೩೮ರಲ್ಲಿ ಹಿಂದಿ ಕಡ್ಡಾಯವಾಯಿತಾದರೂ, ಮರುವರ್ಷ ಒಂದರಿಂದ ಮೂರನೇ ಫಾರ್ಮ್‌ಗಳಿಗೆ ಹಾಗೂ ಎಸ್.ಎಸ್.ಎಲ್.ಸಿ.ಗೆ ಐಚ್ಛಿಕ ವಿಷಯವಾಯಿತು. ೧೯೪೪ರಲ್ಲಿ ಕೆಥೊಲಿಕ್ ಶಿಕ್ಷಣ ಮಂಡಳಿಯ ವತಿಯಿಂದ ಪದುವ ಪ್ರೌಢ ಶಾಲೆ ಆರಂಭವಾಯಿತು. ೧೯೪೬-೪೭ರಲ್ಲಿ ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಸಂಖ್ಯೆ ೨೯ಕ್ಕೆ ಏರಿತು. ಸಾಮಾನ್ಯವಾಗಿ ಇಂಗ್ಲಿಷ್ ಬೋಧನೆ ಇರುವ ನಾಲ್ಕು ವರ್ಷಗಳ ಮಾಧ್ಯಮಿಕ ಹಂತದ ನಂತರದ ಮೂರು ವರ್ಷದ ಶಿಕ್ಷಣ ಹಂತವನ್ನು 'ಪ್ರೌಢಶಿಕ್ಷಣ' ವೆಂದು ಕರೆಯಲಾಗುತ್ತಿತ್ತು. ಮಾಧ್ಯಮಿಕ ನಾಲ್ಕನೇ ತರಗತಿ ಉತ್ತೀರ್ಣರಾದ ಮಕ್ಕಳನ್ನು ಪ್ರೌಢ ಶಿಕ್ಷಣದ ಮೊದಲನೇ ವರ್ಷಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು.

ಜಿಲ್ಲೆಯ ಹೈಸ್ಕೂಲುಗಳ ಸಂಖ್ಯೆ ೧೯೪೬ ರಿಂದ ೧೯೫೬ರ ಅವಧಿಯಲ್ಲಿ ಗಣನೀಯವಾಗಿ ಹೆಚ್ಚಳಗೊಂಡಿತು. ರಾಜ್ಯ ಪುನರ್ಘಟನೆಯ ವೇಳೆಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್‌ಗಳಡಿ ಕಾರ್ಯನಿರ್ವಹಿಸುತ್ತಿದ್ದ ಬೋರ್ಡ್ ಪ್ರೌಢಶಾಲೆಗಳೆಂಬ ೨೦ ಸಂಸ್ಥೆಗಳು, ಕುಂದಾಪುರ, ಉಡುಪಿ, ಕಾರ್ಕಳ, ಪುತ್ತೂರು, ಹಿರಿಯಡ್ಕ, ಬೈಂದೂರು, ಬೈಲೂರು, ಹೆಜಮಾಡಿ, ಕೋಟೇಶ್ವರ, ಅಡಮಾರ್, ಸುಳ್ಯ, ಬೆಳ್ಳಾರೆ, ಪಂಜ, ಶಂಕರನಾರಾಯಣ, ವೇಣೂರು, ಹೆಬ್ರಿ, ಉಪ್ಪಿನಂಗಡಿ, ಬೆಳ್ತಂಗಡಿ, ಬೆಳ್ಮಣ್ಣು ಹಾಗೂ ಬಸರೂರುಗಳಲ್ಲಿ

ಕಾರ್ಯನಿರ್ವಹಿಸುತ್ತಿದ್ದವು. ೧೯೫೬ರಲ್ಲಿ ಸರಕಾರಿ, ಸ್ಥಳೀಯ ಹಾಗೂ ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತಿದ್ದ ಒಟ್ಟು ೭೦ ಪ್ರೌಢಶಾಲೆಗಳು ಜಿಲ್ಲೆಯಲ್ಲಿ ಕಾರ್ಯನಿರತವಾಗಿದ್ದು, ಇವುಗಳಲ್ಲಿ ೪೬ ಶಾಲೆಗಳು ಜಿಲ್ಲಾ ಮಂಡಳಿಗಳ ಸರಹದ್ದಿನಲ್ಲಿದ್ದವು. ಈ ಎಲ್ಲಾ ಶಾಲೆಗಳಲ್ಲಿ ಒಟ್ಟು ೨೮,೪೪೫ (೧೮,೪೨೫ ಗಂ. ೧೦,೦೨೦ ಹೆ) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ನೂತನವಾಗಿ ನಿರ್ಮಾಣಗೊಂಡ, ರಾಜ್ಯಕ್ಕೆ ಒಂದು ಏಕರೂಪ ಶಿಕ್ಷಣ ಪದ್ಧತಿ ರೂಪಿಸುವ, ಹಾಗೂ ಅದುವರೆವಿಗೂ ಪ್ರಾಂತದಿಂದ ಪ್ರಾಂತಕ್ಕೆ ಚಾಲ್ತಿಯಲ್ಲಿದ್ದ ವಿಭಿನ್ನತೆಯನ್ನು ಹೋಗಲಾಡಿಸುವ ಸಲುವಾಗಿ ಸರಕಾರ ಡಿಸೆಂಬರ್ ೧೯೫೬ರಲ್ಲಿ ಸಮಗ್ರ ಶಿಕ್ಷಣ ಸಲಹಾ ಸಮಿತಿಯನ್ನು ನೇಮಿಸಿತು. ಈ ಸಮಿತಿ ಏಳು ವರ್ಷಗಳ ಪ್ರಾಥಮಿಕ (ಬೇಸಿಕ್) ಮತ್ತು ನಾಲ್ಕು ವರ್ಷಗಳ ಪ್ರೌಢ ಶಿಕ್ಷಣ ಕ್ರಮವನ್ನು ಶಿಫಾರಸ್ಸು ಮಾಡಿತು. ೧೯೬೦–೬೧ ರಿಂದ ಐಚ್ಛಿಕ ವಿಷಯಗಳನ್ನೊಳಗೊಂಡ ನೂತನ ಪಠ್ಯಕ್ರಮವೂ ಜಾರಿಯಾಯಿತು. ಆದರೆ, ೧೯೬೯–೭೦ ರಿಂದ ಐಚ್ಛಿಕ ವಿಷಯಗಳು ರದ್ದಾಗಿ, ಪರಿಷ್ಕೃತ ಪಠ್ಯಕ್ರಮ ಜಾರಿಗೆ ಬಂದಿತು.

## ನಂತರದ ಬದಲಾವಣೆಗಳು

ಕೊಠಾರಿ ಆಯೋಗದ ಶಿಫಾರಸ್ಸಿನಂತೆ, ಪ್ರಥಮ ಹತ್ತು ವರ್ಷಗಳಿಗೆ ಪಠ್ಯಕ್ರಮ ಹೊಂದಿದ ಏಕರೂಪ ಶಿಕ್ಷಣವನ್ನು ಜಾರಿಮಾಡಲು ರಾಜ್ಯ ಶೈಕ್ಷಣಿಕ ಸಲಹಾ ಸಮಿತಿ ನಿರ್ಧರಿಸಿತು. ೧೯೬೯–೭೦ ರಿಂದ ಐಚ್ಛಿಕ ವಿಷಯ ರಹಿತ ನೂತನ ಪಠ್ಯಕ್ರಮವನ್ನು ಒಂಭತ್ತನೇ ತರಗತಿಗೂ, ೧೯೭೦–೭೧ ರಿಂದ ಎಂಟು ಮತ್ತು ಹತ್ತನೇ ತರಗತಿಗಳಿಗೂ ಜಾರಿಮಾಡಲಾಯಿತು. ೧೯೬೬–೬೭ ರಿಂದ ರಾಜ್ಯದ ಎಲ್ಲೆಡೆ ಆರ್ಥಿಕ ವರಮಾನವನ್ನು ಮಾನದಂಡವಾಗಿಸದೆ ಎಲ್ಲರಿಗೂ ಪ್ರೌಢ ಶಿಕ್ಷಣವನ್ನು ಉಚಿತಗೊಳಿಸಲಾಯಿತು.

## ೧೯೭೧–೭೨ರ ಸನ್ನಿವೇಶ

೧೯೫೬ಕ್ಕೆ ಹೋಲಿಸಿದಾಗ ಒಂದೂವರೆ ದಶಕದ ಅವಧಿಯಲ್ಲಿ ಜಿಲ್ಲೆಯ ಪ್ರೌಢ ಶಾಲೆಗಳ ಸಂಖ್ಯೆ ದುಪ್ಪಟ್ಟುಗೊಂಡು, ೧೯೭೨ರಲ್ಲಿ ಒಟ್ಟು ೧೬೭ ಪ್ರೌಢ ಶಾಲೆಗಳು ಕಾರ್ಯನಿರತವಾಗಿದ್ದವು. ಇವುಗಳಲ್ಲಿ ೩೬ ಸರಕಾರಿ, ೨೨ ತಾಲೂಕು ಮಂಡಳಿ, ೧೦೪ ಅನುದಾನಿತ ಹಾಗೂ ಐದು ಅನುದಾನ ರಹಿತ ಶಾಲೆಗಳಾಗಿದ್ದವು. ಮೇಲ್ಕಂಡ ೩೬ ಸರಕಾರಿ ಶಾಲೆಗಳ ಪೈಕಿ ಒಂದು ಕೇಂದ್ರೀಯ ಶಾಲೆಯಾಗಿದ್ದು, ಒಂದು ಮುನಿಸಿಪಾಲಿಟಿಯಿಂದ ಹಾಗೂ ೧೫ ತಾಲೂಕು ಅಭಿವೃದ್ಧಿ ಮಂಡಳಿಯಿಂದ ಹಸ್ತಾಂತರಗೊಂಡ ಶಾಲೆಗಳಾಗಿದ್ದವು. ಒಟ್ಟು ೧೬೭ ಪ್ರೌಢ ಶಾಲೆಗಳಲ್ಲಿ ೩೩ ಹೆಣ್ಣು ಮಕ್ಕಳ ಪ್ರೌಢ ಶಾಲೆಗಳಾಗಿದ್ದು, ಇವುಗಳಲ್ಲಿ ಮೂರು ಸರಕಾರಿ, ಒಂದು ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ೨೯ ಅನುದಾನಿತ ಶಾಲೆಗಳಾಗಿದ್ದವು. ಈ ೧೬೭ ಪ್ರೌಢ ಶಾಲೆಗಳಲ್ಲಿ ೫೬ ಶಾಲೆಗಳು ಪ್ರಥಮ ಪಿಯುಸಿ ತರಗತಿಗಳನ್ನು ಹೊಂದಿದ್ದವು. ಕಾಲಕ್ರಮದಲ್ಲಿ ಈ ಶಾಲೆಗಳಲ್ಲಿ ಹೆಚ್ಚಿನವು ಕಿರಿಯ ಕಾಲೇಜುಗಳಾಗಿ ಮಾರ್ಪಾಡುಗೊಂಡವು. ಮೇಲಿನ ಎಲ್ಲಾ ಶಾಲೆಗಳಲ್ಲಿ ೧೯೭೦ ರಲ್ಲಿ ಒಟ್ಟು ೨೫,೫೯೫ ಗಂಡು ಹಾಗೂ ೧೬,೯೧೦ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಆ ಪೈಕಿ ೨,೦೯೫ ಗಂಡು ಹಾಗೂ ೧,೧೩೨ ಹೆಣ್ಣು ಮಕ್ಕಳು ಪ್ರಥಮ ಪಿಯುಸಿ ತರಗತಿಗಳಲ್ಲಿದ್ದರು. ಒಟ್ಟು ಬೋಧಕ ಸಿಬ್ಬಂದಿಯಲ್ಲಿ ೨,೧೦೦ ಮಂದಿ ಇದ್ದು, ಇವರಲ್ಲಿ ೧,೧೫೦ ಉಪಾಧ್ಯಾಯರು ಹಾಗೂ ೫೨೦ ಉಪಾಧ್ಯಾಯನಿಯರು ತರಬೇತಿ ಹೊಂದಿದ್ದವರಾಗಿದ್ದರೆ, ೩೩೧ ಹಾಗೂ ೯೯ ಉಪಾಧ್ಯಾಯ/ಉಪಾಧ್ಯಾಯನಿಯರು ತರಬೇತಿ ಹೊಂದಿರಲಿಲ್ಲ. ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿ ಸಂಸ್ಕೃತ, ಹಿಂದಿ, ಉರ್ದು, ಅರ‍್ಯಾಬಿಕ್ ಹಾಗೂ ಇಂಗ್ಲಿಷನ್ನು ಪ್ರಥಮ ಭಾಷೆಯಾಗಿ ಬೋಧಿಸಲಾಗುತ್ತಿತ್ತು. ಪ್ರಾಂತೀಯ ಭಾಷೆಯಾದ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಂಗೀಕರಿಸಲಾಗಿತ್ತು.

**ಬೋರ್ಡ್ ಹೈಸ್ಕೂಲ್, ಉಡುಪಿ :** ಜಿಲ್ಲೆಯ ಹಳೆಯ ಖ್ಯಾತಿವೆತ್ತ ಶಿಕ್ಷಣ ಸಂಸ್ಥೆಯಾದ ಈ ಶಾಲೆ ೧೮೯೦ರಲ್ಲಿ ಸ್ಥಾಪಿಸಲ್ಪಟ್ಟು, ೧೯೯೦ರಲ್ಲಿ ತನ್ನ ಶತಮಾನೋತ್ಸವವನ್ನೂ ಆಚರಿಸಿದೆ. ಕೇಂದ್ರ ಸಚಿವ

ಶ್ರೀ ಆಸ್ಕರ್ ಫರ್ನಾಂಡಿಸ್ ಈ ಶಾಲೆಯ ಹಳೆಯ ವಿದ್ಯಾರ್ಥಿಯಾಗಿದ್ದರೆ, ಅವರ ತಂದೆ ಶ್ರೀ ರಾಕಿ ಫರ್ನಾಂಡಿಸ್ ೧೯೪೦ ರಿಂದ ೧೯೪೮ರ ವರೆಗೆ ಇಲ್ಲಿ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಖ್ಯಾತ ಪತ್ರಿಕಾಕರ್ತ ಹಾಗೂ ಬರಹಗಾರ ಶ್ರೀ ಎಂ. ವಿ. ಕಾಮತ್, ಸಚಿವರಾದ ಶ್ರೀ, ವಿ. ಎಸ್. ಆಚಾರ್ಯ, ವಿದ್ವಾಂಸರಾದ ಕು.ಶಿ. ಹರಿದಾಸಭಟ್ಟ ಮುಂತಾದ ಮಹನೀಯರು ಈ ಸಂಸ್ಥೆಯ ಹೆಸರಾಂತ ಹಳೆ ವಿದ್ಯಾರ್ಥಿಗಳು. ಪ್ರೌಢಶಾಲೆಯೊಂದಿಗೆ ಪ್ರಸ್ತುತ ಪದವಿ ಪೂರ್ವ ಶಿಕ್ಷಣವನ್ನು ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ನೀಡುತ್ತಿರುವ ಈ ಸಂಸ್ಥೆ ೨೦೦೬-೦೭ನೇ ಸಾಲಿಗೆ ೪೭೦ ವಿದ್ಯಾರ್ಥಿಗಳನ್ನೂ, ೧೩ ಮಂದಿ ಉಪನ್ಯಾಸಕರನ್ನು ಹೊಂದಿತ್ತು. ಪ್ರೌಢಶಾಲಾ ವಿಭಾಗದಲ್ಲಿ ಮೇಲ್ಕಂಡ ಸಾಲಿಗೆ ೮೭ ಮಕ್ಕಳು (೨೫ ಹೆಣ್ಣು) ಒಂಭತ್ತು ಮಂದಿ ಅಧ್ಯಾಪಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು.

**ಕೋಷ್ಟಕ. ೧೩.೧೩: ೨೦೦೫-೦೬ನೇ ಸಾಲಿಗೆ ಪ್ರೌಢ ಶಾಲೆಗಳ ವಿವರ**

| ಕ್ರ.ಸಂ. | ತಾಲೂಕು | ಒಟ್ಟು ಶಾಲೆಗಳ ಸಂಖ್ಯೆ | | | ಒಟ್ಟು ಮಕ್ಕಳ ಸಂಖ್ಯೆ | | ಒಟ್ಟು ಬೋಧಕ ಸಿಬ್ಬಂದಿ | |
|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಗಂಡು | ಹೆಣ್ಣು | ಗಂಡು | ಹೆಣ್ಣು |
| ೧ | ಉಡುಪಿ | ೩೪ | ೪೩ | ೨೩ | ೧೩,೨೦೭ | ೧೨,೩೨೧ | ೪೮೭ | ೫೯೮ |
| ೨ | ಕಾರ್ಕಳ | ೨೩ | ೧೧ | ೮ | ೫,೫೮೮ | ೫,೪೦೭ | ೧೯೭ | ೧೭೪ |
| ೩ | ಕುಂದಾಪುರ | ೨೯ | ೧೦ | ೨೦ | ೧೦,೩೨೧ | ೧೦,೦೬೨ | ೨೯೬ | ೨೨೪ |
| | ಒಟ್ಟು | ೮೬ | ೬೪ | ೫೧ | ೨೯,೧೧೬ | ೨೭,೭೯೦ | ೯೮೦ | ೭೯೬ |

## ಎಸ್ಸೆಸ್ಸೆಲ್ಸಿ ಪರೀಕ್ಷಾ ವಿವರ

ರಾಜ್ಯ ಎಸ್ಸೆಸ್ಸೆಲ್ಸಿ ಪರೀಕ್ಷಾ ಮಂಡಳಿ ಪ್ರೌಢ ಶಾಲೆಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುತ್ತದೆ. ೨೦೦೦ ದಿಂದ ೨೦೦೫ರ ವರೆಗೆ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೧೩.೧೪**

| ವರ್ಷ | ಗಂಡುಮಕ್ಕಳ ಸಂಖ್ಯೆ | | | ಹೆಣ್ಣು ಮಕ್ಕಳ ಸಂಖ್ಯೆ | | | ಒಟ್ಟು | | |
|---|---|---|---|---|---|---|---|---|---|
| | ಹಾಜರಾದವರ ಸಂಖ್ಯೆ | ಉತ್ತೀರ್ಣರಾದವರ ಸಂಖ್ಯೆ | ಶೇಕಡಾ ಫಲಿತಾಂಶ | ಹಾಜರಾದವರ ಸಂಖ್ಯೆ | ಉತ್ತೀರ್ಣರಾದವರ ಸಂಖ್ಯೆ | ಶೇಕಡಾ ಫಲಿತಾಂಶ | ಹಾಜರಾದವರ ಸಂಖ್ಯೆ | ಉತ್ತೀರ್ಣರಾದವರ ಸಂಖ್ಯೆ | ಶೇಕಡಾ ಫಲಿತಾಂಶ |
| ೨೦೦೦ | ೬೭೭೪ | ೪೧೩೧ | ೬೦.೯೮ | ೬೭೮೯ | ೪೪೦೨ | ೬೪.೮೪ | ೧೩೫೬೩ | ೮೫೩೩ | ೬೨.೯೧ |
| ೨೦೦೧ | ೬೫೮೬ | ೪೪೭೭ | ೬೭.೯೮ | ೬೭೬೪ | ೪೬೪೫ | ೬೮.೬೭ | ೧೩೩೫೦ | ೯೧೨೨ | ೬೮.೩೩ |
| ೨೦೦೨ | ೭೦೨೭ | ೫೨೭೮ | ೭೫.೧೧ | ೭೨೦೪ | ೫೬೩೩ | ೭೮.೧೯ | ೧೪೨೩೧ | ೧೦೯೧೧ | ೭೬.೬೭ |
| ೨೦೦೩ | ೭೦೨೫ | ೫೧೮೮ | ೭೩.೮೫ | ೭೩೦೭ | ೫೮೦೮ | ೭೯.೪೯ | ೧೪೩೩೨ | ೧೦೯೯೬ | ೭೬.೭೨ |
| ೨೦೦೪ | ೮೫೨೪ | ೬೨೭೩ | ೭೩.೫೯ | ೮೬೬೧ | ೭೦೦೬ | ೮೦.೮೯ | ೧೭೧೮೫ | ೧೩೨೭೯ | ೭೭.೨೭ |
| ೨೦೦೫ | ೮೦೬೮ | ೬೧೦೮ | ೭೫.೭೧ | ೮೨೫೧ | ೬೭೮೭ | ೮೨.೨೬ | ೧೬೩೧೯ | ೧೨೮೯೫ | ೭೯.೦೨ |

## ಕಂಪ್ಯೂಟರ್ ಶಿಕ್ಷಣ

ದೇಶದೆಲ್ಲೆಡೆಯಂತೆ ರಾಜ್ಯದ ಉಡುಪಿ ಜಿಲ್ಲೆಯಲ್ಲಿಯೂ ಇತ್ತೀಚಿನ ಒಂದು ದಶಕದಲ್ಲಿ ಕಂಪ್ಯೂಟರ್ ಶಿಕ್ಷಣ ಬಹಳ ಜನಪ್ರಿಯವಾಗಿದೆ. ಪ್ರಾಥಮಿಕ ಹಂತದಿಂದ ಮೊದಲುಗೊಂಡು ಸ್ನಾತಕೋತ್ತರ ಹಾಗೂ ವೃತ್ತಿ ಶಿಕ್ಷಣ ಹಂತಗಳಲ್ಲಿಯೂ ಕಂಪ್ಯೂಟರ್‌ಗಳ ಪ್ರವೇಶವಾಗಿ, ಇವು ಒಂದು ಅತ್ಯಾವಶ್ಯಕ ಅಂಗವಾಗಿ ರೂಪುಗೊಂಡಿದೆ. ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳಾದ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ ಮುಂತಾದೆಡೆಗಳಲ್ಲಿ ಮೊದಲಿನ ವಾಣಿಜ್ಯ ಶಿಕ್ಷಣದಂತೆ, ಕಂಪ್ಯೂಟರ್ ಶಿಕ್ಷಣವನ್ನೂ ಒಂದು ಪೂರಕ ಶೈಕ್ಷಣಿಕ ಅಂಗದಂತೆ ಕಲಿಯಲಾಗುತ್ತಿದೆ.

## ವಾಣಿಜ್ಯ ಶಿಕ್ಷಣ

ಉಡುಪಿಯಲ್ಲಿ ೧೯೫೩ರಲ್ಲಿ ಪ್ರಾರಂಭವಾದ 'ಪ್ರೋಗ್ರೆಸಿವ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್' ಜಿಲ್ಲೆಯ ಪ್ರಥಮ ವಾಣಿಜ್ಯ ಶಿಕ್ಷಣ ಸಂಸ್ಥೆ ಎಂದು ತಿಳಿದುಬರುತ್ತದೆ. ನಂತರ ೧೯೬೮ರಲ್ಲಿ ಉಡುಪಿಯ ಮೂರ್ತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಸ್ಥಾಪನೆಯಾಯಿತು. ರಾಜ್ಯದ ಎಲ್ಲೆಡೆಯಂತೆ ಜಿಲ್ಲೆಯಲ್ಲಿಯೂ ವಾಣಿಜ್ಯ ಶಿಕ್ಷಣವು ಖಾಸಗಿ ವಾಣಿಜ್ಯ ಶಾಲೆಗಳಲ್ಲಿ ನೀಡಲ್ಪಡುತ್ತಿತ್ತು. ೧೯೭೯–೮೦ರ ವರೆಗೆ ವಾಣಿಜ್ಯಶಾಸ್ತ್ರ ಪ್ರೌಢಶಾಲೆಗಳ ಪಠ್ಯಕ್ರಮದಲ್ಲಿ ಒಂದು ಬೋಧನಾ ವಿಷಯವಾಗಿದ್ದಿತು. ಆ ವರ್ಷದಿಂದ ಐಚ್ಛಿಕ ವಿಷಯಗಳಿಲ್ಲದ ಪಠ್ಯಕ್ರಮ ಜಾರಿಯಾದುದರಿಂದ, ಪ್ರೌಢಶಾಲೆಗಳಲ್ಲಿ ಈ ವಿಷಯದ ಬೋಧನೆ ರದ್ದಾಯಿತು.

ಸಾಮಾನ್ಯವಾಗಿ ವಾಣಿಜ್ಯ ಶಿಕ್ಷಣವು ಖಾಸಗಿ ಸಂಸ್ಥೆಗಳಲ್ಲಿ ಬೆಳಗ್ಗೆ ಹಾಗೂ ಸಂಜೆ ನೀಡಲ್ಪಡುತ್ತಿತ್ತು. ಈ ಪರಿಪಾಠ ಈಗಲೂ ಚಾಲ್ತಿಯಲ್ಲಿದೆ. ಕಿರಿಯ ಬೆರಳಚ್ಚು ಮತ್ತು ಶೀಘ್ರಲಿಪಿ ಹಾಗೂ ಹಿರಿಯ ಬೆರಳಚ್ಚು ಮತ್ತು ಹಿರಿಯ ಶೀಘ್ರಲಿಪಿ ವಿಷಯಗಳಲ್ಲಿ ತರಬೇತಿ ನೀಡುವ ಈ ಸಂಸ್ಥೆಗಳು ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಆಡಳಿತದಡಿ ವರ್ಷಕ್ಕೊಮ್ಮೆ ಪರೀಕ್ಷೆಗಳನ್ನು ನಡೆಸುತ್ತವೆ. ಆದರೆ ಕಂಪ್ಯೂಟರ್ ಶಿಕ್ಷಣ ಅತ್ಯಂತ ಜನಪ್ರಿಯವಾಗಿರುವ ಇಂದಿನ ದಿನಗಳಲ್ಲಿ ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಬೆರಳಚ್ಚು, ಶೀಘ್ರಲಿಪಿ ಬೋಧನೆಯೊಂದಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತವೆ. ಈ ಸಂಸ್ಥೆಗಳಿಗೆ ಸರಕಾರದಿಂದ ಅನುದಾನ ದೊರೆಯುತ್ತದೆ. ಅವಿಭಜಿತ ಜಿಲ್ಲೆಯಲ್ಲಿ ೧೯೭೨ರ ವೇಳೆಗೆ ೪೮ ಖಾಸಗಿ ವಾಣಿಜ್ಯ ಶಿಕ್ಷಣ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ಒಟ್ಟು ೬,೯೨೭ (೩,೮೭೬ ಗಂ, ೩,೦೫೧ ಹೆ)ಮಕ್ಕಳು ಒಟ್ಟು ೧೪೧ ಮಂದಿ ಬೋಧಕ ಸಿಬ್ಬಂದಿಯ ಮಾರ್ಗದರ್ಶನದಲ್ಲಿ ವಾಣಿಜ್ಯ ಶಿಕ್ಷಣ ಪಡೆಯುತ್ತಿದ್ದರು.

ವಾಣಿಜ್ಯ ಶಿಕ್ಷಣದ ಉಪಯೋಗ ನೀಡುವ ಬೆರಳಚ್ಚು ಯಂತ್ರಗಳು ಈಚೆಗೆ ಕಂಪ್ಯೂಟರ್‌ಗಳಿಂದ ಮೂಲೆಗುಂಪಾಗಿ, ಈ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಲ್ಲಿ ಆಸಕ್ತಿ ಕಡಿಮೆಯಾಗಿದೆ. ಇದರಿಂದಾಗಿ ವಾಣಿಜ್ಯ ವಿದ್ಯಾಸಂಸ್ಥೆಗಳೂ ಎಲ್ಲೆಡೆ ಮುಚ್ಚಲ್ಪಡುತ್ತಿವೆ. ೨೦೦೬–೦೭ನೇ ಸಾಲಿಗೆ ಜಿಲ್ಲೆಯಲ್ಲಿ ಕೇವಲ ಒಂಬತ್ತು ವಾಣಿಜ್ಯ ವಿದ್ಯಾ ಸಂಸ್ಥೆಗಳು (ಕಾರ್ಕಳ–ಒಂದು, ಕುಂದಾಪುರ–ನಾಲ್ಕು ಮತ್ತು ಉಡುಪಿ–ನಾಲ್ಕು) ಕಾರ್ಯನಿರ್ವಹಿಸುತ್ತಿದ್ದವು.

## ದೈಹಿಕ ಶಿಕ್ಷಣ

ಶಾಲಾಮಟ್ಟದಲ್ಲಿ ದೈಹಿಕ ಶಿಕ್ಷಣ ನೀಡಲು ಜಿಲ್ಲೆಯ ಡಿಡಿಪಿಐ ಕಛೇರಿಗೆ ಸೇರಿದಂತೆ ಒಂದು ದೈಹಿಕ ಶಿಕ್ಷಣ ವಿಭಾಗವು ಒಬ್ಬ ದೈಹಿಕ ಶಿಕ್ಷಣ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಇವರು ಪ್ರಾಥಮಿಕ ಶಾಲೆಗಳ ದೈಹಿಕ ಶಿಕ್ಷಣ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಪ್ರೌಢ ಶಾಲೆಗಳ ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ಮೈಸೂರು ವಿಭಾಗದ ದೈಹಿಕ ಶಿಕ್ಷಣ ಸಹಾಯಕ ಸೂಪರಿಂಟೆಂಡರು ನಿರ್ವಹಿಸುತ್ತಿದ್ದರು.

ಪ್ರಸ್ತುತ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ಉಸ್ತುವಾರಿ ಮಾಡಲು ಅಂತರ ಜಿಲ್ಲಾ ದೈಹಿಕ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಸೇವಾದಳ, ಸ್ಕೌಟ್ಸ್ ಹಾಗೂ ಗೈಡ್ಸ್ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಒಬ್ಬ ದೈಹಿಕ ಶಿಕ್ಷಣ ಸೂಪರಿಂಟೆಂಡೆಂಟ್ ಅವರು ನಿಯೋಜಿತರಾಗಿರುತ್ತಾರೆ.

## ಸಂಸ್ಕೃತ ಶಿಕ್ಷಣ

ಪ್ರಾಚೀನ ಭಾಷೆಯಾದ ಸಂಸ್ಕೃತ, ಪೂರ್ವದಿಂದಲೂ ಜಿಲ್ಲೆಯಲ್ಲಿ ಗಣನೀಯ ಸ್ಥಾನವನ್ನು ಹೊಂದಿ, ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಜಿಲ್ಲೆಯ ಜನಜೀವನ ಉತ್ತಮಗೊಳ್ಳಲು ದಾರಿದೀಪವಾಗಿದೆ. ಸ್ಥಳೀಯರ ಕೊಂಕಣಿ ಹಾಗೂ ನೆರೆಯ ಕೇರಳಿಯರ ಭಾಷೆಗಳಿಗೂ ಅತಿ

ಹತ್ತಿರವಾದುದರಿಂದ, ಶೈಕ್ಷಣಿಕವಾಗಿಯೂ ಇದು ಜನಾನುರಾಗಿಯಾಗಿದೆ. ಕಲಿಕೆಯ ದೃಷ್ಟಿಯಿಂದ ಮಾತ್ರವಲ್ಲದೆ ಅಂಕ ಗಳಿಸುವ ದೃಷ್ಟಿಯಿಂದಲೂ ಉಪಯುಕ್ತವಾದ ಭಾಷೆಯಾಗಿರುವುದರಿಂದ ಜಿಲ್ಲೆಯಲ್ಲಿ ಸಂಸ್ಕೃತ ಭಾಷಾ ಕಲಿಕೆ ವ್ಯಾಪಕವಾಗಿದೆ. ದೇವಭಾಷೆ ಎಂಬ ಸ್ಥಾನ ಪಡೆದಿದ್ದ ಈ ಭಾಷೆ ಹಲವಾರು ಕುಟುಂಬಗಳಲ್ಲಿ ದೈನಂದಿನ ಆಡುಭಾಷೆಯೂ ಆಗಿದ್ದಿತು. ಕೆಲವು ಕಾಲ ಅವಗಣನೆ ಅನುಭವಿಸಿ, ಇತ್ತೀಚಿನ ವರ್ಷಗಳಲ್ಲಿ ಪುನಃ ಪ್ರವರ್ಧಮಾನ ಹೊಂದಿರುವ ಈ ಭಾಷೆಯನ್ನು ಈಗಲೂ ದೇಶದೆಲ್ಲೆಡೆಯಂತೆ ಜಿಲ್ಲೆಯಲ್ಲಿಯೂ ಹಲವು ಕುಟುಂಬಗಳಲ್ಲಿ ಆಡುಭಾಷೆಯಾಗಿಯೂ ಬಳಸಲಾಗುತ್ತಿದೆ.

ನೂರು ವರ್ಷಕ್ಕೂ ಮೀರಿದ ಬೋಧನೆ ಸಾಧನೆ ಮಾಡಿದ ಉಡುಪಿಯ ಶ್ರೀಮನ್ ಮಧ್ವ ಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಕಾಲೇಜು ಹಾಗೂ ಕಾರ್ಕಳದ ಭುವನೇಂದ್ರ ಸಂಸ್ಕೃತ ಕಾಲೇಜುಗಳು ಉಡುಪಿ ಜಿಲ್ಲೆಯ ಪುರಾತನ ಉನ್ನತ ಸಂಸ್ಕೃತ ಶಿಕ್ಷಣ ಸಂಸ್ಥೆಗಳು. ಇವುಗಳ ಪೈಕಿ ಭುವನೇಂದ್ರ ಸಂಸ್ಕೃತ ಕಾಲೇಜು ೧೯೭೦ರಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಾಗಿ ಮಾರ್ಪಟ್ಟು ಕಾರ್ಯ ನಿರ್ವಹಿಸುತ್ತಿದೆ.

## ಶ್ರೀಮನ್ ಮಧ್ವ ಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾ ಪಾಠಶಾಲಾ

ಪೂರ್ವದಿಂದಲೂ ಉಡುಪಿಯ ಶ್ರೀಮದನಂತೇಶ್ವರ ದೇವಾಲಯದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಸಂಸ್ಕೃತ ಶಿಕ್ಷಣ ನೀಡಲ್ಪಡುತ್ತಿತ್ತೆಂದು ಐತಿಹಾಸಿಕವಾಗಿ ತಿಳಿದುಬರುತ್ತದೆ. ನೂತನ ಶಿಕ್ಷಣ ಪದ್ಧತಿಯು ಪ್ರಾರಂಭವಾದಾಗ, ದ್ವೈತ ವೇದಾಂತ ವಿದ್ಯಾಪ್ರಸಾರ ಹಾಗೂ ವೇದ ವೇದಾಂಗಗಳ ಅಧ್ಯಾಪನಕ್ಕಾಗಿ ಶ್ರೀ ಅದಮಾರು ಮಠದ ಶ್ರೀ ವಿಭುಧಪ್ರಿಯ ತೀರ್ಥ ಹಾಗೂ ಶ್ರೀ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥರ ನೇತೃತ್ವದಲ್ಲಿ ೨೯-೮-೧೯೦೪ ರಂದು ಅನಂತೇಶ್ವರ ದೇವಾಲಯದಲ್ಲಿ "ಶ್ರೀಮನ್ ಮಧ್ವ ಸಿದ್ಧಾಂತ ಪ್ರಬೋಧಿನಿ" ಸಂಸ್ಕೃತ ಶಾಲೆ ಪ್ರಾರಂಭಗೊಂಡಿತು. ಶಾಲೆಯ ಸ್ಥಾಪನೆಯ ಬಗ್ಗೆ ಈ ಮಹನೀಯರು ಬರೆದ ಪತ್ರಗಳು ಇಂದಿಗೂ ಆಡಳಿತ ಮಂಡಳಿಯ ವಶದಲ್ಲಿ ಇರುತ್ತದೆ. ೧೯೧೩ರಲ್ಲಿ ಇದರ ಆಡಳಿತಾಭಿವೃದ್ಧಿಗಾಗಿ ೧೫ ಮಂದಿಯ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದು, ಶಾಲೆಯ ಅಧಿಕೃತ ನೋಂದಣಿಯೂ ಆಯಿತು. ೧೯೧೯ರಲ್ಲಿ ಈ ಸಂಸ್ಥೆ ಮಹಾ ಪಾಠಶಾಲೆಯಾಗಿ ಮೇಲ್ದರ್ಜೆಗೆ ಏರಿತು. ಮದರಾಸು ವಿಶ್ವವಿದ್ಯಾಲಯದ ನಿರ್ದೇಶನದಂತೆ ಇದರ ದಕ್ಷ ಆಡಳಿತಕ್ಕಾಗಿ ಪ್ರಾಂಶುಪಾಲರ ನೇಮಕಕ್ಕೆ ಅನುಮತಿ ದೊರೆತು, ಮಡಿಕೇರಿಯ ದಾಸಪ್ಪಯ್ಯ ಪ್ರಥಮ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡರು. ಕ್ರಮೇಣ ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾದುದರಿಂದ, ಅನಂತೇಶ್ವರ ದೇವಾಲಯದಲ್ಲಿ ಸ್ಥಳಾವಕಾಶ ಕಡಿಮೆಯಾಗಿ, ಚಂದ್ರೇಶ್ವರ ದೇವಾಲಯದಲ್ಲಿಯೂ ಪ್ರಮುಖ ತರಗತಿಗಳು ನಡೆದವು. ಆದರೂ ಸ್ಥಳದ ಸಮಸ್ಯೆ ಮುಂದುವರೆದಾಗ, ೧೯೪೦ರಲ್ಲಿ ಅದಮಾರು ಮಠದ ಶ್ರೀ ವಿಭುಧಮಾನ್ಯ ತೀರ್ಥರು ಕಡೆಕೊಪ್ಪಲದ 'ವಿಭುಧಪ್ರಿಯ ಭವನ'ವನ್ನು ನೀಡಿದರು. ಇದೇ ಮಹನೀಯರ ಪ್ರೇರೇಪಣೆಯಿಂದ ಮದರಾಸಿನಲ್ಲಿ ಖ್ಯಾತರಾಗಿದ್ದ ಉಡುಪಿಯ ಡಾ. ಯು ರಾಮರಾಯರು ಪಟ್ಟಣದ ಹೃದಯಭಾಗದಲ್ಲಿದ್ದ ತಮ್ಮ ಒಂದೂವರೆ ಎಕರೆ ನಿವೇಶನವನ್ನು ೧೯೪೪ರಲ್ಲಿ ಪಾಠಶಾಲೆಯ ಕಟ್ಟಡಕ್ಕಾಗಿ ದಾನಮಾಡಿದರು. ಹಲವಾರು ಯತಿವರೇಣ್ಯರು ನಿಸ್ವಾರ್ಥ ಮನೋಭಾವದಿಂದ ಊರೂರು ಪ್ರವಾಸ ಮಾಡಿ ಸಂಚಯಿಸಿದ ಹಣದಿಂದ ಆರು ವರ್ಷಗಳಲ್ಲಿ ಸುಮಾರು ಮೂರು ಲಕ್ಷ ರೂ.ಗಳ ನೂತನ ಕಟ್ಟಡ ೧೪-೬-೧೯೫೧ರಲ್ಲಿ ನಿರ್ಮಾಣವಾಯಿತು. ವಿವಿಧ ಸಂಸ್ಕೃತ ಪರೀಕ್ಷೆಗಳಿಗೆ ಸಂಬಂಧಿಸಿದ ತರಗತಿಗಳನ್ನು ನಡೆಸಲು ಕರ್ನಾಟಕ ಸರಕಾರ ೧೯೬೮ರಿಂದ ಮನ್ನಣೆ ನೀಡಿರುತ್ತದೆ. ೧೯೭೨ ರಿಂದ ಈ ಮಹಾ ಪಾಠಶಾಲೆಗೆ ಸರಕಾರದ ಅನುದಾನವೂ ಲಭ್ಯವಾಗಿರುತ್ತದೆ. ಸಂಸ್ಥೆಯಲ್ಲಿ ಪ್ರವೇಶಾವಕಾಶ ಪಡೆಯಲು ಸಂಸ್ಕೃತ ವಿಷಯದೊಡನೆ ಎಸ್ಸೆಸ್ಸೆಲ್ಸಿ ಪಾಸು ಮಾಡಿರಬೇಕು ಅಥವಾ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ 'ಕಾವ' ಪರೀಕ್ಷೆ ಪಾಸು ಮಾಡಿರಬೇಕು.

ಇಲ್ಲಿ ನೀಡಲ್ಪಡುವ ಎಂಟು ವರ್ಷಗಳ ಅವಧಿಯ ವಿದ್ವತ್ ಪರೀಕ್ಷೆ ನಾಲ್ಕು ವಿಷಯಗಳನ್ನೊಳಗೊಂಡಿರುತ್ತದೆ – ದ್ವೈತ, ನವೀನನ್ಯಾಯ, ಜ್ಯೋತಿಷ ಹಾಗೂ ಅಲಂಕಾರ. ಜ್ಯೋತಿಷ ಶಾಸ್ತ್ರವು

ಬೋಧಿಸಲ್ಪಡುವ ರಾಜ್ಯದ ಏಕೈಕ ಶಿಕ್ಷಣ ಸಂಸ್ಥೆ ಇದಾಗಿದೆ. ಈ ವಿಭಾಗದ ನಿವೃತ್ತ ಮುಖ್ಯಸ್ಥರಾದ ಸಾಲಿಗ್ರಾಮದ ಶ್ರೀ ಶ್ರೀನಿವಾಸ ಅಡಿಗರು ಖ್ಯಾತ ಶ್ರೀಕೃಷ್ಣ ಪಂಚಾಂಗದ ಕರ್ತರಾಗಿರುತ್ತಾರೆ. ೨೦೦೬–೦೭ನೇ ಶೈಕ್ಷಣಿಕ ವರ್ಷಕ್ಕೆ ಇಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳು (ನಾಲ್ಕು ಹೆಣ್ಣು ಸೇರಿ) ಎಂಟು ಮಂದಿ ಉಪನ್ಯಾಸಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈ ಮಹಾ ಪಾಠಶಾಲೆಯ ಆವರಣದಲ್ಲಿ ಒಂದು ಪ್ರೌಢಶಾಲೆ ಹಾಗೂ ಒಂದು ಸಂಸ್ಕೃತ ಪ್ರಧಾನವಾದ ಪ್ರಾಥಮಿಕ ಶಾಲೆಗಳೂ ಇದೇ ಆಡಳಿತ ಮಂಡಳಿಯಡಿ ಕಾರ್ಯನಿರ್ವಹಿಸುತ್ತಿವೆ. ಪ್ರೌಢಶಾಲೆಯಲ್ಲಿ ೬ ರಿಂದ ೧೦ರವರೆಗೂ ತರಗತಿಗಳಿವೆ. ಇಲ್ಲಿ ಒಟ್ಟು (೨೦೦೬–೦೭); ೨೩೫ (೩೦ ಹೆ.ಮ) ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಒಂಬತ್ತು ಮಂದಿ ಶಿಕ್ಷಕರಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಮೇಲಿನ ವರ್ಷಕ್ಕೆ ೧೦೦ ಮಂದಿ ಮಕ್ಕಳು ಐದು ಮಂದಿ ಶಿಕ್ಷಕರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಕಾರ್ಕಳದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಭುವನೇಂದ್ರ ಪ್ರಥಮ ದರ್ಜೆ ಕಾಲೇಜು ಮೂಲತಃ ಹಳೆಯ ಖ್ಯಾತ ಸಂಸ್ಕೃತ ಕಾಲೇಜಾಗಿದ್ದಿತು. ೧೯೭೦ರಲ್ಲಿ ಇದನ್ನು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಲಾಯಿತು. ಕಟೀಲ್‌ನಲ್ಲಿರುವ ಶ್ರೀ ದುರ್ಗಾ ಪರಮೇಶ್ವರಿ ಸಂಸ್ಕೃತ ಪ್ರತಿಷ್ಠಾನ (ಎಸ್.ಡಿ.ಪಿ.ಟಿ) ಸ್ನಾತಕೋತ್ತರ ಸಂಸ್ಕೃತ ಶಿಕ್ಷಣ ನೀಡುವ ಸಂಸ್ಥೆಯಾಗಿದ್ದು, ಮಂಗಳೂರು ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುತ್ತದೆ ಇವಲ್ಲದೆ ಜಿಲ್ಲೆಯಾದ್ಯಂತ ಹಲವಾರು ಪ್ರಾಚೀನ ಸಂಸ್ಕೃತ ಪಾಠಶಾಲೆಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕಾರ್ಕಳ ಮತ್ತು ಕೊಲ್ಲೂರುಗಳ ಪಾಠಶಾಲೆಗಳು ಅತಿ ಹಳೆಯ ಪಾಠಶಾಲೆಗಳಾಗಿವೆ.

### ಪ್ರಾಥಮಿಕ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆಗಳು (D.Ed.)

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೪೭ರ ವೇಳೆಗೆ ನಾಲ್ಕು ಟಿ.ಟಿ.ಐ.ಗಳು (ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್) ಕಾರ್ಯನಿರ್ವಹಿಸುತ್ತಿದ್ದವು. ಇವುಗಳ ಸಂಖ್ಯೆ ೧೯೭೧–೭೨ರ ವೇಳೆಗೆ ಏಳಕ್ಕೆ (ಮೂರು ಸರಕಾರಿ, ನಾಲ್ಕು ಖಾಸಗಿ) ಹೆಚ್ಚಳಗೊಂಡಿತು. ಇವುಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೮೧೮ (೨೯೫ ಗಂ–೫೨೩ಹೆ) ಆಗಿದ್ದು, ಅಧ್ಯಾಪಕರ ಸಂಖ್ಯೆ ೨೨ ಆಗಿದ್ದಿತು. ೨೦೦೬–೦೭ನೇ ಸಾಲಿಗೆ ಜಿಲ್ಲೆಯಲ್ಲಿ ಇವುಗಳ ಸಂಖ್ಯೆ ೧೦ ಆಗಿದ್ದು, ವಿದ್ಯಾರ್ಥಿಗಳ ಸಂಖ್ಯೆ ೯೮೦ ಹಾಗೂ ಅಧ್ಯಾಪಕರ ಸಂಖ್ಯೆ ೩೩ ಆಗಿತ್ತು.

### ಜವಾಹರ್ ನವೋದಯ ವಿದ್ಯಾಲಯ

ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಗನುಗುಣವಾಗಿ ೧೯೮೬ರಲ್ಲಿ ನವೋದಯ ವಿದ್ಯಾಲಯ ಯೋಜನೆ ಪ್ರಾರಂಭವಾಯಿತು. ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಳನ್ನು ಗಮನದಲ್ಲಿಟ್ಟುಕೊಂಡು ಮೀಸಲಾತಿ ನಿಯಮಗಳಿಗೆ ಬದ್ಧವಾಗಿ, ಹೆಚ್ಚಾಗಿ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಈ ಯೋಜನೆಯಡಿ, ದೇಶದ ಪ್ರತೀ ಜಿಲ್ಲೆಗೆ ಒಂದರಂತೆ ನವೋದಯ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಶಾಲೆಗಳು ವಸತಿ ಶಾಲೆಗಳಾಗಿದ್ದು, ಆರರಿಂದ ಹನ್ನೆರಡನೇ ತರಗತಿಯವರೆಗೆ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಶಿಕ್ಷಣ ನೀಡುತ್ತವೆ. ನವದೆಹಲಿಯ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿ.ಬಿ.ಎಸ್.ಇ) ನಡೆಸುವ ಪ್ರೌಢ ಹಾಗೂ ಉನ್ನತ ಪ್ರೌಢ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುತ್ತವೆ. ತ್ರಿಭಾಷಾ ಸೂತ್ರದನ್ವಯ ಉತ್ತರ ಹಾಗೂ ದಕ್ಷಿಣ ಭಾರತದ ಮಕ್ಕಳನ್ನು ವಿನಿಮಯ ಮಾಡಿಕೊಳ್ಳಲು ಅನುಕೂಲವಾಗುವಂತೆ ಒಂದು ಸ್ಥಳೀಯ ಭಾಷೆಯನ್ನು ಪಠ್ಯ ಒಳಗೊಂಡಿರುತ್ತದೆ. ಆರರಿಂದ ಎಂಟನೇ ತರಗತಿಯವರೆಗೆ ಮಕ್ಕಳ ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಿದ್ದು, ತದನಂತರ ಅದು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಾಗಿರುತ್ತದೆ.

ನವದೆಹಲಿಯ 'ನ್ಯಾಷನಲ್ ಕೌನ್ಸಿಲ್ ಫಾರ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್' (ಎನ್.ಸಿ.ಇ.ಆರ್.ಟಿ) ನಡೆಸುವ ಪ್ರವೇಶ ಪರೀಕ್ಷೆ ಪಾಸು ಮಾಡುವುದರ ಮೂಲಕ ಈ ವಿದ್ಯಾಲಯಗಳಲ್ಲಿ

ಆರನೇ ತರಗತಿಗೆ ದಾಖಲಾಗಬಹುದು. ಪ್ರತೀ ವರ್ಷ ಒಟ್ಟು ೮೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು, ಇದರಲ್ಲಿ ಶೇ. ೭೫ರಷ್ಟು ಗ್ರಾಮೀಣ ಮಕ್ಕಳಿಗೆ ಮೀಸಲಿದೆ. ಉಳಿದಂತೆ ಸ್ಥಳೀಯ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದು. ಈ ಶಾಲೆಗಳಲ್ಲಿ ಶಿಕ್ಷಣ ಉಚಿತವಾಗಿದ್ದು, ವಸತಿ, ಪಠ್ಯಪುಸ್ತಕ ಸಮವಸ್ತ್ರ ಲೇಖನ ಸಾಮಗ್ರಿಗಳೂ ಸಹ ಉಚಿತವಾಗಿ ಸರ್ಕಾರದಿಂದ ದೊರೆಯುತ್ತವೆ. ವರ್ಷಕ್ಕೊಮ್ಮೆ ತಂತಮ್ಮ ಊರುಗಳಿಗೆ ಹೋಗಿ ಬರಲು ಮಕ್ಕಳಿಗೆ ಬಸ್ಸು ಅಥವಾ ರೈಲು ಪ್ರಯಾಣದ ಖರ್ಚನ್ನೂ ನೀಡಲಾಗುತ್ತದೆ. ಜಿಲ್ಲೆಯ ಹೆಬ್ರಿಯಲ್ಲಿ ೧೯೯೪ರಲ್ಲಿ ಪ್ರಾರಂಭವಾದ ಇಂತಹ ಶಾಲೆ ಸ್ಥಳೀಯರ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ ಯಶಸ್ವಿಯಾಗಿದೆ. ೨೦೦೬-೦೭ನೇ ಸಾಲಿಗೆ ಈ ಶಾಲೆಯ ೬ ರಿಂದ ೧೨ರ ವರೆಗಿನ ತರಗತಿಗಳಲ್ಲಿ ಒಟ್ಟು ೪೪೬ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ೨೬ ಮಂದಿ ಬೋಧಕ ಸಿಬ್ಬಂದಿ ಇದ್ದರು. ೨೦೦೬ರ ಎರಡನೇ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಈ ಶಾಳೆಯ ಪವನ್‌ಕುಮಾರ್ ಅತ್ಯಧಿಕ ಅಂಕ ಪಡೆದು ರಾಷ್ಟ್ರಕ್ಕೇ ಪ್ರಥಮ ಸ್ಥಾನ ಪಡೆದಿರುತ್ತಾನೆ. ಈ ಶೈಕ್ಷಣಿಕ ಸಾಧನೆಗಾಗಿ ಈತನಿಗೆ ಕೇಂದ್ರ ಸರಕಾರದ ವಿದ್ಯಾರ್ಥಿ ವೇತನ ದೊರೆತಿರುತ್ತದೆ.

**ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ**

ಕರ್ನಾಟಕ ವಸತಿ ಶೈಕ್ಷಣಿಕ ಸಂಸ್ಥೆಯ ಆಡಳಿತದಡಿ ನಡೆಸಲ್ಪಡುವ ಮೇಲ್ಕಂಡ ಶಾಲೆಯು ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಇಂತಹ ಶಾಲೆಗಳ ಆಡಳಿತ ಮಂಡಳಿಯ ಅಧ್ಯಕ್ಷರಾಗಿಯೂ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿಯೂ, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿ.ಇ.ಓ.), ಜಿಲ್ಲಾ ಸರ್ಜನ್, ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

## ಪದವಿ ಪೂರ್ವ ಶಿಕ್ಷಣ

೧೯೭೦ರ ವರೆಗೆ ಅಸ್ತಿತ್ವದಲ್ಲಿದ್ದ ಸೆಕೆಂಡರಿ ಶಾಲೆಗಳ ಹನ್ನೊಂದು ಹಾಗೂ ಹನ್ನೆರಡನೇ ತರಗತಿಗಳು ಹಾಗೂ ಹಲವು ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಡೆಯುತ್ತಿದ್ದ ಒಂದು ವರ್ಷದ ಪಿಯುಸಿ ತರಗತಿಗಳು ೧೯೭೧ರಲ್ಲಿ ಅಂತ್ಯಗೊಂಡು, ಎರಡು ವರ್ಷದ ಪಿಯುಸಿ ಶಿಕ್ಷಣ ಕ್ರಮ ರಾಜ್ಯದಲ್ಲಿ ಜಾರಿಯಾದಾಗ, ಜಿಲ್ಲೆಯ ಹಲವಾರು ಜಿಲ್ಲಾ ಹಾಗೂ ತಾಲೂಕು ಮಂಡಳಿ ಹೈಸ್ಕೂಲುಗಳು ಸರಕಾರದ ಆಡಳಿತಕ್ಕೊಳಪಟ್ಟಿದ್ದವು. ಇಂತಹ ಹಲವು ಶಾಲೆಗಳ ವಿಸ್ತರಣಗಳಾದ ಪಿ.ಯು.ಸಿ. ತರಗತಿಗಳೂ (೧೧ ಹಾಗೂ ೧೨ನೇ ತರಗತಿಗಳು) ಆಗಷ್ಟೇ ಅಸ್ತಿತ್ವಕ್ಕೆ ಬಂದ "ಪದವಿ ಪೂರ್ವ ಶಿಕ್ಷಣ ಮಂಡಳಿ"ಯ ಆಡಳಿತಕ್ಕೊಳಪಟ್ಟವು. ಕಾಲಕ್ರಮದಲ್ಲಿ ಈ ಮಂಡಳಿ ಒಂದು ನಿರ್ದೇಶನಾಲಯವಾಗಿ ಮಾರ್ಪಟ್ಟಿತು. ಪ್ರಾರಂಭದಲ್ಲಿದ್ದ 'ಕಿರಿಯ ಕಾಲೇಜು' ಎಂಬ ಹೆಸರನ್ನು ೧೯೮೫ರಲ್ಲಿ 'ಪದವಿ ಪೂರ್ವ ಕಾಲೇಜು' ಎಂದು ಬದಲಿಸಲಾಯಿತು.

೨೦೦೫-೦೬ನೇ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಒಟ್ಟು ೬೬ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಉಡುಪಿ ತಾಲೂಕಿನಲ್ಲಿ ೩೩ (೧೩ ಸರಕಾರಿ; ೨೦ ಖಾಸಗಿ), ಕಾರ್ಕಳ ತಾಲೂಕಿನಲ್ಲಿ ಒಟ್ಟು ೧೬ (೦೯ ಸರಕಾರಿ; ೦೭ ಖಾಸಗಿ) ಮತ್ತು ಕುಂದಾಪುರ ತಾಲೂಕಿನಲ್ಲಿ ೧೮ (೧೨ ಸರಕಾರಿ; ೦೬ ಖಾಸಗಿ) ಇದ್ದವು. ೨೦೦೬-೦೭ನೇ ಸಾಲಿಗೆ ಉಡುಪಿ ಜಿಲ್ಲೆಯಲ್ಲಿ ಒಟ್ಟು ೭೩ ಪದವಿ ಪೂರ್ವ ಕಾಲೇಜುಗಳಿದ್ದು, ಅವುಗಳ ಪೈಕಿ ಉಡುಪಿ ತಾಲೂಕಿನಲ್ಲಿ ೩೫ (೧೪ ಸರಕಾರಿ; ೨೧ ಖಾಸಗಿ), ಕಾರ್ಕಳ ತಾಲೂಕಿನಲ್ಲಿ ಒಟ್ಟು ೧೫ (೦೯ ಸರಕಾರಿ; ೦೬ ಖಾಸಗಿ) ಹಾಗೂ ಕುಂದಾಪುರ ತಾಲೂಕಿನಲ್ಲಿ ೨೩ (೧೩ ಸರಕಾರಿ; ೧೦ ಖಾಸಗಿ) ಕಾರ್ಯನಿರ್ವಹಿಸುತ್ತಿದ್ದವು. ಈ ಎಲ್ಲಾ ಕಾಲೇಜುಗಳಿಂದ ೨೦೦೭ರ ವಾರ್ಷಿಕ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಫಲಿತಾಂಶದ ವಿವರಗಳನ್ನು ಕೋಷ್ಟಕ ೧೩.೧೫ರಲ್ಲಿ ನೀಡಲಾಗಿದೆ.

**ಕೋಷ್ಟಕ: ೧೩.೧೫**

| ವಿಷಯ | | ಒಟ್ಟು | ಹೊಸಬರು | ಖಾಸಗಿ ಅಭ್ಯರ್ಥಿಗಳು | ಮರು ಪರೀಕ್ಷಾರ್ಥಿಗಳು | ಗಂಡು | ಹೆಣ್ಣು |
|---|---|---|---|---|---|---|---|
| ಒಟ್ಟು | ಹಾಜರಾದವರು | ೧೧೫೬೮ | ೯೯೬೨ | ೬೭೯ | ೯೨೭ | ೫೫೨೩ | ೬೦೪೫ |
| | ಪಾಸಾದವರು | ೮೮೯೨ | ೮೧೮೦ | ೩೧೪ | ೩೯೮ | ೪೦೨೬ | ೪೮೬೬ |
| | ಶೇಕಡಾ | ೭೬.೮೭ | ೮೨.೧೧ | ೪೬.೨೪ | ೪೨.೯೩ | ೭೨.೯ | ೮೦.೫ |
| ಕಲೆ | ಹಾಜರಾದವರು | ೫೦೧೯ | ೪೦೫೦ | ೫೦೪ | ೪೬೫ | ೧೯೭೬ | ೩೦೪೩ |
| | ಪಾಸಾದವರು | ೩೫೭೫ | ೩೧೩೯ | ೨೨೬ | ೨೧೦ | ೧೨೫೪ | ೨೩೨೧ |
| | ಶೇಕಡಾ | ೭೧.೨೩ | ೭೭.೫೧ | ೪೪.೮೪ | ೪೫.೧೬ | ೬೩.೪೬ | ೭೬.೨೭ |
| ವಾಣಿಜ್ಯ | ಹಾಜರಾದವರು | ೩೫೧೪ | ೩೧೪೪ | ೧೭೫ | ೧೯೫ | ೨೦೦೭ | ೧೫೦೭ |
| | ಪಾಸಾದವರು | ೨೮೫೯ | ೨೬೯೧ | ೮೮ | ೮೦ | ೧೫೫೪ | ೧೩೦೫ |
| | ಶೇಕಡಾ | ೮೧.೩೬ | ೮೫.೫೯ | ೫೦.೨೯ | ೪೧.೦೩ | ೭೭.೪೩ | ೮೬.೬ |
| ವಿಜ್ಞಾನ | ಹಾಜರಾದವರು | ೩೦೩೫ | ೨೭೬೮ | ೦ | ೨೬೭ | ೧೫೪೦ | ೧೪೯೫ |
| | ಪಾಸಾದವರು | ೨೪೫೮ | ೨೩೫೦ | ೦ | ೧೦೮ | ೧೨೧೮ | ೧೨೪೦ |
| | ಶೇಕಡಾ | ೮೦.೯೯ | ೮೪.೯ | ೦ | ೪೦.೪೫ | ೭೯.೦೯ | ೮೨.೯೪ |
| ನಗರ | ಹಾಜರಾದವರು | ೫೮೫೭ | ೪೯೬೩ | ೩೬೨ | ೫೩೨ | ೨೭೫೦ | ೩೧೦೭ |
| | ಪಾಸಾದವರು | ೪೪೬೮ | ೪೦೯೧ | ೧೫೬ | ೨೨೧ | ೧೯೨೪ | ೨೫೪೪ |
| | ಶೇಕಡಾ | ೭೬.೨೮ | ೮೨.೪೩ | ೪೩.೦೯ | ೪೧.೫೪ | ೬೯.೯೬ | ೮೧.೮೮ |
| ಗ್ರಾಮೀಣ | ಹಾಜರಾದವರು | ೫೭೧೧ | ೪೯೯೯ | ೩೧೭ | ೩೯೫ | ೨೭೭೩ | ೨೯೩೮ |
| | ಪಾಸಾದವರು | ೪೪೨೪ | ೪೦೮೯ | ೧೫೮ | ೧೭೭ | ೨೧೦೨ | ೨೩೨೨ |
| | ಶೇಕಡಾ | ೭೭.೪೬ | ೮೧.೮ | ೪೯.೮೪ | ೪೪.೮೧ | ೭೫.೮ | ೭೯.೦೩ |

## ವೃತ್ತಿ ಶಿಕ್ಷಣ

ಪಿ.ಯು.ಸಿ. ಶಿಕ್ಷಣಕ್ಕೆ ಪರ್ಯಾಯವಾದ ಎರಡು ವರ್ಷ ಅವಧಿಯ ವೃತ್ತಿ ಶಿಕ್ಷಣ ಯೋಜನೆ ರಾಜ್ಯದಲ್ಲಿ ೧೯೭೭-೭೮ರಲ್ಲಿ ಪ್ರಾರಂಭಗೊಂಡಿತು. ಎಸ್ಸೆಸ್ಸೆಲ್ಸಿ ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಸೇರುವ ಉನ್ನತ ಶಿಕ್ಷಣಕ್ಕೆ ಇರುವ ಒತ್ತಡವನ್ನು ನಿವಾರಿಸಿ, ಅವರಲ್ಲಿನ ಸುಪ್ತ ನೈಪುಣ್ಯತೆಗೆ ಸೂಕ್ತ ತರಬೇತಿ ನೀಡಿ, ಅದನ್ನು ಪ್ರಕಾಶಗೊಳಿಸಿ, ಅವರು ಸ್ವಾವಲಂಬಿಗಳಾಗಿ ಸ್ವ-ಉದ್ಯೋಗ ಕೈಗೊಳ್ಳಲು ಪ್ರೇರಕವಾಗುವ ಧ್ಯೇಯೋದ್ದೇಶಗಳನ್ನು ಹೊಂದಿರುವ ಈ ಹಂತದ ಶಿಕ್ಷಣ ಗ್ರಾಮೀಣಾಭಿವೃದ್ಧಿ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿ, ರಾಷ್ಟ್ರ ಪ್ರಗತಿಗೆ ಪೂರಕವಾಗಿದೆ. ಜಿಲ್ಲೆಯ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪೂರಕ ಮಾಹಿತಿಯು ಕೆಳಗಿನ ಕೋಷ್ಟಕದಲ್ಲಿದೆ.

**ಕೋಷ್ಟಕ : ೧೩.೧೬**

| ವರ್ಷ | ಪ್ರಥಮ ವರ್ಷ | | | | | | ದ್ವಿತೀಯ ವರ್ಷ | | | | | |
|---|---|---|---|---|---|---|---|---|---|---|---|---|
| | ಹಾಜರಾದವರು | | ಉತ್ತೀರ್ಣರಾದವರು | | ಶೇಕಡಾ | | ಹಾಜರಾದವರು | | ಉತ್ತೀರ್ಣರಾದವರು | | ಶೇಕಡಾ | |
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ೨೦೦೨-೦೩ | ೨೬೬ | ೧೪೧ | ೧೭೫ | ೯೬ | ೬೬.೦೪ | ೬೮.೫೭ | ೧೮೫ | ೧೦೬ | ೧೩೩ | ೭೫ | ೭೨.೨೮ | ೭೧.೪೩ |
| ೨೦೦೩-೦೪ | ೨೬೬ | ೧೧೩ | ೧೯೬ | ೮೪ | ೭೩.೯೬ | ೭೪.೩೪ | ೨೧೧ | ೧೧೮ | ೧೭೨ | ೧೦೩ | ೮೧.೫೨ | ೮೭.೨೯ |
| ೨೦೦೪-೦೫ | ೪೦ | ೦೦ | ೨೭ | ೦೦ | ೬೯.೨೩ | ೦೦ | ೧೮೧ | ೮೨ | ೧೩೪ | ೪೮ | ೭೪.೦೩ | ೫೮.೫೪ |

## ಉನ್ನತ ಶಿಕ್ಷಣ

ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಕಲಾ ಕಾಲೇಜು (ಇಂಟರ್‌ಮೀಡಿಯೇಟ್‌ವರೆಗೆ ಮಾತ್ರ) ಹಾಗೂ ಪದವಿ ತರಗತಿ ಹೊಂದಿದ ಖಾಸಗಿ ಕಾಲೇಜುಗಳಾದ ಸೇಂಟ್ ಅಲೋಷಿಯಸ್ ಕಾಲೇಜು ಮತ್ತು ಸೇಂಟ್ ಅಗ್ನೆಸ್ ಕಾಲೇಜು ಮಾತ್ರ ಕಾರ್ಯನಿರ್ವಹಿಸುತ್ತಿದ್ದವು. ಮಂಗಳೂರಿನ ಸರಕಾರಿ ಕಾಲೇಜನ್ನು ೧೯೪೮ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಲಾಯಿತು. ಈ ಶತಮಾನದ ಮಧ್ಯಭಾಗದಲ್ಲಿ ಮಣಿಪಾಲದ ಡಾ. ಟಿ.ಎಂ.ಎ. ಪೈ ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ನಡೆಸಿದರು. ಉಡುಪಿಯಲ್ಲಿ ೧೯೪೯ರಲ್ಲಿ ಪ್ರಾರಂಭಗೊಂಡ ಮಹಾತ್ಮಗಾಂಧಿ ಸ್ಮಾರಕ ಕಾಲೇಜು, ಶಿಕ್ಷಣ ಕ್ಷೇತ್ರದ ಮೈಲಿಗಲ್ಲಾಯಿತು. ನಂತರದಲ್ಲಿ ಮೂಡಬಿದರೆ, ಕಾರ್ಕಳ, ಮುಲ್ಕಿ, ಕುಂದಾಪುರಗಳಲ್ಲಿ ಸ್ಥಾಪನೆಗೊಂಡ ಖಾಸಗಿ ಕಾಲೇಜುಗಳು ಶಿಕ್ಷಣ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುವಲ್ಲಿ ಯಶಸ್ವಿಯಾದವು. ಅರವತ್ತರ ದಶಕದಲ್ಲಿ ಪೈಯವರಿಂದ ಪ್ರಾರಂಭಿಸಲ್ಪಟ್ಟ ವೈದ್ಯಕೀಯ ಹಾಗೂ ಇಂಜನೀಯರಿಂಗ್ ಕಾಲೇಜುಗಳು ಅನೇಕ ಖಾಸಗಿ ಸಂಸ್ಥೆಗಳಿಗೆ ಪ್ರೇರಕ ಶಕ್ತಿಯಾಗಿ, ಹಲವಾರು ಇಂತಹ ವೃತ್ತಿ ಶಿಕ್ಷಣ ಕಾಲೇಜುಗಳು ಇಂದು ತಲೆ ಎತ್ತಿವೆ. ಇವಲ್ಲದೆ ಶಿಕ್ಷಕ ತರಬೇತಿ, ದಂತ ವೈದ್ಯ, ಹೊಟೇಲ್ ಮ್ಯಾನೇಜ್ ಮೆಂಟ್, ಫಿಸಿಯೋಥೆರಪಿ, ಹೀಗೆ ಹಲವಾರು ವಿಷಯಗಳಲ್ಲಿ ಪರಿಣತಿಯನ್ನು ಪರಿಶ್ರಮವನ್ನು ನೀಡುವ, ಪದವಿ ಹಾಗೂ ಡಿಪ್ಲೋಮಾಗಳನ್ನು ಪ್ರದತ್ತ ಮಾಡುವ ಖಾಸಗಿ ಸಂಸ್ಥೆಗಳು ಜನಪ್ರಿಯವಾಗಿ ಶಿಕ್ಷಣೋದ್ಯಮದಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಿವೆ. ೧೯೫೦ ರಿಂದ ೧೯೬೦ರ ದಶಕದಲ್ಲಿ ಹಲವಾರು ಪ್ರಥಮ ದರ್ಜೆ ಕಾಲೇಜುಗಳು ಸ್ಥಾಪನೆಯಾದವು. ರಾಜ್ಯಪುನಾರಚನೆಯ ಪೂರ್ವದಲ್ಲಿ ಮದರಾಸು ಪ್ರಾಂತಕ್ಕೆ ಜಿಲ್ಲೆಯು ಸೇರಿದ್ದರಿಂದ, ಇಲ್ಲಿನ ಕಾಲೇಜುಗಳು ಮದರಾಸು ವಿಶ್ವವಿದ್ಯಾಲಯದ ಆಡಳಿತಕ್ಕೆ ಸೇರಿದ್ದವಾದರೂ, ಕಸ್ತೂರ್ ಬಾ ವೈದ್ಯಕೀಯ ಕಾಲೇಜು ಮಾತ್ರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿದ್ದಿತು. ರಾಜ್ಯ ಪುನಾರಚನೆಯ ನಂತರ ಎಲ್ಲಾ ಕಾಲೇಜುಗಳೂ ಮೊದಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟು ಕಾಲಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಂಡವು. ೧೯೬೦ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ಏಳು ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಮೂರು ಮಂಗಳೂರಿನಲ್ಲಿಯೂ, ಎರಡು ಉಡುಪಿಯಲ್ಲಿಯೂ, ಪುತ್ತೂರು, ಕಾರ್ಕಳಗಳಲ್ಲಿ ತಲಾ ಒಂದೊಂದು ಇದ್ದವು. ಈ ಎಲ್ಲಾ ಸಂಸ್ಥೆಗಳಲ್ಲಿ ಒಟ್ಟು ೨,೫೦೧ ಮಂದಿ (೧,೮೮೨ ಗಂ, ೬೧೯ ಹೆ) ಪಿಯುಸಿ ತರಗತಿಗಳಲ್ಲಿಯೂ, ೨,೪೭೭ ಮಂದಿ (೧,೮೪೪ ಗಂ, ೬೩೩ ಹೆ) ಪದವಿ ತರಗತಿಗಳಲ್ಲಿಯೂ ವ್ಯಾಸಂಗ ಮಾಡುತ್ತಿದ್ದರು. ಕಾಲಕ್ರಮೇಣ ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಸಂಖ್ಯೆ ಅಧಿಕಗೊಂಡಿದ್ದರ ಫಲವಾಗಿ ಹೆಚ್ಚು ಕಾಲೇಜುಗಳು ಸ್ಥಾಪನೆಯಾಗಿ, ೧೯೬೯ರ ವೇಳೆಗೆ ಇವುಗಳ ಸಂಖ್ಯೆ ೧೭ಕ್ಕೆ ಏರಿತು. ಪುತ್ತೂರಿನಲ್ಲಿ ಎರಡು, ಕಾರ್ಕಳ, ಮುಲ್ಕಿ, ಕುಂದಾಪುರ, ಉಜಿರೆ, ಸೂರತ್ಕಲ್, ಕಲ್ಯಾಣಪುರ ಹಾಗೂ ಬಂಟ್ವಾಳಗಳಲ್ಲಿ ಪ್ರಥಮ ದರ್ಜೆ ಕಾಲೇಜುಗಳಿದ್ದವು. ಈ ಎಲ್ಲಾ ಸಂಸ್ಥೆಗಳಲ್ಲಿ ೧೯೭೧–೭೨ನೇ ಸಾಲಿಗೆ ಒಟ್ಟು ೧೩,೬೨೭ (೯,೭೮೯ ಗಂ– ೩,೮೩೮ ಹೆ) ಮಂದಿ ವ್ಯಾಸಂಗ ಮಾಡುತ್ತಿದ್ದರು. ಬೋಧಕ ವೃಂದದಲ್ಲಿ ಒಟ್ಟು ೬೦೧ ಮಂದಿ (೫೨೬ ಗಂ–೭೫ ಹೆ) ಇದ್ದರು. ಜಿಲ್ಲೆಯಲ್ಲಿ ೨೦೦೫ರ ಅಂತ್ಯಕ್ಕೆ ಒಟ್ಟು ೨೯ ಪದವಿ ಶಿಕ್ಷಣ ನೀಡುವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ೧೯ ಉಡುಪಿ ತಾಲೂಕಿನಲ್ಲಿಯೂ, ಐದು ಕುಂದಾಪುರ ತಾಲೂಕಿನಲ್ಲಿಯೂ ಹಾಗೂ ಐದು ಕಾರ್ಕಳ ತಾಲೂಕಿನಲ್ಲಿಯೂ ಇದ್ದವು. ಈ ಎಲ್ಲಾ ಸಂಸ್ಥೆಗಳಲ್ಲಿ ಮೇಲ್ಕಂಡ ವರ್ಷಕ್ಕೆ ಒಟ್ಟು ೧೦,೪೦೮ ವಿದ್ಯಾರ್ಥಿಗಳು (೪೧೬೧–ಗಂಡು, ೬೨೪೭–ಹೆಣ್ಣು) ವ್ಯಾಸಂಗ ಮಾಡುತ್ತಿದ್ದರು.

### ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ

ಉನ್ನತ ಶಿಕ್ಷಣ ನೀಡುವ ಎರಡು ಕಾಲೇಜುಗಳು ಮೊದಲಿಗೆ ಮಂಗಳೂರಿನಲ್ಲಿ ಸ್ಥಾಪನೆಗೊಂಡಿದ್ದರಿಂದ, ಜಿಲ್ಲೆಯ ಉತ್ತರ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಅವಶ್ಯಕತೆಗಳ ಪೂರೈಕೆಗಾಗಿ ಉಡುಪಿಯಲ್ಲಿ ಈ ಸಂಸ್ಥೆ

೧೯೪೯ರಲ್ಲಿ ಟಿ.ಎಂ.ಎ. ಪೈ ಅವರಿಂದ ಸ್ಥಾಪಿಸಲ್ಪಟ್ಟಿತು. ಡೀಮ್ಡ್-ವಿಶ್ವವಿದ್ಯಾಲಯವಾದ ಮಣಿಪಾಲ್ ಮಾಹೆ ಸಂಸ್ಥೆಯಿಂದ ನಡೆಸಲ್ಪಡುತ್ತಿರುವ ಈ ಕಾಲೇಜು, ತನ್ನದೇ ಆದ ಆವರಣ, ಕಟ್ಟಡಗಳು, ಕ್ರೀಡಾಂಗಣ, ಉತ್ತಮ ಗ್ರಂಥಾಲಯಗಳನ್ನು ಹೊಂದಿದ್ದು, ಪದವಿ ಪೂರ್ವ ಹಾಗೂ ಪದವಿ ಶಿಕ್ಷಣ ತರಗತಿಗಳನ್ನು ಹೊಂದಿದೆ. ೨೦೦೦ದಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿರುವ ಈ ಸಂಸ್ಥೆಯ ಆವರಣದಲ್ಲಿ ಜಾನಪದ ಹಾಗೂ ಯಕ್ಷಗಾನ ಕಲೆಗಳ ಪ್ರೋತ್ಸಹಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಯಕ್ಷಗಾನ ಕೇಂದ್ರ, ಸಂಶೋಧನೆಗಾಗಿಯೇ ಮೀಸಲಾಗಿರುವ ರಾಷ್ಟ್ರಕವಿ, ಗೋವಿಂದಪೈ ಸಂಶೋಧನ ಕೇಂದ್ರಗಳು ನೆಲೆಗೊಂಡಿವೆ. ಸಂಜೆಯ ವೇಳೆ ಇಲ್ಲಿ ಇಂಗ್ಲಿಷ್, ಶಾಸನಶಾಸ್ತ್ರ ಹಾಗೂ ಪ್ರವಾಸೋದ್ಯಮದ ಬಗ್ಗೆ ಡಿಪ್ಲೊಮಾ ತರಗತಿಗಳು ನಡೆಯುತ್ತವೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವೂ ಇಲ್ಲಿ ಕಾರ್ಯಗತವಾಗಿದ್ದು, ಕಲೆ ಹಾಗೂ ವಾಣಿಜ್ಯ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ತರಗತಿಗಳನ್ನು ನಡೆಸುತ್ತದೆ. ಈ ಸಂಸ್ಥೆಯ ೨೦೦೬-೦೭ನೇ ಶೈಕ್ಷಣಿಕ ವರ್ಷಕ್ಕೆ ಪದವಿ ಕಾಲೇಜಿನಲ್ಲಿ ಒಟು ೧೧೮೬ (೪೦೬-ಗ, ೬೮೦-ಹೆ) ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು ೧,೧೯೬ (೬೬೪-ಗ, ೫೩೦-ಹೆ) ಮಂದಿ ವ್ಯಾಸಂಗ ಮಾಡುತ್ತಿದ್ದರು ಹಾಗೂ ಕ್ರಮವಾಗಿ ೮೨ ಮತ್ತು ೪೯ ಬೋಧಕ ಸಿಬ್ಬಂದಿ ಇದ್ದರು.

**ಪೂರ್ಣಪಜ್ಞ ಕಾಲೇಜು ಉಡುಪಿ:** ಉಡುಪಿಯ ಅದಮಾರು ಮಠದ ಆಶ್ರಯದಲ್ಲಿ ಈ ಸಂಸ್ಥೆ ೧೯೬೦ರಲ್ಲಿ ಪ್ರಾರಂಭಗೊಂಡಿದ್ದು ಶಿಕ್ಷಣ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದೆ. ಇದೇ ವರ್ಷ ಮಣಿಪಾಲ ಅಕಾಡೆಮಿಯಿಂದ ಕಾರ್ಕಳದಲ್ಲಿ ಭುವನೇಂದ್ರ ಕಾಲೇಜು ಸ್ಥಾಪಿಸಲ್ಪಟ್ಟು, ಇಲ್ಲಿ ವಿದ್ಯಾಭ್ಯಾಸ ಮಾಡಿದ ಹಲವಾರು ವಿದ್ಯಾರ್ಥಿಗಳು ದೇಶವಿದೇಶಗಳಲ್ಲಿ ಉನ್ನತ ಸ್ಥಾನ ಮಾನಗಳನ್ನು ಹೊಂದಿದ್ದಾರೆ.

**ಭಂಡಾರ್ಕರ್ಸ್ ಕಲೆ ಮತ್ತು ವಿಜ್ಞಾನ ಕಾಲೇಜು, ಕುಂದಾಪುರ**

ಕುಂದಾಪುರದ ರೋಟರಿ ಸಂಸ್ಥೆಯ ಮನವಿಯ ಮೇರೆಗೆ ಡಾ. ಎ. ಎಸ್. ಭಂಡಾರ್‌ಕರರ ಬೃಹತ್ ದೇಣಿಗೆ ಮತ್ತು ಸ್ಥಳೀಯರ ಮೂಲಧನದ ಸಂಗ್ರಹದೊಂದಿಗೆ 'ಮಾಹೆ'ಯ ರೂವಾರಿ ಡಾ. ಟಿ. ಎಂ. ಎ. ಪೈ ಅವರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ೧೯೬೩ರ ಜುಲೈ ೧೧ ರಂದು ಅಸ್ತಿತ್ವಕ್ಕೆ ಬಂದಿತು. ಇದರ ಮೂರನೇ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಡಾ. ಹಟ್ಟಿಯಂಗಡಿ ಶಾಂತಾರಾಮ್ ಅವರ ದೂರದೃಷ್ಟಿ ಹಾಗೂ ನಿರಂತರ ಪರಿಶ್ರಮದ ಫಲವಾಗಿ ಕಾಲೇಜಿಗೆ ಒಂದು ಬೃಹತ್ ಕಟ್ಟಡ, ಸುಸಜ್ಜಿತ ಗ್ರಂಥಾಲಯ ಹಾಗೂ ರಂಗ ಅಧ್ಯಯನ ಕೇಂದ್ರಗಳು ದೊರೆತು, ಸಂಸ್ಥೆ ಈ ಪ್ರದೇಶದ ಜನತೆಯ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ ಯಶಸ್ವಿಯಾಗಿದೆ. ಜಾನಪದ ಕಲೆ ಹಾಗೂ ಸಾಮಾಜಿಕ ಜೀವನಾಧ್ಯಯಗಳ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ, ಅಧ್ಯಾಪಕರಲ್ಲಿ ಹಾಗೂ ಸಾರ್ವಜನಿಕರಲ್ಲಿ ಮೂಡಿಸುವ ಉದ್ದೇಶದಿಂದ ಸಂಸ್ಥೆಯ ಆವರಣದಲ್ಲಿ ಡಾ. ಶಿವರಾಮಕಾರಂತ ಸಂಶೋಧನಾ ಕೇಂದ್ರ ೨೦೦೪ರಲ್ಲಿ ಸ್ಥಾಪನೆಗೊಂಡಿದೆ. ಸರ್ಕಾರಿ ಆದೇಶದನ್ವಯ ದಿನಾಂಕ ೧-೧೦-೨೦೦೧ ರಿಂದ ಸಂಯುಕ್ತ ಕಾಲೇಜಿನಿಂದ ಭಂಡಾರ್ಕರ್ಸ್ ಪದವಿಪೂರ್ವ ಕಾಲೇಜು ಬೇರ್ಪಟ್ಟು, ಸ್ವತಂತ್ರ ಸಂಸ್ಥೆಯಾಗಿ ಜನರ ಶೈಕ್ಷಣಿಕ ಆಶೋತ್ತರಗಳಿಗೆ ಸ್ಪಂದಿಸುತ್ತಿದೆ. ಇಲ್ಲಿಯೂ ವಿಜ್ಞಾನ ಹಾಗೂ ಕಲಾ ವಿಷಯಗಳಲ್ಲಿ ಬೋಧನೆ ನಡೆಯುತ್ತಿದೆ. ೨೦೦೬-೦೭ನೇ ಶೈಕ್ಷಣಿಕ ವರ್ಷಕ್ಕೆ ಎರಡೂ ಸಂಸ್ಥೆಗಳಲ್ಲಿ ಒಟ್ಟು ೨,೫೦೦ ಮಂದಿ ವಿದ್ಯಾರ್ಥಿಗಳು ೯೦ ಮಂದಿ ಅಧ್ಯಾಪಕ ವೃಂದದ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡುತ್ತಿದ್ದರು.

**ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (MAHE-ಮಾಹೆ)**

ದಕ್ಷಿಣ ಕನ್ನಡ ಜಿಲ್ಲೆಯ ಮೂರು ಮಂದಿ ಖ್ಯಾತನಾಮರಾದ ಡಾ. ಮಾಧವ ಪೈ, ಪುರುಷೋತ್ತಮ ಪೈ ಹಾಗೂ ಉಪೇಂದ್ರ ಪೈ ಅವರು ಸೇರಿ ೧೯೪೨ನೇ ಸೆಪ್ಟೆಂಬರ್ ೧೮ ರಂದು ಹುಟ್ಟುಹಾಕಿದ 'ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಪ್ರಸ್ತುತ 'ಮಾಹೆ' (ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್) ಎಂಬ ಹೆಸರಿನಲ್ಲಿ ಒಂದು ಸ್ವಾಯತ್ತ ಡೀಮ್ಡ್ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಜಗತ್ತಿನ ಪ್ರಮುಖ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ. ಈ ಸಂಸ್ಥೆಯಡಿ ಎರಡು ವಿಶ್ವವಿದ್ಯಾಲಯಗಳು,

೨೩ ವೃತ್ತಿಶಿಕ್ಷಣ ಕಾಲೇಜುಗಳು, ೧೧ ಆಸ್ಪತ್ರೆಗಳು, ಎಂಟು ಕ್ಯಾಂಪಸ್‌ಗಳು, ವೈದ್ಯಕೀಯ ಹಾಗೂ ಇಂಜನೀಯರಿಂಗ್ ವಿಭಾಗಗಳಲ್ಲಿ ಹಲವಾರು ವಿದೇಶೀ ವಿಶ್ವವಿದ್ಯಾಲಯಗಳ ಸಂಪರ್ಕ ಯೋಜನೆಗಳು ಕಾರ್ಯನಿರ್ವಹಿಸುತ್ತಿದೆ. ಮಣಿಪಾಲ್ ಅಕಾಡೆಮಿ ನಡೆಸುತ್ತಿರುವ ದೇಶಿ ಹಾಗೂ ವಿದೇಶಿ ಕಾಲೇಜುಗಳಲ್ಲಿ ಭಾರತವೂ ಸೇರಿದಂತೆ ೫೧ ದೇಶಗಳ ಸುಮಾರು ೭೦,೦೦೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇದರ ಹೆಮ್ಮೆಯ ಸಂಸ್ಥೆಯಾದ ಕಸ್ತೂರ್ಬಾ ಮೆಡಿಕಲ್ ಕಾಲೇಜು ೨೦೦೩ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತು. ಮೂಲಭೂತ ವೈದ್ಯಕೀಯ ವಿಜ್ಞಾನದ ತರಬೇತಿ ನೀಡುವಲ್ಲಿ ನ್ಯೂಯಾರ್ಕ್ ಎಜುಕೇಷನ್ ಮಂಡಳಿಯಿಂದ ಮಾನ್ಯತೆ ಪಡೆದಿರುವ ಭಾರತದ ಏಕೈಕ ಸಂಸ್ಥೆ ಇದಾಗಿದೆ. ಈ ಸಂಸ್ಥೆ ನೇಪಾಳ, ಮಲೇಷಿಯಾ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್‌ಗಳಲ್ಲಿ ತನ್ನ ಕ್ಯಾಂಪಸ್‌ಗಳನ್ನು ಹೊಂದಿದೆ.

**ಕೋಷ್ಟಕ ೧೩.೧೭**

| ಕ್ರ. ಸಂ | ಸಂಸ್ಥೆಯ ಹೆಸರು | ವಿದ್ಯಾರ್ಥಿಗಳ ಸಂಖ್ಯೆ | | | ಒಟ್ಟು | ಬೋಧಕ ಸಂಖ್ಯೆ | ಸಿಬ್ಬಂದಿ | ಒಟ್ಟು |
|---|---|---|---|---|---|---|---|---|
| | | ಗಂಡು | ಹೆಣ್ಣು | | | ಗಂಡು | ಹೆಣ್ಣು | |
| ೧. | ಕಸ್ತೂರ್ಬಾ ಮೆಡಿಕಲ್ ಕಾಲೇಜು ಮಣಿಪಾಲ್ | ಪ | ೭೯೮ | ೬೯೦ | ೧೪೮೮ | ೩೪೨ | ೧೫೮ | ೫೦೦ |
| | | ಸ್ನಾ | ೩೮೫ | ೨೭೭ | ೬೬೨ | | | |
| ೨. | ಮಣಿಪಾಲ್ ತಾಂತ್ರಿಕ ಶಿಕ್ಷಣ ಸಂಸ್ಥೆ, ಮಣಿಪಾಲ್ | ಪ | ೨೦೫೫ | ೪೩೯ | ೨೯೪೯ | ೨೧೮ | ೫೯ | ೨೭೭ |
| | | ಸ್ನಾ | ೨೪೨ | ೭೧ | ೩೧೩ | | | |
| ೩. | ಮಣಿಪಾಲ್ ಕಾಲೇಜ್ ಆಫ್ ಫಾರ್ಮ್‌ಸ್ಯುಟಿಕಲ್ ಸೈನ್ಸ್, ಮಣಿಪಾಲ್ | ಪ | ೨೬೨ | ೧೨೮ | ೩೯೦ | ೪೦ | ೧೩ | ೫೩ |
| | | ಸ್ನಾ | ೧೩೭ | ೪೭ | ೧೮೪ | | | |
| ೪. | ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮಣಿಪಾಲ್ | ಪ | ೨೧೫ | ೨೬೦ | ೪೭೫ | ೨೬ | ೨೦ | ೪೬ |
| | | ಸ್ನಾ | ೬೯ | ೪೪ | ೧೧೩ | | | |
| ೫. | ವೈಕಮ್ ಗ್ರೂಪ್ ಸ್ಕೂಲ್ ಆಫ್ ಹೊಟೇಲ್ ಅಡ್ಮಿನಸ್ಟ್ರೇಷನ್ ಮಣಿಪಾಲ್ | ಪ | ೨೭೭ | ೯೮ | ೩೭೫ | ೧೦ | ೦೬ | ೧೬ |
| | | ಸ್ನಾ | ೦ | ೦೪ | ೦೪ | | | |
| ೬. | ಮಣಿಪಾಲ್ ಕಾಲೇಜ್ ಆಫ್ ನರ್ಸಿಂಗ್, ಮಣಿಪಾಲ್ | ಪ | ೧೯ | ೨೯೦ | ೩೦೯ | ೦೬ | ೩೦ | ೩೬ |
| | | ಸ್ನಾ | ೦೩ | ೩೮ | ೪೧ | | | |
| ೭. | ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಮಣಿಪಾಲ್ | ಪ | ೫೨ | ೬೪ | ೧೧೬ | ೦೭ | ೦೪ | ೧೧ |
| | | ಸ್ನಾ | ೧೯ | ೫೮ | ೭೭ | | | |
| ೮. | ಮಣಿಪಾಲ್ ಕಾಲೇಜ್ ಆಫ್ ಅವೈಡ್ ಸೈನ್ಸಸ್ ಮಣಿಪಾಲ್ | ಪ | ೨೪೪ | ೨೨೫ | ೪೬೯ | ೩೦ | ೨೯ | ೫೯ |
| | | ಸ್ನಾ | ೬೩ | ೬೩ | ೧೨೬ | | | |
| ೯. | ಮಣಿಪಾಲ್ ಸೆಂಟರ್ ಫಾರ್ ಇನ್‌ಫರ್ಮೇಷನ್ ಸೈನ್ಸಸ್ ಮಣಿಪಾಲ್ | ಪ | ೦೪ | ೦೪ | ೦೮ | ೧೨ | ೦೧ | ೧೩ |
| | | ಸ್ನಾ | ೧೫೧ | ೪೦ | ೧೯೧ | | | |
| ೧೦. | ಮಣಿಪಾಲ್ ಇನ್ಸಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ | ಪ | ೪೩ | ೨೬ | ೬೯ | ೧೨ | ೦೧ | ೧೩ |
| | | ಸ್ನಾ | ೧೪೯ | ೮೦ | ೨೨೯ | | | |
| ೧೧. | ಮೇಲಕ ಮಣಿಪಾಲ್ ಮೆಡಿಕಲ್ ಕಾಲೇಜ್, ಮಣಿಪಾಲ್ ಕ್ಯಾಂಪಸ್ | ಪ | ೩೮೯ | ೪೦೫ | ೭೯೪ | ೩೮ | ೨೩ | ೬೧ |
| ೧೨. | ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಅಪ್ಲೈಡ್ ಸೈನ್ಸಸ್, ಮಣಿಪಾಲ್ | ಪ | ೧೩೧ | ೨೫ | ೧೫೬ | ೨೯ | ೧೧ | ೪೦ |
| ೧೩. | ಕೆ.ಎಂ.ಸಿ. ಇಂಟರ್ ನ್ಯಾಷನಲ್ ಸೆಂಟರ್, ಮಣಿಪಾಲ್ | ಪ | ೧೮ | ೨೦ | ೩೮ | ೦೮ | ೦೪ | ೧೨ |

**ಪ–ಪದವಿ; ಸ್ನಾ–ಸ್ನಾತಕೋತ್ತರ**

ಡಿಸೆಂಬರ್ ೨೦೦೬ ರಲ್ಲಿದ್ದಂತೆ ಉಡುಪಿ ಜಿಲ್ಲೆಯಲ್ಲಿ ಈ ಸಂಸ್ಥೆಯ ಆಡಳಿತದಡಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಹಾಗೂ ಬೋಧಕ ಸಿಬ್ಬಂದಿಯ ಅಂಕಿ ಅಂಶಗಳನ್ನು ಕೋಷ್ಟಕ ೧೩.೧೭ರಲ್ಲಿ ನೀಡಲಾಗಿದೆ.

**ಮಾಹೆಯ ಗ್ರಂಥಾಲಯ ವ್ಯವಸ್ಥೆ**

ಸಂಸ್ಥೆಯ ಪ್ರತೀ ಕಾಲೇಜಿನಲ್ಲಿಯೂ ಪ್ರತ್ಯೇಕವಾದ ಗ್ರಂಥಾಲಯ ವ್ಯವಸ್ಥೆ ಇದ್ದು, ಜಗತ್ತಿನಾದ್ಯಂತ ಲಭ್ಯವಿರುವ ವಿಶೇಷ ಹಾಗೂ ಅಪರೂಪದ ಗ್ರಂಥಗಳನ್ನು, ನಿಯತಕಾಲಿಕೆಗಳನ್ನು, ಸಿ.ಡಿ.ಗಳನ್ನು ಹೊಂದಿದ್ದು, ಒಟ್ಟು ೫೩,೭೧೪ ಗ್ರಂಥಗಳೂ, ೬೧೦ ಮುದ್ರಿತ ನಿಯತಕಾಲಿಕೆಗಳೂ, ೪೦೦ ಆನ್‌ಲೈನ್ ನಿಯತಕಾಲಿಕೆಗಳೂ, ೨೯,೭೯೩ ಪೂರ್ವಪ್ರತಿ(ಬ್ಯಾಕ್‌ವಾಲ್ಯೂಂಸ್)ಗಳೂ, ೨೩೯ ಸಿಡಿಗಳೂ, ೧೬೩೦ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಟಣೆಗಳೂ, ೨೭೧೧ ಪ್ರಬಂಧಗಳೂ ಲಭ್ಯವಿವೆ. ಮಣಿಪಾಲದ ಎಂ.ಐ.ಟಿ ಗ್ರಂಥಾಲಯದಲ್ಲಿ ೬೧೭೪ ಗ್ರಂಥಗಳೂ, ೭೫ ನಿಯತಕಾಲಿಕೆಗಳೂ, ಇದ್ದರೆ, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ ಗ್ರಂಥಾಲಯದಲ್ಲಿ ೮,೨೬೦ ಗ್ರಂಥಗಳೂ, ೫೩ ನಿಯತಕಾಲಿಕೆಗಳೂ ಇವೆ. ಎಲ್ಲಾ ಗ್ರಂಥಾಲಯಗಳಿಗೂ ನುರಿತ ಗ್ರಂಥಾಲಯಾಧಿಕಾರಿ ಮತ್ತು ಸಿಬ್ಬಂದಿ ವರ್ಗವನ್ನು ನೀಡಲಾಗಿದೆ.

## ತಾಂತ್ರಿಕ ಶಿಕ್ಷಣ

ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿಯೂ ಜಿಲ್ಲೆ ದಾಪುಗಾಲು ಹಾಕಿದ್ದು, ಹಲವಾರು ಖ್ಯಾತ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಾಹೆಯ ವಿವಿಧ ಸಂಸ್ಥೆಗಳು ಇಲ್ಲಿ ಉಲ್ಲೇಖನೀಯವಾಗಿವೆ.

**ಮಣಿಪಾಲ್ ತಾಂತ್ರಿಕ ಸಂಸ್ಥೆ:** ಮಣಿಪಾಲದಲ್ಲಿ ೧೯೫೭ ಮೇ ೧೧ರಂದು ಮಣಿಪಾಲ್ ಇಂಜನಿಯರಿಂಗ್ ಕಾಲೇಜ್ ಎಂಬ ಹೆಸರಿನಲ್ಲಿ ಸ್ಥಾಪನೆಗೊಂಡ ಮಣಿಪಾಲ ತಾಂತ್ರಿಕ ಸಂಸ್ಥೆ 'ಮಾಹೆ' ಯ ಮತ್ತೊಂದು ಪ್ರಮುಖ ವಿದ್ಯಾಸಂಸ್ಥೆಯಾಗಿ ದೇಶವಿದೇಶಗಳಲ್ಲಿ ಉನ್ನತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖ್ಯಾತ ಇಂಜಿನಿಯರ್‌ಗಳನ್ನು ತಯಾರು ಮಾಡಿ, ರಾಷ್ಟ್ರದ ತಾಂತ್ರಿಕತೆಯ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದೆ.

**ಜಸ್ಟೀಸ್ ಕೆ. ಎಸ್. ಹೆಗಡೆ ಮ್ಯಾನೇಜ್‌ಮೆಂಟ್ ಸಂಸ್ಥೆ, ನಿಟ್ಟೆ**

ಈ ಸಂಸ್ಥೆಯು ವಿವಿಧ ಪರಿಣಿತ ಕ್ಷೇತ್ರಗಳಾದ ಮಾರ್ಕೆಟಿಂಗ್, ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್, ಬ್ಯಾಂಕಿಂಗ್ ಮತ್ತು ಇನ್‌ಶ್ಯೂರೆನ್ಸ್ ಕ್ಷೇತ್ರಗಳಲ್ಲಿ ಎರಡು ವರ್ಷಗಳ ಎಂ.ಬಿ.ಎ. ಪದವಿಯನ್ನು ನೀಡುತ್ತದೆ. ಕೇಂದ್ರೀಯ ತಾಂತ್ರಿಕ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟಿರುವ ಈ ಸಂಸ್ಥೆಯು ಕನ್ಸಲ್ಟೆನ್ಸಿ, ಸಂಶೋಧನಾ ಪ್ರಾಜೆಕ್ಟ್‌ಗಳೂ ಹಾಗೂ ಕಾರ್ಪೋರೇಟ್ ಇ.ಡಿ.ಪಿ. ಕಾರ್ಯಕ್ರಮಗಳನ್ನು ನಡೆಸುತ್ತದೆ.

**ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯ, ನಿಟ್ಟೆ**

ನಿಟ್ಟೆಯ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯ ೧೯೮೬ರಲ್ಲಿ ಪ್ರಾರಂಭಗೊಂಡಿದ್ದು ಸಂಸ್ಥೆಯು ಪದವಿ ಮಟ್ಟದ ೭, ಸ್ನಾತಕೋತ್ತರ ಮಟ್ಟದ ೬ ಹಾಗೂ ೫ ಪಿ.ಹೆಚ್.ಡಿ (ಸಂಶೋಧನ) ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಈವರೆಗೆ ಒಟ್ಟು ೩೦೦೦ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ತರಬೇತಿ ಪಡೆದುಕೊಂಡು ದೇಶವಿದೇಶಗಳಲ್ಲಿ ಕಾರ್ಯನಿರತರಾಗಿದ್ದಾರೆ.

**ಪಾಲಿಟೆಕ್ನಿಕ್‌ಗಳು**

ಇಂಜಿನೀಯರಿಂಗ್ ಕಾಲೇಜುಗಳು, ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ಪ್ರದತ್ತ ಮಾಡುವ ಸಂಸ್ಥೆಗಳಾದರೆ, ಪಾಲಿಟೆಕ್ನಿಕ್‌ಗಳು ತಾಂತ್ರಿಕ ಶಿಕ್ಷಣದ ವಿವಿಧ ವಿಷಯಗಳಲ್ಲಿ ಡಿಪ್ಲೊಮಾಗಳನ್ನು ನೀಡುತ್ತವೆ. ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯ ಆಡಳಿತಕ್ಕೊಳಪಡುವ ಈ ಸಂಸ್ಥೆಗಳಿಗೆ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರು ಪ್ರವೇಶ ಪಡೆಯಬಹುದು.

**ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ.)ಗಳು**

ಕೇಂದ್ರ ಸರಕಾರ ೧೯೫೦ರಲ್ಲಿ ಅನುಷ್ಠಾನಗೊಳಿಸಿದ ಕುಶಲ ಕಾರ್ಮಿಕರ ತರಬೇತಿ ಯೋಜನೆಯನ್ವಯ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಅಂಗವಾದ ಉದ್ಯೋಗ ಮತ್ತು ತರಬೇತಿ ಇಲಾಖೆಯಡಿ ರಾಜ್ಯದೆಲ್ಲೆಡೆ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇವು ಕೈಗಾರಿಕಾ ಉದ್ಯಮಿಗಳಿಗೆ ನಿರಂತರವಾಗಿ ನುರಿತ ತಾಂತ್ರಿಕ ಮಾನವಶಕ್ತಿ ಒದಗಿಸುವುದು, ಯುವಜನಾಂಗಕ್ಕೆ ಸ್ವ-ಉದ್ಯೋಗ ಹೊಂದಲು ಅನುಕೂಲವಾಗುವಂತಹ ವೃತ್ತಿ ಕೌಶಲ್ಯ ತರಬೇತಿ ನೀಡುವ ಮುಖ್ಯ ಉದ್ದೇಶಗಳನ್ನು ಹೊಂದಿವೆ.

ಇವುಗಳ ನೀತಿ ನಿಯಮಾವಳಿ ಕೇಂದ್ರ ಸರ್ಕಾರದ ಡಿ.ಜಿ.ಪಿ.ಟಿ. (ಡೈರೆಕ್ಟರ್ ಜನರಲ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್)ಗೆ ಒಳಪಟ್ಟಿರುವುದರಿಂದ ಇವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಯೋಗದಲ್ಲಿ ಸ್ಥಾಪಿಸಲ್ಪಟ್ಟು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿರುವ ಈ ಸಂಸ್ಥೆಗಳನ್ನು ಆಡಳಿತ ನಿರ್ವಹಣೆ, ಆರ್ಥಿಕ ಸೌಲಭ್ಯಗಳ ಪೂರೈಕೆ, ಇತ್ಯಾದಿ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರ ನಿರ್ವಹಿಸುತ್ತದೆ.

## ವೈದ್ಯಕೀಯ ಶಿಕ್ಷಣ

ದೇಶವಿದೇಶಗಳಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುತ್ತಿರುವ ಖ್ಯಾತನಾಮರಾದ ವೈದ್ಯರನ್ನು, ದಂತವೈದ್ಯರನ್ನು, ಶುಶ್ರೂಷಕಿಯರನ್ನೂ, ಔಷಧ ತಜ್ಞರನ್ನು ತಯಾರು ಮಾಡಿರುವ ಹಲವಾರು ವೈದ್ಯಕೀಯ ಸಂಸ್ಥೆಗಳನ್ನು ಹೊಂದಿರುವ ಉಡುಪಿ ಜಿಲ್ಲೆಯು ಈ ಕ್ಷೇತ್ರದಲ್ಲಿಯೂ ತನ್ನ ಛಾಪು ಮೂಡಿಸಿದೆ. ಅಂತಹ ಹಲವಾರು ಸಂಸ್ಥೆಗಳನ್ನು ಈ ಮುಂದೆ ಪರಿಚಯ ಮಾಡಿಕೊಡಲಾಗಿದೆ.

**ಕಸ್ತೂರ್ ಬಾ ವೈದ್ಯಕೀಯ ಶಿಕ್ಷಣ ಸಂಸ್ಥೆ:** ಪ್ರಸ್ತುತ 'ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್' ಎಂದು ಕರೆಯಲ್ಪಡುವ ಆಗಿನ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಮಣಿಪಾಲ, ಇದರ ವತಿಯಿಂದ ಮಣಿಪಾಲದಲ್ಲಿ ೧೯೫೩ರಲ್ಲಿ ಸ್ಥಾಪಿಸಲ್ಪಟ್ಟ ಕಸ್ತೂರ್ ಬಾ ವೈದ್ಯಕೀಯ ಶಿಕ್ಷಣ ಸಂಸ್ಥೆ, ಜಿಲ್ಲೆಯ ಇಂತಹ ಪ್ರಥಮ ಸಂಸ್ಥೆಯಾಗಿದ್ದು, ಬಹುಬೇಗ ದೇಶದಾದ್ಯಂತ ಹಾಗೂ ಪ್ರಪಂಚದ ಇತರ ರಾಷ್ಟ್ರಗಳಾದ ಆಫ್ರಿಕಾ, ಮಲೇಷಿಯಾ, ಶ್ರೀಲಂಕಾ, ಬ್ರಿಟನ್ ಹಾಗೂ ಅಮೇರಿಕಾಗಳಿಂದ ವಿದ್ಯಾರ್ಥಿ ವೃಂದಗಳನ್ನು ಆಕರ್ಷಿಸಿತ್ತು, ಇಲ್ಲಿನ ಬೋಧಕ ವೃಂದದಲ್ಲಿಯೂ ವಿಶ್ವದಾದ್ಯಂತದಿಂದ ಬಂದ ಅಧ್ಯಾಪಕರಿದ್ದರು. ಪ್ರಾರಂಭದಲ್ಲಿ ಸಂಸ್ಥೆ ಎರಡು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಒಂದು ವರ್ಷ ಅವಧಿಯ ಪ್ರಿ-ಮೆಡಿಕಲ್ ಮತ್ತು ಒಂದೂವರೆ ವರ್ಷ ಅವಧಿಯ ಪ್ರಿ-ಕ್ಲಿನಿಕಲ್ ತರಗತಿಗಳು ಮಣಿಪಾಲದಲ್ಲಿ ನಡೆದರೆ, ಮೂರು ವರ್ಷ ಅವಧಿಯ ಕ್ಲಿನಿಕಲ್ ತರಗತಿಗಳು ಮಂಗಳೂರಿನಲ್ಲಿ ನಡೆಯುತ್ತಿದ್ದವು. ೧೯೬೯ ಆಗಸ್ಟ್‌ನಿಂದ ಹಲವು ವಿದ್ಯಾರ್ಥಿಗಳನ್ನು ಕ್ಲಿನಿಕಲ್ ತರಗತಿಗಳಿಗಾಗಿ ಮಣಿಪಾಲಕ್ಕೆ ಕರೆದೊಯ್ಯಲಾಯಿತು. ಎರಡೂ ವಿಭಾಗಗಳು ಒಂದು ಆಡಳಿತ ಮಂಡಳಿಯ ಕಾರ್ಯನಿರ್ವಹಿಸುತ್ತಿದ್ದು, ಇದಕ್ಕೆ ಮಣಿಪಾಲದ ವಿಭಾಗದ ಡೀನ್ ಮತ್ತು ಮಂಗಳೂರು ಕಾಲೇಜಿನ ಪ್ರಿನ್ಸಿಪಾಲರು ಪದನಿಮಿತ್ತ ಸದಸ್ಯರಾಗಿದ್ದರು. ಎಂ.ಬಿ.ಬಿ.ಎಸ್. ಮಾತ್ರವಲ್ಲದೆ ಸಂಸ್ಥೆಯು ಹಲವಾರು ಇತರೆ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ತರಗತಿಗಳನ್ನು ನಡೆಸುತ್ತಿದ್ದು, ತನ್ನ ವಿದ್ಯಾರ್ಥಿಗಳ ಬೋಧನಾ ಆಸ್ಪತ್ರೆಗಾಗಿ ಮಂಗಳೂರಿನ ಸರಕಾರಿ ವೆನ್‌ಲಾಕ್ ಆಸ್ಪತ್ರೆ ಹಾಗೂ ಸರಕಾರಿ ಲೇಡಿ ಗೋಷನ್ ಆಸ್ಪತ್ರೆಗಳನ್ನು, ಮಣಿಪಾಲದ ಕಸ್ತೂರ್ ಬಾ ಆಸ್ಪತ್ರೆಯನ್ನು ಮುಡುಶೆಡ್ಡೆಯ ಟಿ.ಬಿ. ಸ್ಯಾನಿಟೋರಿಯಂ ಅನ್ನೂ ಅವಲಂಬಿಸಿತ್ತು. ೧೯೭೨ರ ವೇಳೆಗೆ ಈ ಆಡಳಿತಮಂಡಳಿಯ ಅಧೀನದಲ್ಲಿದ್ದ ದಂತ ಹಾಗೂ ಫಾರ್ಮಸಿ ಕಾಲೇಜುಗಳನ್ನೊಳಗೊಂಡಂತೆ, ಒಟ್ಟು ೨,೧೬೦ ವಿದ್ಯಾರ್ಥಿಗಳೂ, ೨೧೫ ಹೌಸ್ ಸರ್ಜನ್‌ಗಳೂ ಇಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರಲ್ಲಿ ೧,೨೬೦ ಮಂದಿ ಮಣಿಪಾಲ ಹಾಗೂ ೯೦೦ ಮಂದಿ ಮಂಗಳೂರಿನಲ್ಲಿದ್ದರು. ಬೋಧಕ ಸಿಬ್ಬಂದಿ ಸಂಖ್ಯೆ ೨೮೩ ಆಗಿದ್ದಿತು.

ಮಂಗಳೂರು ಕಾಲೇಜಿನ ಸುಸಜ್ಜಿತ ಗ್ರಂಥಾಲಯದಲ್ಲಿ ೧೯೭೨ರಲ್ಲಿ ಸುಮಾರು ೬,೦೦೦ ಅಪರೂಪದ ಗ್ರಂಥಗಳಿದ್ದು, ೧೩೩ ವಿವಿಧ ದೇಶಗಳ ಹಾಗೂ ವಿಷಯಗಳ ನಿಯತಕಾಲಿಕಗಳಿದ್ದವು. ಮಂಗಳೂರಿನ ಬಳಿಯ ಕಪ್ರಿಗುಡ್ಡದಲ್ಲಿ ಸುಮಾರು ೩೦೦ ಮಂದಿಗೆ ಪ್ರವೇಶಾವಕಾಶವಿದ್ದ ವಸತಿ ನಿಲಯ

ಇದ್ದಿತು. ಮಹಿಳೆಯರಿಗಾಗಿ ಫಲ್ನೆರ್ ಹಾಗೂ ನಂದಿಗಿರಿ ಮುಂತಾದೆಡೆ ವಸತಿ ನಿಲಯಗಳಿದ್ದು ಇವುಗಳಲ್ಲಿ ಅನುಕ್ರಮವಾಗಿ ೨೭, ೨೯ ಮತ್ತು ೪೬ ಮಂದಿಗೆ ಪ್ರವೇಶಾವಕಾಶವಿದ್ದಿತು. ಮಣಿಪಾಲದ ಆವರಣದಲ್ಲಿದ್ದ ಗ್ರಂಥಾಲಯ ಸುಮಾರು ೧೩,೨೦೦ ಗ್ರಂಥಗಳನ್ನು ೧೭೭ ನಿಯತಕಾಲಿಕೆಗಳನ್ನು ಹೊಂದಿತ್ತು.

**ಕಾಲೇಜ್ ಆಫ್ ಫಾರ್ಮಸಿ, ಮಣಿಪಾಲ:** ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಅವರ ಆಶ್ರಯದಲ್ಲಿ ೧೯೬೩ರಲ್ಲಿ ಎರಡು ವರ್ಷ ಅವಧಿಯ ಫಾರ್ಮಸಿ ಡಿಪ್ಲೊಮಾ ತರಗತಿಗಳು ೧೫ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಯಿತು. ತದನಂತರ ಎಂ. ಫಾರ್ಮಸಿ ತರಗತಿಗಳು ಪ್ರಾರಂಭಗೊಂಡವು. ೧೯೭೩ರ ವೇಳೆಗೆ ಡಿ.ಫಾರ್ಮಸಿಯಲ್ಲಿ ಒಟ್ಟು ೪೯ (೨೯ ಗಂ.೧೦ ಹೆ), ಬಿ-ಫಾರ್ಮಸಿಗಳಲ್ಲಿ ಒಟ್ಟು ೧೩೭ (೧೨೬ ಗಂ-೧೧ ಹೆ) ಹಾಗೂ ಎಂ. ಫಾರ್ಮಸಿ ತರಗತಿಯಲ್ಲಿ ಒಟ್ಟು ೧೦ (ಎಲ್ಲಾ ಗಂಡು) ವಿದ್ಯಾರ್ಥಿಗಳಿದ್ದರು. ಇದೇ ವರ್ಷಕ್ಕೆ ನಿರ್ದೇಶಕರೂ ಸೇರಿದಂತೆ ಬೋಧಕ ಸಿಬ್ಬಂದಿ ಸಂಖ್ಯೆ ಒಟ್ಟು ೧೨ ಆಗಿದ್ದಿತು. ೨೦೦೬-೦೭ನೇ ಸಾಲಿಗೆ ಸಂಸ್ಥೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨೮೮, ಅಧ್ಯಾಪಕರ ಸಂಖ್ಯೆ ೧೮ ಆಗಿತ್ತು.

**ಸ್ಕೂಲ್ ಆಫ್ ನರ್ಸಿಂಗ್, ಮಣಿಪಾಲ :** ಕಸ್ತೂರ್ಬಾ ವೈದ್ಯಕೀಯ ಕಾಲೇಜು ೧೨ ವಿದ್ಯಾರ್ಥಿಗಳೊಂದಿಗೆ ೧೯೫೯ರಲ್ಲಿ ಇದನ್ನು ಪ್ರಾರಂಭಿಸಿದೆ. ಆಕ್ಸಿಲರಿ ನರ್ಸ್-ಮಿಡ್‌ವೈಫ್ಸ್ ತರಬೇತಿ ತರಗತಿಗಳು ಮುಂದೆ ಒಂದು ನರ್ಸಿಂಗ್ ಶಾಲೆಯಾಗಿ ಪರಿವರ್ತನೆಯಾಯಿತು. ೧೯೬೭ರಲ್ಲಿ ಇಲ್ಲಿ ೧೫ ಮಂದಿಯೊಂದಿಗೆ ಜನರಲ್ ಪ್ರಾಕ್ಟಿಕಲ್ ನರ್ಸಸ್ ಟ್ರೈನಿಂಗ್ ಕೋರ್ಸ್‌ಗಳು ಪ್ರಾರಂಭಗೊಂಡವು. ೧೯೭೨-೭೩ರಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೭೦ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ ೦೭ ಹಾಗೂ ಅಧ್ಯಾಪಕರ ಸಂಖ್ಯೆ ನಾಲ್ಕು ಆಗಿತ್ತು. ೨೦೦೬-೦೭ನೇ ಸಾಲಿಗೆ ಸಂಸ್ಥೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೩೧೧, ಅಧ್ಯಾಪಕರ ಸಂಖ್ಯೆ ೩೦ ಆಗಿತ್ತು.

**ದಂತವೈದ್ಯ ಕಾಲೇಜು, ಮಣಿಪಾಲ್:** ಅಕಾಡೆಮಿ ಆಫ್ ಜನರಲ್ ಎಜುಕೇಷನ್ ವತಿಯಿಂದ ಈ ಸಂಸ್ಥೆ ೧೯೬೫ರಲ್ಲಿ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಅಂಗವಾಗಿ ಸ್ಥಾಪನೆಗೊಂಡು, ೧೯೬೬ರಲ್ಲಿ ೬೦ ವಿದ್ಯಾರ್ಥಿಗಳನ್ನು ಹೊಂದಿದ್ದಿತು. ವಿದೇಶೀಯ ವಿದ್ಯಾರ್ಥಿಗಳೂ ಇಲ್ಲಿ ಪ್ರವೇಶ ಪಡೆದಿದ್ದರು. ೧೯೭೨ರ ವೇಳೆಗೆ ಇಲ್ಲಿ ಒಟ್ಟು ೧೭೫ ಮಂದಿ (ಪ್ರಥಮ ವರ್ಷ-೪೩, ದ್ವಿತೀಯ ವರ್ಷ-೪೦, ತೃತೀಯ ವರ್ಷ-೫೧ ಹಾಗೂ ಚತುರ್ಥ ವರ್ಷ-೧೪) ವಿದ್ಯಾರ್ಥಿಗಳೂ, ೧೭ ಮಂದಿ ಬೋಧಕ ಸಿಬ್ಬಂದಿಯೂ ಇದ್ದರು.

**ಕಸ್ತೂರ್ ಬಾ ದಂತ ವೈದ್ಯ ಕಾಲೇಜು:** ಮಾಹೆಯ ವತಿಯಿಂದ ಈ ಸಂಸ್ಥೆ ೧೯೬೫ರಲ್ಲಿ ಸ್ಥಾಪನೆಯಾಯಿತು. ಡಾ॥ಎಮ್.ವಿ.ಶೆಟ್ಟಿ ವಿದ್ಯಾ ಸಂಸ್ಥೆ ೧೯೮೫ರಲ್ಲಿ ಸ್ಥಾಪನೆಯಾಗಿ, ೧೯೮೭ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸಸ್ ಸಂಸ್ಥೆಯನ್ನು ಪ್ರಾರಂಭಿಸಿತು. ಇದರಲ್ಲಿ ವಾರ್ಷಿಕ ೮೦ ಮಂದಿಗೆ ಪ್ರವೇಶಾವಕಾಶವಿರುವ ನಾಲ್ಕು ವರ್ಷದ ಬಿ.ಎಸ್ಸಿ, ನರ್ಸಿಂಗ್(ಬೇಸಿಕ್), ೩೫ ಮಂದಿಗೆ ಪ್ರವೇಶಾವಕಾಶವಿರುವ ಎರಡು ವರ್ಷಗಳ ಬಿಎಸ್ಸಿ ನರ್ಸಿಂಗ್ (ಪೋಸ್ಟ್ ಸರ್ಟಿಫಿಕೇಟ್), ೩೦ ಮಂದಿಗೆ ಪ್ರವೇಶಾವಕಾಶವಿರುವ ಎರಡು ವರ್ಷಗಳ ಎಂಎಸ್ಸಿ ನರ್ಸಿಂಗ್ ಕೋರ್ಸ್‌ಗಳನ್ನು ನಡೆಸಲಾಗುವುದು. ತದನಂತರ ಸ್ಥಾಪಿಸಲ್ಪಟ್ಟ ಕಾಲೇಜು ಆಫ್ ಫಿಸಿಯೋ ತೆರಪಿಯಲ್ಲಿ ವಾರ್ಷಿಕ ೭೫ ಮಂದಿಗೆ ಪ್ರವೇಶಾವಕಾಶವಿದ್ದು, ನಾಲ್ಕು ವರ್ಷ ಅವಧಿಯ ಬಿ.ಪಿ.ಟಿ. ಕೋರ್ಸ್ ನಡೆಸಲಾಗುವುದು. ಇದರ ಮುಂದಿನ ತರಗತಿಯಾದ ಎಂ.ಪಿ.ಟಿ. ಎರಡು ವರ್ಷಗಳ ಕೋರ್ಸ್ ಆಗಿದ್ದು, ಇದಕ್ಕೆ ವಾರ್ಷಿಕ ಹತ್ತು ಮಂದಿಗೆ ಮಾತ್ರ ಪ್ರವೇಶಾವಕಾಶವಿದೆ. ಇದೇ ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್‌ನಲ್ಲಿ ನಾಲ್ಕು ವರ್ಷಗಳ ಬಿ.ಎ.ಎಸ್.ಎಲ್.ಪಿ (Bachelor of Audiology & Speach Language Pathology) ಕೋರ್ಸ್‌ಗಾಗಿ ವಾರ್ಷಿಕ ೫೦ ಮಂದಿಗೆ ಪ್ರವೇಶಾವಕಾಶವಿರುತ್ತದೆ. ಇದರ ಮುಂದುವರೆದ ಸ್ನಾತಕೋತ್ತರ ಪದವಿ ಆರು ತಿಂಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ (ಎರಡು ವರ್ಷ) ಎಂ.ಎ.ಎಸ್.ಎಲ್.ಪಿ. ಲಭ್ಯವಿದ್ದು, ವಾರ್ಷಿಕ ೨೦ ಮಂದಿಗೆ ಪ್ರವೇಶ

ಕಲ್ಪಿಸುತ್ತದೆ. ಈ ಸಂಸ್ಥೆಯ ಸ್ಕೂಲ್ ಆಫ್ ನರ್ಸಿಂಗ್ ಮೂರುವರೆ ವರ್ಷದ ಜನರಲ್ ನರ್ಸಿಂಗ್ ಪದವಿಗಾಗಿ ೫೦ ಮಂದಿಗೆ ಪ್ರವೇಶ ನೀಡುತ್ತದೆ. ಇನ್‌ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸೈನ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಎರಡು ವರ್ಷ ಅವಧಿಯ ನಾಲ್ಕು ಸೆಮಿಸ್ಟರ್‌ಗಳ ಎಂ.ಎಸ್.ಡಬ್ಲ್ಯು. (ಮಾಸ್ಟರ್ ಆಫ್ ಸೋಷಿಯಲ್ ವರ್ಕ್) ಪದವಿಗಾಗಿ ೫೦ ಮಂದಿಗೆ ಪ್ರವೇಶ ನೀಡುತ್ತದೆ. ೨೦೦೬-೦೭ನೇ ಸಾಲಿಗೆ ಸಂಸ್ಥೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೪೪೦, ಅಧ್ಯಾಪಕರ ಸಂಖ್ಯೆ ೨೯ ಆಗಿತ್ತು.

**ಆಯುರ್ವೇದ ಕಾಲೇಜು, ಉಡುಪಿ:** ಕರ್ನಾಟಕ ಆಯುರ್ವೇದ ಸಂಘದಿಂದ ಆಯೋಜಿಸಲ್ಪಟ್ಟ ಈ ಸಂಸ್ಥೆಯು ಆಯುರ್ವೇದದಲ್ಲಿ ಡಿಪ್ಲೊಮಾ ನೀಡುವ ತರಗತಿಯೊಂದಿಗೆ ಉಡುಪಿಯಲ್ಲಿ ೧೯೫೮ರಲ್ಲಿ ಸ್ಥಾಪಿಸಲ್ಪಟ್ಟಿತ್ತು. ೨೦ ವಿದ್ಯಾರ್ಥಿಗಳೊಂದಿಗೆ ಪ್ರಾರಂಭಿಸಲ್ಪಟ್ಟಿತು. ೧೯೬೪ರಲ್ಲಿ ಇಲ್ಲಿ ಡಿ.ಎ.ಎಂ. ವಿಷಯದಲ್ಲಿ ಡಿಪ್ಲೊಮಾ ತರಗತಿ ಪ್ರಾರಂಭವಾಯಿತು. ೧೯೬೮ರಲ್ಲಿ ಮೂರು ವರ್ಷಗಳ ಅವಧಿಯ ಬಿ.ಎಸ್.ಎ.ಎಂ ಪದವಿ ತರಗತಿ ಪ್ರಾರಂಭಗೊಂಡು, ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಯಿತು. ಇಲ್ಲಿ ಸಂಸ್ಕೃತವು ಒಂದು ಪಠ್ಯವಿಷಯವಾಗಿದ್ದಿತು. ೧೯೭೨ರ ವೇಳೆಗೆ ಇಲ್ಲಿ ಒಟ್ಟು ೪೯ ವಿದ್ಯಾರ್ಥಿಗಳಿದ್ದು, ಅವರಲ್ಲಿ ಮೊದಲ, ಎರಡನೇ ಹಾಗೂ ಮೂರನೇ ವರ್ಷಗಳ ತರಗತಿಗಳಲ್ಲಿ ಕ್ರಮವಾಗಿ ೨೪, ೧೫ ಮತ್ತು ೧೦ ಮಂದಿ ವ್ಯಾಸಂಗ ಮಾಡುತ್ತಿದ್ದರು. ಅಧ್ಯಾಪಕರ ಸಂಖ್ಯೆ ೧೧ ಆಗಿದ್ದಿತು. ಸರ್ಕಾರದ ಅನುದಾನ ಪಡೆಯುತ್ತಿರುವ ಈ ಸಂಸ್ಥೆ ಒಂದು ಉತ್ತಮ ಗ್ರಂಥಾಲಯವನ್ನು ಹೊಂದಿರುತ್ತದೆ. ೨೦೦೬-೦೭ನೇ ಸಾಲಿಗೆ ಸಂಸ್ಥೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೯೮, ಅಧ್ಯಾಪಕರ ಸಂಖ್ಯೆ ೨೩ ಆಗಿತ್ತು.

## ವಯಸ್ಕರ ಶಿಕ್ಷಣ

ಅನಕ್ಷರಸ್ಥರು ಅಕ್ಷರತೆ ಗಳಿಸಿ ಸತ್ಪ್ರಜೆಗಳಾಗಿ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ೧೯೪೯ರಲ್ಲಿ ಸ್ಥಾಪಿಸಲ್ಪಟ್ಟಿತು. ಮೇಲ್ಕಂಡ ಉದ್ದೇಶವಲ್ಲದೆ, ಸಾಂಸ್ಕೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ಯುವ ರೈತರ ಯುವತಿಯರ ಹಾಗೂ ಮಕ್ಕಳ ಕ್ಲಬ್ಬುಗಳನ್ನು ಸ್ಥಾಪಿಸುವುದು, ಸಮಾಜ ಸೇವೆಗಾಗಿ ಗ್ರಾಮ ಸಹಾಯಕರನ್ನು ಸಂಘಟಿಸುವುದು, ಸಮುದಾಯ ಮನರಂಜನಾ ಕಾರ್ಯಕ್ರಮಗಳನ್ನು ಸಂಘಟಿಸುವುದು, ಇವೇ ಮುಂತಾದ ಧ್ಯೇಯೋದ್ದೇಶಗಳನ್ನು ಸಂಸ್ಥೆ ಹೊಂದಿದ್ದಿತು. ಅವಿಭಜಿತ ಜಿಲ್ಲೆಯಲ್ಲಿ ಸಮಿತಿಯ ಕಾರ್ಯಕ್ರಮಗಳು ೧೯೭೦ರ ಅಕ್ಟೋಬರ್ ಎರಡರಂದು ಮೊದಲುಗೊಂಡಿತು. ಒಂದೆರಡು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಸಂಸ್ಥೆಯ ವತಿಯಿಂದ ೬೫ ಸಾಕ್ಷರತಾ ಸಂಘಗಳು ಸ್ಥಾಪನೆಗೊಂಡಿದ್ದು, ಇವುಗಳಲ್ಲಿ ಹತ್ತು ಮಹಿಳೆಯರಿಗಾಗಿಯೇ ಇದ್ದವು. ಈ ಎಲ್ಲಾ ಸಂಘಗಳಲ್ಲಿ ಒಟ್ಟು ೧,೧೬೨ ಸದಸ್ಯರಿದ್ದು, ಅವರಲ್ಲಿ ೧೫೬ ಮಂದಿ ಮಹಿಳೆಯರಾಗಿದ್ದರು. ಮಂಗಳೂರು ಹಾಗೂ ಕುಂದಾಪುರಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ೧೯೭೧-೭೨ನೇ ಸಾಲಿಗೆ ೭೦ ಗಂಡಸರು ಹಾಗೂ ೧೫ ಹೆಂಗಸರು ಅಕ್ಷರಸ್ಥರಾಗಿದ್ದರು. ೧೯೭೨ರ ಏಪ್ರಿಲ್‌ನಲ್ಲಿದ್ದಂತೆ ಜಿಲ್ಲೆಯಲ್ಲಿದ್ದ ಸಾಕ್ಷರತಾ ತರಗತಿಗಳ ವಿವರ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ : ೧೩.೧೮**

| ಕ್ರ.ಸಂ. | ತಾಲೂಕು | ಸಾಕ್ಷರತಾ ತರಗತಿಗಳ ಸಂಖ್ಯೆ | | ಒಟ್ಟು |
|---|---|---|---|---|
| ೧. | ಮಂಗಳೂರು | ೧೫ | ೧೬ | ೨೧ |
| ೨. | ಬಂಟ್ವಾಳ | ೦೪ | ೦೦ | ೦೪ |
| ೩. | ಬೆಳ್ತಂಗಡಿ | ೦೮ | ೦೦ | ೦೮ |
| ೪. | ಕುಂದಾಪುರ | ೦೬ | ೦೨ | ೦೮ |
| ೫. | ಕಾರ್ಕಳ | ೦೧ | ೦೦ | ೦೧ |
| ೬. | ಪುತ್ತೂರು | ೧೩ | ೦೦ | ೧೩ |
| ೭. | ಉಡುಪಿ | ೦೮ | ೦೨ | ೧೦ |
| | ಒಟ್ಟು | ೫೫ | ೧೦ | ೬೫ |

ಇದೇ ಅವಧಿಯಲ್ಲಿ ೩೦ ಮಂದಿ ಅಧ್ಯಾಪಕರಿಗೆ ವಯಸ್ಕರ ಶಿಕ್ಷಣ ತರಬೇತಿ ನೀಡಲಾಯಿತು ಹಾಗೂ ವಯಸ್ಕರ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪುಸ್ತಕ ಮೇಳಗಳನ್ನು ನಡೆಸಲಾಯಿತು.

## ಸ್ಕೌಟ್ಸ್ ಮತ್ತು ಗೈಡ್ಸ್

ಕಿರಿಯ ವಯಸ್ಸಿನ ಸಮುದಾಯದ ಶಕ್ತಿ ಸಾಮರ್ಥ್ಯಗಳಿಗೆ ಶಿಸ್ತು, ಸಂಘಟನೆ, ಸೇವೆಯ ಸ್ವರೂಪ ನೀಡುವ ಧ್ಯೇಯ ಹೊಂದಿದ ಸ್ಕೌಟ್ ಚಳವಳಿ ಮೊಟ್ಟ ಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ೧೯೦೭ರಲ್ಲಿ ಪ್ರಾರಂಭವಾಯಿತು. ಆ ವರ್ಷ ಅಲ್ಲಿನ ಬ್ರೌನ್ ಸೀ ದ್ವೀಪದಲ್ಲಿ ಸ್ಕೌಟ್ ಚಳವಳಿಯ ಜನಕ ಲಾರ್ಡ್‌ಬೆಡನ್ ಪೊವೆಲ್ ಅವರು ಪ್ರಥಮ ಪ್ರಾಯೋಗಿಕ ಶಿಬಿರವನ್ನು ಆರಂಭಿಸಿದರು. ಭಾರತದಲ್ಲಿ ಮೊದಲ ಬಾರಿಗೆ ಬೆಂಗಳೂರಿನ ಬಿಷಪ್‌ಕಾಟನ್ ಶಾಲೆಯಲ್ಲಿ ನಿವೃತ್ತ ಸೈನ್ಯಾಧಿಕಾರಿ ಟಿ.ಎಚ್.ಬೇಕರ್ ೧೯೦೯ರಲ್ಲಿ ಸ್ಕೌಟ್ ಚಟುವಟಿಕೆ ಪ್ರಾರಂಭಗೊಂಡಾಗ, ಇಂತಹುದೇ ಕಾರ್ಯಕ್ರಮ ಅದೇ ಕಾಲಕ್ಕೆ ಲೆ॥ಕ॥ ಪೆಕೆನ್ಹಮ್ ವಾಲ್ಷ್ ಎಂಬುವವರಿಂದ ಜಬಲ್‌ಪುರದಲ್ಲಿಯೂ, ಕ್ಯಾ॥ ಟಾಡ್ ಎಂಬುವವರಿಂದ ಪುಣೆ ಬಳಿಯ 'ಕರ್ಕಿ'ಯಲ್ಲಿಯೂ ಪ್ರಾರಂಭಗೊಂಡಿತು. ಮೈಸೂರು ಮಹಾರಾಜರ ಕಾಲದಲ್ಲಿ 'ದಿ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರು' ಸಂಸ್ಥೆ ಅಂಕುರಿಸಿ, ಇದಕ್ಕೆ ಯುವರಾಜ ಶ್ರೀ ಜಯಚಾಮರಾಜ ಒಡೆಯರ್ ಮುಖ್ಯ ಗೈಡ್ ಆಗಿದ್ದರು. ೧೯೧೭ರ ಅಕ್ಟೋಬರ್ ಮೂರನೇ ತಾರೀಖಿನಂದು ಹೊರಡಿಸಲ್ಪಟ್ಟ ರಾಜಾಜ್ಞೆಯಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ ಚಟುವಟಿಕೆಗಳು ಪ್ರಾರಂಭಗೊಂಡವು. ಸ್ಕೌಟ್ ಚಳುವಳಿಯ ಸೋದರ ಸಂಸ್ಥೆಯಾದ 'ದಿ ಗರ್ಲ್ ಗೈಡ್ಸ್ ಆಫ್ ಮೈಸೂರ್' ೧೯೨೭ರಲ್ಲಿ ರೂಪುಗೊಂಡು ಅದಕ್ಕೆ ಯುವರಾಣಿಯವರೇ ಮುಖ್ಯ ಗೈಡ್ ಆದರು. ಈ ಎರಡೂ ಸಂಸ್ಥೆಗಳು ೧೯೫೧ರಲ್ಲಿ ವಿಲೀನಗೊಂಡು 'ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್' ಎಂದು ನಾಮಕರಣಗೊಂಡಿತು.

ಇತ್ತೀಚಿನ ದಶಕಗಳಲ್ಲಿ ಜಿಲ್ಲೆಯಲ್ಲಿ ಸ್ಕೌಟಿಂಗ್ ಚಟುವಟಿಕೆ ಹಾಗೂ ಕಾರ್ಯಕ್ರಮಗಳು ಹುರುಪಿನಿಂದ ನಿರಂತರವಾಗಿ ನಡೆಯುತ್ತಿದ್ದು, ಇದರ ಧ್ಯೇಯೋದ್ದೇಶ, ಸಾಧನೆಗಳಿಂದ ಪ್ರೋತ್ಸಾಹ ದೊರೆತ ಜಿಲ್ಲೆಯ ಜನ ವಯಸ್ಸಿನ ಅಂತರವಿಲ್ಲದೆ ಈ ಸಂಸ್ಥೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜಿಲ್ಲೆಯೆಲ್ಲೆಡೆ ಕಾರ್ಯನಿರ್ವಹಿಸುತ್ತಿರುವ ಸ್ಕೌಟ್ಸ್ ಸಂಸ್ಥೆ ಉತ್ಸವ, ಸಪ್ತಾಹ, ರ್‍ಯಾಲಿ, ರಾಷ್ಟ್ರೀಯ ದಿನಾಚರಣೆಗಳನ್ನು ಹಮ್ಮಿಕೊಂಡು ಜನಾನುರಾಗಿಯಾಗಿ ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ಸ್‌ಗೆ ತರಬೇತಿ ಶಿಬಿರಗಳೇ ಅಲ್ಲದೆ, ಸ್ಕೌಟರ್ಸ್ ಹಾಗೂ ಗೈಡರ್ಸ್‌ಗಾಗಿ ಪುನಶ್ಚೇತನ ಶಿಬಿರಗಳನ್ನೂ ನಡೆಸಿದೆ. ಈ ಸಂಸ್ಥೆಯು ರಾಜ್ಯದಲ್ಲಿಯೇ ಅತ್ಯುತ್ತಮ ಕ್ರಿಯಾಶೀಲ ಸಂಸ್ಥೆ ಎಂಬ ಪ್ರಶಸ್ತಿಯನ್ನು ಸತತವಾಗಿ ನಾಲ್ಕು ಭರಿ ಪಡೆದು, ಜಿಲ್ಲೆಗೆ ಕೀರ್ತಿ ತಂದಿದೆ.

## ನ್ಯಾಷನಲ್ ಕೆಡೆಟ್ ಕೋರ್ (ಎನ್.ಸಿ.ಸಿ.)

ಜಿಲ್ಲೆಯ ಎನ್.ಸಿ.ಸಿ. ದಳಕ್ಕೆ ಐದು ದಶಕಗಳ ಇತಿಹಾಸವಿದೆ. ಹಿಂದಿನ ಮದರಾಸು ರಾಜ್ಯದ ಆಡಳಿತದಲ್ಲಿದ್ದ ಪಾಲ್‌ಘಾಟ್‌ನ ೪ನೇ ಮದ್ರಾಸ್ ಬೆಟ್ಯಾಲಿಯನ್ ಎನ್.ಸಿ.ಸಿ. ದಳದ ತುಕಡಿಯೊಂದು ೧೯೫೦ರಲ್ಲಿ ಮಂಗಳೂರಿನಲ್ಲಿ ಕಾರ್ಯನಿರ್ವಸುತಿತ್ತು. ಇದರ ಆಡಳಿತದಡಿಯಲ್ಲಿ ೧೯೫೪ರಲ್ಲಿ ಅಂದಿನ ಕೂರ್ಗ್ ರಾಜ್ಯದ ಮಡಿಕೇರಿಯಲ್ಲಿ ಒಂದು ಸ್ವತಂತ್ರ ಎನ್.ಸಿ.ಸಿ. ಕಂಪನಿ 'ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿ ಎನ್.ಸಿ.ಸಿ.' ಎಂಬ ಪದನಾಮದೊಂದಿಗೆ ಸ್ಥಾಪಿಸಲ್ಪಟ್ಟಿತು. ೧೯೫೬ರಲ್ಲಿ ರಾಜ್ಯ ಪುನರ್ಘಟನೆಯಾದಾಗ ಮೇಲಿನ ಘಟಕಗಳು ಮಾರ್ಪಾಡುಗೊಂಡು, ೧೯೫೮ರಲ್ಲಿ ಮಂಗಳೂರಿನಲ್ಲಿ ರಾಜ್ಯದ ಪ್ರಥಮ ನೌಕಾದಳವಾದ '೧೫ನೇ ಮೈಸೂರ್ ನೇವಲ್ ಯೂನಿಟ್' ಸ್ಥಾಪನೆಯಾಯಿತು. ಎನ್.ಸಿ.ಸಿ. ಚಟುವಟಿಕೆಗಳು ೧೯೬೦ರಲ್ಲಿ ಬಿರುಸುಗೊಂಡು, ೧೯೬೩ರಲ್ಲಿ ಮುಂದಿನ ನಾಲ್ಕು ಘಟಕಗಳು ಸ್ಥಾಪನೆಗೊಂಡವು. '೫೯ನೇ ಮೈಸೂರ್ ಎನ್.ಸಿ.ಸಿ. ರೈಫಲ್ಸ್ ಬೆಟ್ಯಾಲಿಯನ್ ಮಂಗಳೂರು, ೬೮ನೇ ಮೈಸೂರು ಎನ್.ಸಿ.ಸಿ. ರೈಫಲ್ಸ್ ಬೆಟ್ಯಾಲಿಯನ್, ಮಡಿಕೇರಿ ಹಾಗೂ ೩ನೇ ಮೈಸೂರ್ ನೇವಲ್ ಯೂನಿಟ್

ಉಡುಪಿ. ಮೇಲ್ಕಂಡ ರೈಫಲ್ಸ್ ಬೆಟ್ಯಾಲಿಯನ್‌ಗಳು ೧೯೬೫ರಲ್ಲಿ ಕ್ರಮವಾಗಿ ೬ನೇ ಮೈಸೂರು ಬೆಟ್ಯಾಲಿಯನ್ ಎನ್.ಸಿ.ಸಿ., ೧೬ನೇ ಮೈಸೂರು ಬೆಟ್ಯಾಲಿಯನ್ ಎನ್.ಸಿ.ಸಿ. ಹಾಗೂ ೧೯ನೇ ಮೈಸೂರು ಬೆಟ್ಯಾಲಿಯನ್ ಎಂದು ಪುನರ್ನಾಮಕರಣಗೊಂಡವು. ನಾಲ್ಕನೇ ಸ್ವತಂತ್ರ ಘಟಕ ೨೯ನೇ ಮೈಸೂರು ಬೆಟ್ಯಾಲಿಯನ್ ಎನ್.ಸಿ.ಸಿ. ಎಂಬ ಪದನಾಮದೊಂದಿಗೆ ಉಡುಪಿಗೆ ಸ್ಥಳಾಂತರಗೊಂಡಿತು. ತದನಂತರ ಸುರತ್ಕಲ್‌ನಲ್ಲಿ ೪ನೇ ಮೈಸೂರು ಇಂಜನೀಯರ್ ರೆಜಿಮೆಂಟ್ ಎನ್.ಸಿ.ಸಿ., ಮಣಿಪಾಲದಲ್ಲಿ ೫ನೇ ಮೈಸೂರು ಇಂಜನೀಯರ್ ರೆಜಿಮೆಂಟ್ ಎನ್.ಸಿ.ಸಿ., ಹಾಗೂ ಮಂಗಳೂರಿನಲ್ಲಿ ೪ನೇ ಮೈಸೂರು ಏರ್ ಸ್ಕ್ವಾಡ್ರನ್ ಎನ್‌ಸಿಸಿ ಘಟಕಗಳು ಅಧಿಕ ಘಟಕಗಳಾಗಿ ಸ್ಥಾಪಿಸಲ್ಪಟ್ಟವು. ಈ ಎಲ್ಲ ಘಟಕಗಳ ಸಮರ್ಥ ನಿರ್ವಹಣೆಗಾಗಿ ೧೯೬೫ರಲ್ಲಿ ಮಂಗಳೂರಿನಲ್ಲಿ ಎನ್.ಸಿ.ಸಿ. ಗ್ರೂಪ್ ಹೆಡ್‌ಕ್ವಾರ್ಟರ್ಸ್ ಸ್ಥಾಪನೆಗೊಂಡಿತು. ಮೈಸೂರು ರಾಜ್ಯ ಕರ್ನಾಟಕ ಎಂದು ನಾಮಕರಣಗೊಂಡ ನಂತರ ರಾಜ್ಯದ ಎಲ್ಲಾ ಘಟಕಗಳನ್ನು 'ಕರ್ನಾಟಕ ಎನ್.ಸಿ.ಸಿ. ಬೆಟ್ಯಾಲಿಯನ್ ಘಟಕ' ಎಂದು ಕರೆಯಲಾಯಿತು. ಎನ್.ಸಿ.ಸಿ. ಆಡಳಿತದಲ್ಲಿ ಹೈಸ್ಕೂಲುಗಳಿಗಾಗಿ ಜ್ಯೂನಿಯರ್ ಡಿವಿಷನ್ ಹಾಗೂ ಕಾಲೇಜುಗಳಿಗಾಗಿ ಸೀನಿಯರ್ ಡಿವಿಷನ್‌ಗಳು ಕಾರ್ಯನಿರ್ವಹಿಸುತ್ತವೆ. ಉಡುಪಿಯ ಎನ್.ಸಿ.ಸಿ.ದಳದ ಆಡಳಿತ ವ್ಯಾಪ್ತಿಗೆ ಶೃಂಗೇರಿಯೂ ಸೇರಿದ್ದು, ಅಲ್ಲಿನ ಜೆ.ಸಿ.ಬಿ.ಎಂ. ಕಾಲೇಜು ಹಾಗೂ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಎರಡು ದಳಗಳು ಕಾರ್ಯನಿರ್ವಹಿಸುತ್ತಿವೆ. ೨೦೦೬ರ ಸೆಪ್ಟೆಂಬರ್‌ನಲ್ಲಿದ್ದಂತೆ, ಜಿಲ್ಲೆಯ ೨೫ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಹಿರಿಯ ಹಾಗೂ ಕಿರಿಯ ಎನ್.ಸಿ.ಸಿ. ದಳಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ ಒಟ್ಟು ೧೯೨೫ ಕೆಡೆಟ್‌ಗಳು ೨೦ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಎನ್.ಸಿ.ಸಿ. ತರಬೇತಿ ಪಡೆಯುತ್ತಿದ್ದರು. ೨೦೦೬–೦೭ನೇ ಸಾಲಿನ ವಿವಿಧ ವಿದ್ಯಾಸಂಸ್ಥೆಗಳ ಎನ್.ಸಿ.ಸಿ. ಕೆಡೆಟ್ ಮತ್ತು ಅಧಿಕಾರಿಗಳ ವಿವರಗಳನ್ನು ಕೋಷ್ಟಕ ೧೩.೧೯ರಲ್ಲಿ ನೀಡಿದೆ.

ಮೇಲ್ಕಂಡ ದಳದಿಂದ ಇಬ್ಬರು ಕೆಡೆಟ್‌ಗಳು ಪುಣೆಯಲ್ಲಿ ೨೦೦೧ರಲ್ಲಿ ನಡೆದ ಅಥ್ಲೆಟಿಕ್ಸ್‌ನಲ್ಲಿಯೂ, ಒಬ್ಬ ಮಹಿಳಾ ಕೆಡೆಟ್ ಅದೇ ವರ್ಷ ಔರಂಗಾಬಾದ್‌ನಲ್ಲಿ ನಡೆದ ವಾಲಿಬಾಲ್ ಸ್ಪರ್ಧೆಯಲ್ಲಿಯೂ, ಎಂಟು ಮಂದಿ (೧೯೯೯ ರಿಂದ) ದೆಹಲಿಯ ಗಣರಾಜ್ಯೋತ್ಸವದಲ್ಲಿಯೂ ಪಾಲ್ಗೊಂಡಿದ್ದು, ೧೯೯೬ರಲ್ಲಿ ಎಸ್.ಯು.ಓ. ಗಿರೀಶ್ ಉಪಾಧ್ಯ ಹಾಗೂ ೨೦೦೦ದಲ್ಲಿ ಎಸ್.ಯು.ಓ. ರಂಜಿತ್‌ಕುಮಾರ್ ಅವರು ಭಾರತೀಯ ಸೇನೆಯಲ್ಲಿ ಕಮೀಷನ್ಡ್ ಅಧಿಕಾರಿಗಳಾಗಿ ದಾಖಲಾಗಿದ್ದಾರೆ.

## ಗ್ರಂಥಾಲಯಗಳು

**ನೆಹರು ಮೆಮೋರಿಯಲ್ ಲೈಬ್ರರಿ, ಮಣಿಪಾಲ:** ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ವತಿಯಿಂದ ಇದು ಒಂದು ಸಾರ್ವಜನಿಕ ಗ್ರಂಥಾಲಯವಾಗಿ ೧೯೫೬ರಲ್ಲಿ ಪ್ರಾರಂಭಗೊಂಡಿತು. ರೂ. ೧,೩೦,೦೦೦ಗಳ ವೆಚ್ಚದಲ್ಲಿ ನಿರ್ಮಿತವಾಗಿರುವ ಸ್ವಂತ ಕಟ್ಟಡ ಹೊಂದಿರುವ ಈ ಗ್ರಂಥಾಲಯದಲ್ಲಿ ೧೯೭೨ರಲ್ಲಿ ಸುಮಾರು ೨೫,೦೦೦ ಮೌಲ್ಯದ ಬೆಲೆ ಬಾಳುವ ಗ್ರಂಥ ಸಂಗ್ರಹವಿದ್ದಿತು ಹಾಗೂ ಸುಮಾರು ೧೫೦ ಮಂದಿ ದಿನಂಪ್ರತಿ ಇಲ್ಲಿಗೆ ಓದುಗರಾಗಿ ಭೇಟಿ ನೀಡುತ್ತಿದ್ದರು. ಈ ವರ್ಷಕ್ಕೆ ಐದು ಮಂದಿ ಅಜೀವ ಸದಸ್ಯರನ್ನು ೩೦೫ ಮಂದಿ ವಾರ್ಷಿಕ ಸದಸ್ಯರನ್ನು ಹೊಂದಿದ್ದ ಈ ಸಂಸ್ಥೆ ಆರು ದೈನಿಕ, ೧೨ ಸಾಪ್ತಾಹಿಕ, ನಾಲ್ಕು ಪಾಕ್ಷಿ ಹಾಗೂ ೧೦ ಮಾಸಿಕಗಳನ್ನು ತರಿಸುತ್ತಿತ್ತು. ಮೂರರಿಂದ ೧೪ ವರ್ಷದ ಮಕ್ಕಳಿಗಾಗಿ ಇಲ್ಲಿ ಒಂದು ಬಾಲವಿಭಾಗವಿದ್ದು, ಇಂಗ್ಲೀಷ್, ಕನ್ನಡ ಹಾಗೂ ಹಿಂದಿ ಭಾಷೆಗಳ ಸುಮಾರು ೧,೨೦೦ ಪುಸ್ತಕ ಸಂಗ್ರಹ ಹೊಂದಿತ್ತು.

ಜಿಲ್ಲೆಯಲ್ಲಿ ಜಿಲ್ಲಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ (ಲೋಕಲ್ ಲೈಬ್ರರಿ ಅಥಾರಿಟಿ) ೧೯೪೮ರಲ್ಲಿ ಅಸ್ತಿತ್ವದಲ್ಲಿದ್ದಿತು. ಓದುವ ಹವ್ಯಾಸ ಜನರಲ್ಲಿ ಉಂಟುಮಾಡಲು ಹಲವಾರು ಗ್ರಂಥಾಲಯಗಳುಳ್ಳ ಜಾಲವನ್ನೇ ತಯಾರಿಸುವ ಅವಕಾಶ ಈ ಕಾಯ್ದೆಯಲ್ಲಿ ಉಂಟುಮಾಡಲಾಗಿತ್ತು. ಈ ಕಾಯ್ದೆಯಂತೆ ಪ್ರತೀ ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆ ಹಾಗೂ ಪುರಸಭೆಗಳ ಸಹಾಯದಿಂದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ ಸ್ಥಾಪಿಸಬೇಕಿತ್ತು. ಇದಕ್ಕಾಗಿ ಆರ್ಥಿಕ ಸಹಾಯವನ್ನು ಗ್ರಂಥಾಲಯ ಸೆಸ್(ಶುಲ್ಕ) ನಿಂದ ಪಡೆಯಬೇಕಿತ್ತು.

**ಕೋಷ್ಟಕ : ೧೩.೧೯**

| ಕ್ರ.ಸಂ. | ಸಂಸ್ಥೆ ಹೆಸರು | ಅಧಿಕಾರಿಗಳ ಸಂಖ್ಯೆ | ಕೆಡೆಟ್‌ಗಳ ಸಂಖ್ಯೆ |
|---|---|---|---|
| | **ಹಿರಿಯ ಎನ್.ಸಿ.ಸಿ. ದಳ** | | |
| ೧ | ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ | – | ೧೨೫ |
| ೨ | ಭಂಡಾರ್ಕರ್ಸ್ ಕಾಲೇಜು, ಕುಂದಾಪುರ | ೦೧ | ೮೦ |
| ೩ | ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ | – | ೧೦೦ |
| ೪ | ಪೂರ್ಣಪಜ್ಞ ಕಾಲೇಜು, ಉಡುಪಿ | ೦೧ | ೧೦೦ |
| ೫ | ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ | ೦೧ | ೧೦೦ |
| ೬ | ಸೆಂಟ್ ಮೇರಿ ಕಾಲೇಜು, ಶಿರ್ವ | ೦೧ | ೮೦ |
| ೭ | ಶ್ರೀ ಶಾರದಾ ಕಾಲೇಜು, ಬಸ್ರೂರು | ೦೧ | ೬೦ |
| ೮ | ಎಸ್.ಎಂ.ಎಸ್. ಕಾಲೇಜು, ಬ್ರಹ್ಮಾವರ | ೦೧ | ೬೦ |
| ೯ | ಜೆ. ಎನ್. ವಿದ್ಯಾಲಯ, ಬಾಳೆಹೊನ್ನುರು | ೦೧ | ೫೦ |
| ೧೦ | ಎಸ್.ವಿ. ಪದವಿಪೂರ್ವ ಕಾಲೇಜು, ಗಂಗೊಳ್ಳಿ | ೦೧ | ೫೦ |
| ೧೧ | ಸರ್ಕಾರಿ ಪದವಿಪೂರ್ವ ಕಾಲೇಜು, ಶೃಂಗೇರಿ | ೦೧ | ೧೦೦ |
| ೧೨ | ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ | ೦೧ | ೧೦೦ |
| ೧೩ | ವಿ.ಕೆ.ಆರ್.ಎಂ. ಇಂಗ್ಲಿಷ್ ಮಿಡಿಯಂ ಸ್ಕೂಲ್, ಕುಂದಾಪುರ | ೦೧ | ೫೦ |
| ೧೪ | ಸೆಂಟ್ ಮೇರಿ ಹೈಸ್ಕೂಲ್ ಕುಂದಾಪುರ | ೦೧ | ೫೦ |
| ೧೫ | ಪೂರ್ಣಪ್ರಜ್ಞ ಕಾಲೇಜು ಉಡುಪಿ | ೦೧ | ೫೦ |
| ೧೬ | ಎಂ.ಜಿ.ಎಂ. ಕಾಲೇಜು ಉಡುಪಿ | ೦೧ | ೫೦ |
| ೧೭ | ಎಸ್.ವಿ. ಪದವಿಪೂರ್ವ ಕಾಲೇಜು ಗಂಗೊಳ್ಳಿ | ೦೧ | ೫೦ |
| | **ಕಿರಿಯ ಎಸ್.ಸಿ.ಸಿ. ದಳ** | | |
| ೧೮ | ಡಾ॥ ಎನ್.ಎಸ್.ಎ.ಎಂ. ಪದವಿಪೂರ್ವ ಕಾಲೇಜು ನಿಟ್ಟೆ | ೦೧ | ೫೦ |
| ೧೯ | ಎಸ್. ಎನ್. ವಿ. ಪ್ರೌಢಶಾಲೆ, ಹಿರೇಯಂಗಡಿ | ೦೧ | ೫೦ |
| ೨೦ | ಎಸ್. ವಿ. ಎಸ್. ಪದವಿಪೂರ್ವ ಕಾಲೇಜು, ಕಟಪಾಡಿ | ೦೧ | ೧೦೦ |
| ೨೧ | ಸೆಂಟ್ ಜೋಸೆಫ್ ಪ್ರೌಢಶಾಲೆ, ಬೆಳ್ಮಣ್ಣು | ೦೧ | ೫೦ |
| ೨೨ | ಎಸ್.ವಿ.ಹೆಚ್. ಪದವಿಪೂರ್ವ ಕಾಲೇಜು, ಇನ್ನಂಜೆ | ೦೧ | ೫೦ |
| ೨೩ | ಸೆಂಟ್ ಮೇರಿ ಕಿರಿಯ(ಜ್ಯೂನಿಯರ್) ಕಾಲೇಜು,ಶಿರ್ವ | – | ೫೦ |
| ೨೪ | ನ್ಯಾಷನಲ್ ಪದವಿಪೂರ್ವ ಕಾಲೇಜು, ಬಾರ್ಕೂರ್ | – | ೧೦೦ |

ಮೈಸೂರು ಸಾರ್ವಜನಿಕ ಗ್ರಂಥಾಲಯ ಕಾಯ್ದೆ ೧೯೬೫ರಲ್ಲಿ ಜಾರಿಯಾಗಿ, ಗ್ರಂಥಾಲಯ ಚಳವಳಿಯಲ್ಲಿ ಒಂದು ಮೈಲುಗಲ್ಲಾಯಿತು. ಇದರಂತೆ ೧೯೬೬ರ ಅಕ್ಟೋಬರ್‌ನಲ್ಲಿ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸ್ಥಾಪನೆಯಾಯಿತು. ಇದಕ್ಕಾಗಿ ಶಿಕ್ಷಣ ಮಂತ್ರಿಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಗೊಂಡು, ವಿವಿಧ ಕ್ಷೇತ್ರಗಳ ೨೨ ತಜ್ಞರನ್ನು ಇದಕ್ಕೆ ಸದಸ್ಯರನ್ನಾಗಿ ನೇಮಿಸಲಾಯಿತು. ರಾಜ್ಯ ಗ್ರಂಥಾಲಯಾಧಿಕಾರಿ ಇದಕ್ಕೆ ಪದನಿಮಿತ್ತ ಕಾರ್ಯದರ್ಶಿಯಾದರು. ಈ ಕಾಯ್ದೆ ಜಾರಿಯಾದ ನಂತರ, ಜಿಲ್ಲೆಯಲ್ಲಿ ಅಲ್ಲಿಯವರೆಗೂ ಚಾಲ್ತಿಯಲ್ಲಿದ್ದ ಮದರಾಸ್ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ೧೯೪೮–ರದ್ದುಗೊಂಡಿತು. ಈ ಕಾಯ್ದೆಯ ಮೂರು ಹಾಗೂ ಹದಿನಾರರ ಕಲಮಿನಂತೆ ಒಂದು ನೂತನ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ ೧೯೬೯–೭೦ರಲ್ಲಿ ರಚಿತವಾಯಿತು ಹಾಗೂ ಭೂಗಂದಾಯದ ಶೇಕಡಾ ಮೂರರಷ್ಟು ಹಣವನ್ನು ಗ್ರಂಥಾಲಯಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಮೀಸಲಿಡಲಾಯಿತು. ಈ ವರ್ಷ ಮಂಗಳೂರು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ ನಡೆಸುತ್ತಿದ್ದ ಎಲ್ಲಾ ಗ್ರಂಥಾಲಯಗಳನ್ನು ಸರಕಾರ ವಹಿಸಿಕೊಂಡಿತು.

ಅವಿಭಜಿತ ಜಿಲ್ಲೆಯಲ್ಲಿ ೧೯೭೨ರಲ್ಲಿದ್ದಂತೆ, ಒಂದು ಜಿಲ್ಲಾ ಹಾಗೂ ಒಂದು ನಗರ ಕೇಂದ್ರ ಗ್ರಂಥಾಲಯಗಳು ಮಂಗಳೂರಿನಲ್ಲಿಯೂ, ಪ್ರತೀ ತಾಲೂಕು ಕೇಂದ್ರದಲ್ಲಿ ಒಂದರಂತೆ ಏಳು ಶಾಖಾ

ಗ್ರಂಥಾಲಯಗಳೂ, ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದ ಆರು ಅನುದಾನಿತ ಖಾಸಗಿ ಗ್ರಂಥಾಲಯಗಳೂ ಕಾರ್ಯನಿರ್ವಹಿಸುತ್ತಿದ್ದವು.

೧೯೫೪ರಲ್ಲಿಯೇ ಉಡುಪಿ ಹಾಗೂ ಕಾರ್ಕಳಗಳಲ್ಲಿ ಶಾಖಾ ಗ್ರಂಥಾಲಯಗಳು ಸ್ಥಾಪನೆಗೊಂಡಿದ್ದರ ಬಗ್ಗೆ ಅಧಿಕೃತ ಮಾಹಿತಿ ಇದೆ. ನಂತರದ ವರ್ಷಗಳಲ್ಲಿ ಕುಂದಾಪುರದಲ್ಲಿ ಶಾಖಾ ಗ್ರಂಥಾಲಯವೊಂದು ೧೯೫೫ರಲ್ಲಿ ಸ್ಥಾಪನೆಗೊಂಡಿತು. ಇವುಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ. ಉಡುಪಿಯಲ್ಲಿ ಕೇಂದ್ರ ಗ್ರಂಥಾಲಯವು ೧೨-೫-೨೦೦೫ರಲ್ಲಿ ಪ್ರಾರಂಭವಾಯಿತು. ೨೦೦೫ ಹಾಗೂ ೨೦೦೬ನೇ ಸಾಲಿಗೆ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಗ್ರಂಥಾಲಯಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ : ೧೩.೨೦**

| ಕ್ರ ಸಂ. | ಶಾಖಾ ಗ್ರಂಥಾಲಯದ ಹೆಸರು | ಸ್ಥಾಪನಾ ವರ್ಷ | ದಾಸ್ತಾನಿನಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ | ಸರಬರಾಜು ಆಗುತ್ತಿರುವ ನಿಯತಕಾಲಿಕೆಗಳ ಸಂಖ್ಯೆ | ಸರಬರಾಜು ಆಗುತ್ತಿರುವ ದಿನಪತ್ರಿಕೆಗಳ ಸಂಖ್ಯೆ | ಸದಸ್ಯರ ಒಟ್ಟು ಸಂಖ್ಯೆ | ಗ್ರಂಥಾಲಯಕ್ಕೆ ಭೇಟಿ ನೀಡುವ ಓದುಗರ ಸಂಖ್ಯೆ | | | ಪುಸ್ತಕ ಎರವಲು ನೀಡುವ ಸಂಖ್ಯೆ | | |
|---|---|---|---|---|---|---|---|---|---|---|---|---|
| | | | | | | | ದೈನಂದಿನ | ಮಾಸಿಕ | ವಾರ್ಷಿಕ | ದೈನಂದಿನ | ಮಾಸಿಕ | ವಾರ್ಷಿಕ |
| ೧ | ಉಡುಪಿ | ೧೯೫೪ | ೫೩೩೪೩ | ೨೫ | ೮ | ೭೩೬೫ | ೭೦೦ | ೨೧೦೦೦ | ೨೫೨೦೦೦ | ೨೫೦ | ೭೫೦೦ | ೬೦೦೦೦ |
| ೨ | ಕಾರ್ಕಳ | ೧೯೫೪ | ೬೫೪೫೪ | ೧೮ | ೫ | ೫೫೬೧ | ೭೬೦ | ೨೨೮೦೦ | ೨೭೩೬೦೦ | ೨೯೦ | ೮೭೦೦ | ೧೦೪೪೦೦ |
| ೩ | ಕುಂದಾಪುರ | ೧೯೫೫ | ೩೮೫೨೦ | ೧೦ | ೪ | ೨೯೯೫ | ೪೭೦ | ೧೪೧೦೦ | ೧೬೯೨೦೦ | ೧೯೨ | ೫೭೬೦ | ೬೯೧೨೦ |
| ೪ | ಹೆಬ್ರಿ | ೧೯೮೪ | ೧೧೫೬೩ | ೦೬ | ೫ | ೮೯೨ | ೧೩೫ | ೪೦೫೦ | ೪೮೬೦೦ | ೮೫ | ೨೫೫೦ | ೩೦೬೦೦ |
| ೫ | ಬೈಂದೂರು | ೧೯೮೫ | ೧೨೧೬೬ | ೦೭ | ೫ | ೯೨೦ | ೧೨೫ | ೩೭೫೦ | ೪೫೦೦೦ | ೮೦ | ೨೪೦೦ | ೨೮೮೦೦ |
| ೬ | ಸಾಲಿಗ್ರಾಮ | ೧೯೮೦ | ೧೬೩೫೦ | ೧೫ | ೭ | ೯೮೦ | ೨೦೫ | ೬೧೫೦ | ೭೩೮೦೦ | ೧೨೮ | ೩೮೪೦ | ೪೬೦೮೦ |
| ೭ | ಮಲ್ಪೆ | ೧೯೮೪ | ೧೩೪೫೪ | ೦೯ | ೪ | ೮೨೩ | ೧೨೫ | ೩೭೫೦ | ೪೫೦೦೦ | ೯೦ | ೧೦೮೦ | ೧೨೯೬೦ |
| ೮ | ದೊಡ್ಡಣ ಗುಡ್ಡೆ | ೨೦೦೩ | ೨೯೭೩ | ೧೭ | ೬ | ೧೮೦ | ೧೨೫ | ೩೭೫೦ | ೪೫೦೦೦ | ೧೧೦ | ೧೩೨೦ | ೧೫೮೪೦ |
| ೯ | ಕೆ.ಎಸ್. ರಾವ್ ವಾಚನಾಲಯ ಕುಂದಾಪುರ | ೧೯೮೬ | – | ೧೭ | ೭ | – | ೨೩೫ | ೭೦೫೦ | ೮೪೬೦೦ | – | – | – |

***ಷರಾ:*** *ನೂತನ ಉಡುಪಿ ಜಿಲ್ಲಾ ಕೇಂದ್ರ ಗ್ರಂಥಾಲಯವು ದಿ:೧೨-೦೫-೨೦೦೦ರಲ್ಲಿ ಪ್ರಾರಂಭವಾಯಿತು.*

೧೮೫೮ ರಿಂದ ಮೊದಲುಗೊಂಡು, ಜಿಲ್ಲೆಯ ಪ್ರಮುಖ ಶೈಕ್ಷಣಿಕ ಮೈಲಿಗಳನ್ನು ಈ ಮುಂದಿನಂತೆ ಗುರುತಿಸಬಹುದಾಗಿದೆ.

* ೧೮೫೮ರಲ್ಲಿ ಉಡುಪಿಯಲ್ಲಿ "ಕ್ರಿಶ್ಚಿಯನ್ ಹೈಸ್ಕೂಲ್" ಪ್ರಾರಂಭಿಸಲ್ಪಟ್ಟಿತು. (ಸಂಭ್ರಮ-೧ ಉಡುಪಿ ಜಿಲ್ಲಾ ಉತ್ಸವ-೦೩)
* ಇದೇ ವರ್ಷ ಸ್ತ್ರೀ ಶಿಕ್ಷಣ ಪ್ರವಾದಿ ಪಂಡಿತಾ ರಮಾಬಾಯಿ ಕಾರ್ಕಳ ತಾಲೂಕಿನ ಮಾಳದಲ್ಲಿ ಜನಿಸಿದರು.
* ೧೮೯೦ ಬೋರ್ಡ್ ಹೈಸ್ಕೂಲ್ ಪ್ರಾರಂಭ

* ೧೮೯೮ ಕ್ರಿಶ್ಚಿಯನ್ ಹೈಸ್ಕೂಲ್ ಪ್ರಾರಂಭ
* ೧೯೧೯–ಉಡುಪಿಯಲ್ಲಿ ಸಂಸ್ಕೃತ ಮಹಾಪಾಠ ಶಾಲೆ ಪ್ರಾರಂಭ
* ೧೯೨೦–ಕಾರ್ಕಳದ ಶ್ರೀ ಭುವನೇಂದ್ರ ಸಂಸ್ಕೃತ ಪಾಠಶಾಲೆ ಪ್ರಾರಂಭ.
* ೧೯೪೨–ಮಣಿಪಾಲದಲ್ಲಿ ಟಿ.ಎಂ.ಎ. ಪೈ ಅವರಿಂದ ಅಕಾದಮಿ ಆಫ್ ಜನರಲ್ ಎಜ್ಯುಕೇಷನ್ ಪ್ರಾರಂಭ.
* ೧೯೪೯–ಉಡುಪಿಯಲ್ಲಿ ಮಹಾತ್ಮ ಗಾಂಧಿ ಮೆಡಿಕಲ್ ಕಾಲೇಜ್ ಸ್ಥಾಪನೆ.
* ೧೯೫೩–ಮಣಿಪಾಲದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜು ಸ್ಥಾಪನೆ.
* ೧೯೫೮–ಉಡುಪಿಯಲ್ಲಿ ಆಯುರ್ವೇದ ಕಾಲೇಜು ಸ್ಥಾಪನೆ
* ೧೯೬೦–ಉಡುಪಿ ಪೂರ್ಣಪ್ರಜ್ಞ ಕಾಲೇಜು ಸ್ಥಾಪನೆ.
* ೧೯೬೦– ಕಾರ್ಕಳದ ಭುವನೇಂದ್ರ ಕಾಲೇಜು ಸ್ಥಾಪನೆ.
* ೧೯೬೩– ಕುಂದಾಪುರದಲ್ಲಿ ಭಂಡಾರ್ಕರ್ಸ್ ಕಾಲೇಜು ಆರಂಭ
* ೧೯೬೬– ಉಡುಪಿ ಪೂರ್ಣಪ್ರಜ್ಞ ಸಂಜೆ ಕಾಲೇಜು ಸ್ಥಾಪನೆ.
* ೧೯೭೫– ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಸ್ಥಾಪನೆ.
* ೧೯೮೬– ನಿಟ್ಟೆಯಲ್ಲಿ ಇಂಜನಿಯರಿಂಗ್ ಕಾಲೇಜು ಸ್ಥಾಪನೆ.
* ೧೯೯೩– ಮಾಹೆ ಆರಂಭ.
* ೧೯೯೭– ನೂತನವಾಗಿ ಉಡುಪಿ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

## ಜಿಲ್ಲೆಯ ಪ್ರಮುಖ ಶಿಕ್ಷಣ ಸಂಸ್ಥೆಗಳು

**ಉಡುಪಿ:** ಪೂರ್ಣಪ್ರಜ್ಞ ಪ್ರಥಮ ದರ್ಜೆ ಕಾಲೇಜು, ಪೂರ್ಣಪ್ರಜ್ಞ ಇನ್‌ಸ್ಟಿಟ್ಯೂಟ್ ಆಫ್ ಆಫ್ ಮ್ಯಾನೇಜ್ ಮೆಂಟ್, ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಮಿಲಾಗ್ರೀಸ್ ಕಾಲೇಜು ಕಲ್ಯಾಣಪುರ, ಎಸ್.ಎಂ.ಎಸ್. ಕಾಲೇಜು, ಬ್ರಹ್ಮಾವರ ಕ್ರಾಸ್ ಲ್ಯಾಂಡ್ ಕಾಲೇಜು, ಬ್ರಹ್ಮಾವರ, ಟಿ.ಎಪೈ ಶಿಕ್ಷಣ ಮಹಾವಿದ್ಯಾಲಯ, ಉಪೇಂದ್ರ ಪೈ ಶಿಕ್ಷಣ ಮಹಾವಿದ್ಯಾಲಯ, ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು, ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯಡಕ **ಮಣಿಪಾಲ:** ಮಾಧವ ಪೈ ಮೆಮೋರಿಯಲ್ ಕಾಲೇಜು, ಟಿ.ಎ.ಪೈ ಮ್ಯಾನೇಜ್‌ಮೆಂಟ್ ಸಂಸ್ಥೆ, ಎಂ.ಐ.ಎಂ. ಮ್ಯಾನೇಜ್‌ಮೆಂಟ್ ಸಂಸ್ಥೆ, ಎಂ. ಐ.ಟಿ (ತಾಂತ್ರಿಕ ಕಾಲೇಜು) ಕೆ.ಎಂ.ಸಿ ಕಾಲೇಜು (ಹಾಗೂ ಅದರ ಅಂಗ ಸಂಸ್ಥೆಗಳು) **ಶಿರ್ವ:** ಸುಂದರರಾಮಶೆಟ್ಟಿ ಮೆಮೋರಿಯಲ್ ಕಾಲೇಜು, ಪ್ರೆಂಚ್ ಮೇರೀಸ್ ಕಾಲೇಜು **ಕುಂದಾಪುರ:** ಭಂಡಾರಕಾರ್ಸ್ ಆರ್ಟ್ಸ್ ಮತ್ತು ಸಯನ್ಸ್ ಕಾಲೇಜು, ಶಾರದಾ ಕಾಲೇಜು, ಬಸ್ರೂರು, ಬಿ.ಬಿ ಹೆಗ್ಡೆ ಕಾಲೇಜು, ಮೂಡ್ಲಕಟ್ಟೆ; ಇಂಜಿನಿಯರಿಂಗ್ ಕಾಲೇಜು **ನಿಟ್ಟೆ:** ಮಹಾಲಿಂಗ ಅಡ್ಯಂತಾಯ ಮೆಮೋರಿಯಲ್ ಕಾಲೇಜು (ಇಂಜಿನಿಯರಿಂಗ್)ನಿಟ್ಟೆ , ಜಸ್ಟೀಸ್ ಕೆ.ಎಸ್. ಹೆಗ್ಡೆ ಮ್ಯಾನೇಜ್ ಮೆಂಟ್ ಸಂಸ್ಥೆ, ಶಂಕರ ಅಡ್ಯಂತಾಯ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು **ಕಾರ್ಕಳ:** ಶ್ರೀ ಭುವನೇಂದ್ರ ಕಾಲೇಜು, ಶ್ರೀ ಮಂಜುನಾಥ ಪೈ ಸರಕಾರಿ ಕಾಲೇಜು, ಶ್ರೀ ಎಸ್. ವಿ.ಟಿ ಮಹಿಳಾ ಕಾಲೇಜು **ಹೆಬ್ರಿ:** ಸರಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ.

## ಕ್ರೀಡೆಗಳು

ವೈವಿಧ್ಯಮಯ ಸಂಸ್ಕೃತಿಗಳ, ಜನಾಂಗಗಳ, ಭಾಷೆಗಳ ಆಚಾರ–ವಿಚಾರಗಳ ಪ್ರಭಾವಗಳಿಂದ ರೂಪುಗೊಂಡ ಉಡುಪಿ ಜಿಲ್ಲೆ ಶಿಕ್ಷಣ ಕ್ಷೇತ್ರದಂತೆ ಕ್ರೀಡಾ ಕ್ಷೇತ್ರದಲ್ಲಿಯೂ ಖ್ಯಾತಿಹೊಂದಿದೆ. ಐತಿಹಾಸಿಕ ಜಾನಪದ ಕ್ರೀಡೆಗಳಾದ 'ಕಂಬಳ' ಹಾಗೂ 'ಕೋಳಿ ಅಂಕ'ಗಳಿಂದ ಮೊದಲುಗೊಂಡು, ಜಾಗತಿಕ ಪ್ರಪಂಚದ ಕ್ರೀಡೆಗಳಾದ ಕ್ರಿಕೆಟ್‌ನಿಂದ ಕರಾಟೆವರೆಗೆ ಹಲವು ಹತ್ತು ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳು ಇಲ್ಲಿ ಜನಪ್ರಿಯವಾಗಿವೆ.

## ಜಾನಪದ ಕ್ರೀಡೆ

ಶಾಸನಗಳು ಹಾಗೂ ಮೌಖಿಕ ಪರಂಪರೆಗಳ ಮೂಲಕ ನಾವು ಜಿಲ್ಲೆಯ ಜನಪದ ಆಟಗಳ ಪ್ರಾಚೀನತೆಯನ್ನು ಕಂಡುಕೊಳ್ಳಬಹುದು. ಮಾಖಿಕ ಸಾಹಿತ್ಯದಲ್ಲಿ ಉಲ್ಲೇಖಿತವಾದ ತಾರಾಯಿದ ತಪ್ಪಂಗಾಯಿ (ತೆಂಗಿನ ಕಾಯಿಯ ಜೂಟಾಟ) ಬಜ್ಜೈದೂದು (ಅಡಿಕೆ ಜೂಜು), ಅಂಬೋಡಿ, (ಧರ್ಮಸ್ಥಳ, ಕಾಂತಾವರ ಹಾಗೂ ಹೊಳಲಿಗಳಲ್ಲಿ ಕಾಣಸಿಗುತ್ತದೆ). ಕಾಂತಾವರದ ಬಳಿಯ ಗದ್ದೆಯೊಂದಕ್ಕೆ 'ಆಂಬೋಡಿ ಮಾರು ಎಂಬ ಹೆಸರಿದ್ದು, ಇಲ್ಲಿ ಆಂಬೋಡಿ ಕ್ರೀಡೆ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಟೂಟೆದಾರ, ತೆಂಗಿನ ದೊಂಬಿಗಳಲ್ಲಿ ಆಡುವ ಆಟ (ಕಲೀಲ್‌ನಲ್ಲಿ ಕಾಣಸಿಗುತ್ತದೆ) ಚೆನ್ನೆಮಣೆ, ಚದುರಂಗ ಎಂಬ ಆಟಗಳು ಪ್ರಮುಖವಾದವು.

### ಕೋಳಿ ಅಂಕ

ಜನಪದ ಕ್ರೀಡಾ ವಿನೋದಗಳಲ್ಲಿ ಭೂತಾರಾಧನೆಯ ಅಂಗವಾಗಿಯೂ ಬೆಳೆದುಬಂದು ಹುಟ್ಟಿಕೊಂಡಿರುವ 'ಕೋಳಿ ಅಂಕ'ಕ್ಕೆ ಪ್ರಾಶಸ್ತ್ಯವಿದೆ. ಹುಂಜಗಳ ಕಾಳಗದ ಇತಿಹಾಸವನ್ನು ಕ್ರಿ.ಪೂ.೫೧೪ ರಿಂದ ಗುರುತಿಸಬಹುದು. ಗ್ರೀಕ್ ದೊರೆ ಥೆಮಿಸ್ಟೊಕ್ಲಿಸ್ ಪರ್ಷಿಯಾ ದೇಶದ ಮೇಲೆ ದಂಡೆತ್ತಿ ಹೋಗುವಾಗ ಕೋಳಿಕಾಳಗವನ್ನು ಕಂಡು ಅಂಶ ನಂತರ ತಾನು ಸಾಧಿಸಿದ ಗೆಲುವಿನ ನೆನಪಿಗೆ ವರ್ಷಂಪ್ರತಿ ಏರ್ಪಡಿಸಿದ ಕೋಳಿಕಾಳಗದ ವರ್ಣನೆ ಇತಿಹಾಸದ ಪುಟಗಳಲ್ಲಿ ದಾಖಲಾಗಿ. ರೋಂ, ಸ್ಕಾಟ್ಲೆಂಡ್, ಚೀನಾ, ಇಟಲಿ, ಬರ್ಮಾ ಜರ್ಮನಿ, ಕ್ಯೂಬಾ, ಅಮೆರಿಕಾ ಮುಂತಾದೆಡೆಗಳಲ್ಲಿ ಕೋಳಿಕಾಳಗಗಳು ನಡೆಯುತ್ತಿದ್ದು, ಭಾನುವಾರ ಹಾಗೂ ಹಬ್ಬದ ದಿನಗಳಲ್ಲಿ ಚರ್ಚುಗಳ ಆವರಣದಲ್ಲಿ ಇವು ನಡೆದಿರುವುದು ದಾಖಲಾಗಿದೆ. ವಾತ್ಸ್ಯಾಯನನ 'ಕಾಮಸೂತ್ರದಲ್ಲಿ' ವರಾಹಮಿಹಿರನ 'ಬೃಹತ್ಸಂಹಿತೆ' ಯಲ್ಲಿ ಕೋಳಿಕಾಳಗದ ಉಲ್ಲೇಖವಿರುವುದೆಂದು ಪಿ. ರಾಮಚಂದ್ರ ಪೇರ್ಳೆ ಅಭಿಪ್ರಾಯಪಡುತ್ತಾರೆ. ಪೊನ್ನನ 'ಶಾಂತಿಪುರಾಣ' ದಲ್ಲಿ (ಸು. ೯೫೦) ಸುಷೇಣೆ, ಮತ್ತು ಕಾಂಚನರೆಂಬ ದಾಸಿಯರು ಬಾಜಿಕಟ್ಟಿ ಘನತುಂಡ ಹಾಗೂ ವಜ್ರತುಂಡರೆಂಬ ಕೋಳಿಗಳನ್ನು ಕಾದಾಡಿಸಿದ ಅಂಶ ಉಕ್ತವಾಗಿದೆ. 'ನವಮೋಹನ ತರಂಗಿಣಿ' ಯಲ್ಲಿ (೧೬೬೪) "ಸೊಕ್ಕಿನ ತಗರು ತಾಂಮ್ರಚೂಡಂಗಳನು ಪಂಥದಿಂ ಕಾದಾಡಿಸುವರು" ಎಂಬ ಮಾತಿದೆ. ಹೋರಾಟಕ್ಕೆಂದೇ ಸಾಕಿದ ಹುಂಜಗಳಿಗೆ ರೋಷ ಬರುವಂತೆ ಮಾಡಿ, ಒಂದರ ಮೇಲೊಂದನ್ನು ಛೂಬಿಟ್ಟು ಕಾದಾಡಿಸಿ, ಅವುಗಳ ಸೋಲು ಗೆಲುವುಗಳನ್ನು ಕಂಡು ನಲಿಯುವ ಕ್ರೀಡೆಗೆ 'ಕೋಳಿ ಅಂಕ' 'ಕೋಳಿ ಜೂಜು' ಅಥವಾ 'ಕೋಳಿ ಪಡೆ' ಎಂದು ಹೆಸರು. ತುಳು ಭಾಷೆಯಲ್ಲಿ ಇದನ್ನೇ 'ಕೋರಿ ಕಟ್ಟ' ಎನ್ನುತ್ತಾರೆ. ಈ ಕ್ರೀಡೆಯಲ್ಲಿ ಕಾದಾಡುವುದು ಹುಂಜಗಳಾದರೂ, ಇಲ್ಲಿ ಕೋಳಿ ಶಬ್ದ ಬಳಕೆಯಾಗಿವುದು ಗಮನೀಯ ಅಂಶ. ಜಾತ್ರೆ ಸಂದರ್ಭಗಳಲ್ಲಿ ಈ ಕ್ರೀಡೆ ಹೆಚ್ಚಾಗಿ ಆಡಲ್ಪಡುತ್ತದೆ.

ಸಾಮಾನ್ಯವಾಗಿ ನಾಲ್ಕರಿಂದ ಎಂಟು ಪೌಂಡು ತೂಗುವ ಎರಡು ವರ್ಷ ತುಂಬಿದ ಹುಂಜಗಳಲ್ಲಿ, ಸಮತೂಕದ ಸಮಬಲದ ಹುಂಜಗಳನ್ನು ಕಾಳಗಕ್ಕೆ ಅಣಿಮಾಡಲಾಗುತ್ತದೆ. ಕಾದಾಡುವ ಹುಂಜಗಳ ಬಲ ಕಾಲಿಗೆ ೨.೫ ಇಂಚು ಉದ್ದದ ಉಕ್ಕಿನ 'ಬಾಳು' ಎಂದು ಕರೆಯಲ್ಪಡುವ ಕಿರುಗತ್ತಿಯನ್ನು ಪಟ್ಟೆ ನೂಲಿನಿಂದ ಕಟ್ಟಿ ಕಾಳಗಕ್ಕೆ ಬಿಡಲಾಗುತ್ತದೆ. ಕಾಳಗಗಳು ಕೆಲವು ಸೆಕೆಂಡುಗಳಿಂದ ಮೊದಲುಗೊಂಡು ನಾಲ್ಕೈದು ನಿಮಿಷಗಳವರೆಗೂ ನಡೆಯಬಹುದು. ಪಂದ್ಯ ಮುಗಿದ ನಂತರ ಸೋತ ಅಥವಾ ಸತ್ತ ಹುಂಜವು ಗೆದ್ದ ಹುಂಜದ ಒಡೆಯನಿಗೆ ಸೇರುತ್ತದೆ. ಎರಡೂ ಸತ್ತರೆ ಪಂದ್ಯ 'ಡ್ರಾ' ಆಗಿ ಹುಂಜಗಳು ಆಯಾಯ ಒಡೆಯನಿಗೆ ಸೇರುತ್ತದೆ. ಗಾಯಗೊಂಡ ಹುಂಜಗಳ ಶುಶ್ರೂಷೆಗೆ ಹಲವೆಡೆ ಪಶುವೈದ್ಯರೂ ಹಾಜರಿರುತ್ತಾರೆ. ಈ ಪಂದ್ಯದ ವೀಕ್ಷಕರಲ್ಲಿ ಮಹಿಳೆಯರು ಸಾಮಾನ್ಯವಾಗಿ ಭಾಗವಹಿಸುವುದಿಲ್ಲ.

ಕೋಳಿ ಅಂಕಕ್ಕೆ ಪ್ರತ್ಯೇಕವಾದ 'ಕುಕ್ಕುಟ ಪಂಚಾಂಗ' ೧೬ ಪುಟಗಳ ಪುಸ್ತಿಕೆಯಾಗಿದ್ದು, ಇದನ್ನು ಮಂಗಳೂರಿನ 'ಶ್ರೀ ನಿತ್ಯಾನಂದ ಗ್ರಂಥಮಾಲೆ' ಪ್ರಕಟಿಸುತ್ತದೆ. ಹಲವಾರು ಮುದ್ರಣಗಳನ್ನು ಕೂಡಿರುವ ಈ ಪುಸ್ತಕದಲ್ಲಿ ಕೋಳಿ ಬಣ್ಣಗಳನ್ನವಲಂಬಿಸಿ ೧೫ ಪ್ರಭೇದಗಳ ವಿವರಗಳನ್ನು ನೀಡಲಾಗಿದೆ.

**ಕಂಬಳ**

ಜಾನಪದ ಆಟಗಳ ಬಗ್ಗೆ ಉಲ್ಲೇಖಗಳು ಸಾಮಾನ್ಯವಾಗಿ ಶಾಸನಗಳಲ್ಲಿ ಕಾಣಸಿಗುವುದಿಲ್ಲ. ಆದರೆ, 'ಕಂಬಳ'ದ ಉಲ್ಲೇಖ ಸುಮಾರು ೧೦ಕ್ಕೂ ಹೆಚ್ಚಿನ ಶಾಸನಗಳಲ್ಲಿ ಕಾಣಸಿಗುತ್ತದೆ. ಇದರ ಪ್ರಥಮ ಉಲ್ಲೇಖ ಕ್ರಿ. ಶ. ೧೨೦೦ರದೆಂದು ತಿಳಿಯಲ್ಪಡುವ ಆಲೂಪರಾಣಿ ಬಿಲ್ಲಮಹಾದೇವಿಯ ಕರ್ಜೆ ಶಾಸನದಲ್ಲಿದೆ. ಅಲ್ಲದೆ ಕ್ರಿ.ಶ.೧೪೦೨ರ ಬಾರಕೂರು ಶಾಸನದಲ್ಲಿ 'ಆ ಕೆಳಗಿನ ಗದ್ದೆಯ ಕಂಬಳ ಗದ್ದೆ' ಎಂಬ ಉಲ್ಲೇಖವಿದೆ. ಇದರಿಂದ ಕಂಬಳಕ್ಕೆ ಸುಮಾರು ೮೦೦ ವರ್ಷಗಳ ಇತಿಹಾಸವಿರುವುದು ಕಂಡುಬರುತ್ತದೆ.

ಕರಾವಳಿ ಕರ್ನಾಟಕದ ಕುಂದಾಪುರದಿಂದ ಕಾಸರಗೋಡಿನವರೆಗಿನ ತುಳುನಾಡಿನಲ್ಲಿ ಅಪಾರ ಜನಪ್ರಿಯತೆ ಹೊಂದಿರುವ ವಿಶಿಷ್ಟ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವದ ಜಾನಪದ ಕ್ರೀಡೆ ಕಂಬಳ. ಈ ಶಬ್ದ ತುಳು ಭಾಷೆಯಲ್ಲಿ ಕಂಬುಲ (ಕಂಪುಲ) ಎಂದಿದ್ದು, ಇದರಲ್ಲಿ 'ಕಂಪ' (ಕೆಸರು) ಹಾಗೂ 'ಪುಲ' (ಪೊಲ, ಗದ್ದೆ) ಪದಗಳು ಅಡಗಿವೆ. ಇದೊಂದು ಕೆಸರುಗದ್ದೆಯಲ್ಲಿ ನಡೆಯುವ ಕೋಣಗಳ ಓಟದ ಸ್ಪರ್ಧೆ.

ತುಳುನಾಡಿನ ಒಂದು ಪ್ರಮುಖ ಧಾರ್ಮಿಕ ಆಚರಣೆಯೂ, ಜನಮನರಂಜನೆಯೂ ಆಗಿರುವ ಈ ಕ್ರೀಡೆಯ ಪೂರ್ವಸಿದ್ಧತೆ ವಿಶಿಷ್ಟವಾಗಿರುತ್ತದೆ. ಕಂಬಳದ ದಿನ ನಿರ್ಧರಿಸಿ, ಪತ್ರಿಕಾ ಪ್ರಕಟಣೆ ನೀಡಲಾಗುತ್ತದೆ. ನಂತರ ಈ ಕ್ರೀಡೆ ನಡೆಯುವ ಗದ್ದೆ, ಓಟದಲ್ಲಿ ಪಾಲ್ಗೊಳ್ಳುವ ಕೋಣಗಳ ನಿರ್ಧಾರವಾಗುತ್ತದೆ. ಹಿರಿಯ ಕೋಣಗಳನ್ನು 'ಮಲ್ಲ' (ಹಿರಿಯ) ಎಂದೂ, ಸಣ್ಣ ಪ್ರಾಯದ ಕೋಣಗಳನ್ನು 'ಎಲ್ಯ' (ಕಿರಿಯ) ಎಂದೂ ವಿಂಗಡಿಸಲಾಗುತ್ತದೆ. ವಿಶೇಷ ಆಹಾರ ನೀಡಿ, ಪೋಷಿಸಿ, ಉತ್ತಮ ರೀತಿಯಲ್ಲಿ ಬೆಳೆಸಿದ ದಷ್ಟಪುಷ್ಟ ಕೋಣಗಳನ್ನು ಮಹೂರ್ತದ ದಿನ ನೀರಿನಲ್ಲಿ ಈಜಾಡಿಸಿ, ಮೈತೊಳೆದು, ಸಿಂಗರಿಸಿ, ಸಂಭ್ರಮದಿಂದ ಮನೆದೇವರ ಪ್ರಾರ್ಥನೆ ಮಾಡಿ ಗದ್ದೆಗೆ ಇಳಿಸಲಾಗುತ್ತದೆ. ಕಂಬಳ ಸ್ಪರ್ಧೆಯಲ್ಲಿ ನಾಲ್ಕು ವಿಧಗಳಿರುತ್ತವೆ. ಎರಡು ಕೋಣಗಳ ಹೆಗ್ಗಲ ಮೇಲೆ ನೊಗ ಇಟ್ಟು, ಅದರ ಮಧ್ಯ ಭಾಗಕ್ಕೆ ಹಗ್ಗ ಕಟ್ಟಿ, ಅದನ್ನು ಒಬ್ಬಾತ ಹಿಡಿದುಕೊಂಡು ಅವುಗಳೊಡನೆ ಓಡುವುದಕ್ಕೆ 'ಬಳ್ಳತವು' ಎನ್ನುತ್ತಾರೆ. ಎರಡನೇ ವಿಧದಲ್ಲಿ ಕೋಣಗಳ ನೊಗಕ್ಕೆ ಉದ್ದವಾದ ಹಲಗೆ ಕಟ್ಟಿ, ಅದರ ಮೇಲೆ ಒಬ್ಬ ವ್ಯಕ್ತಿ ನಿಂತು ಬಲಗೈಲಿ ಚಾಟಿ ಹಿಡಿದು, ಎಡಗೈಲಿ ಕೋಣದ ಬಾಲವನ್ನು ತಿರುಗಿಸುತ್ತ ಓಡಿಸುವ ಸ್ಪರ್ಧೆಗೆ 'ಅಡ್ಡಪಲಾಯಿ' ಎಂದು ಕರೆಯುತ್ತಾರೆ. ಮೂರನೇ ರೀತಿಯ ಓಟದಲ್ಲಿ ಕೋಣಗಳ ಹೆಗಲ ಮೇಲೆ ಉಳುವ ಮಾದರಿಯಲ್ಲಿ ನೇಗಿಲನ್ನು ಕೂಡಿಸಿ, ಓಡಿಸಲಾಗುತ್ತದೆ. ಇದನ್ನು 'ನೇಗಿಲ ಓಟ' ಎನ್ನುತ್ತಾರೆ. ನಾಲ್ಕನೇ ಮಾದರಿ ಓಟದಲ್ಲಿ ಹಲಗೆಯನ್ನು ಓರೆಯಾಗಿ ನೊಗಕ್ಕೆ ಬಿಗಿದು, ಅದರ ಮೇಲೆ ನಿಂತ ವ್ಯಕ್ತಿ ಆಗಾಗ ಹಲಗೆಯನ್ನು ಅದುಮುತ್ತ ಕೆಸರು ನೀರನ್ನು ಚಿಮ್ಮಿಸುತ್ತ ಕೋಣಗಳನ್ನು ಓಡಿಸುತ್ತಾನೆ. ಸುಮಾರು ೨೫ ಅಡಿ ಎತ್ತರದಲ್ಲಿ ಒಂದು ಬಿಳಿ ಬಟ್ಟೆ ಕಟ್ಟಿರುತ್ತಾರೆ. ಇದನ್ನು 'ನಿಶಾನಿ' ಎನ್ನುತ್ತಾರೆ. ಈ ನಿಶಾನಿಗೆ ಕೆಸರು ನೀರು ಚಿಮ್ಮಿಸಿದ ಜೋಡು ಕೋಣಗಳಿಗೆ ಪ್ರಶಸ್ತಿ ಸಲ್ಲುತ್ತದೆ. ಕೋಣಗಳನ್ನು ಓಡಿಸುವವರು ಸ್ಪರ್ಧೆ ಪ್ರಾರಂಭವಾದಾಗಿನಿಂದ ಆವೇಶಭರಿತರಾಗಿರುತ್ತಾರೆ. ಸ್ಪರ್ಧೆ ಮುಗಿಯುವ ವೇಳೆಗೆ ಇವರ ಆವೇಶ ಪರಾಕಾಷ್ಠೆ ಮುಟ್ಟಿ, ಸ್ಪರ್ಧೆಯು ಮುಗಿಯುವ ಸ್ಥಾನವಾದ "ಮಂಚೊಟ್ಟಿ"ಯನ್ನು ತಲುಪಿದ ಮೇಲೂ ಇವರು ಕೋಣಗಳ ಬೆನ್ನ ಮೇಲೆ ಚಾಟಿ ಏಟು ಅಥವಾ ಬಾರುಕೋಲು ಏಟು ಕೊಡುವುದನ್ನು ನಿಲ್ಲಿಸಿರುವುದಿಲ್ಲ. ಗೆಲ್ಲಬಹುದಾದ ಕೋಣಗಳ ಮೇಲೆ ಬಾಜಿ ಸಹ ಕಟ್ಟಲಾಗುತ್ತದೆ. ಬಾಜಿಯ ಹಣ ಹತ್ತು ರೂಪಾಯಿಗಳಿಂದ ಸಾವಿರಾರು ರೂ.ಗಳವರೆಗೂ ಇರುತ್ತದೆ. ಸ್ಪರ್ಧೆಯಲ್ಲಿ ಗೆದ್ದ ಕೋಣಗಳಿಗೆ ವಿಶೇಷ ವೈಭವದಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಇವುಗಳ ಯಜಮಾನರಿಗೆ ಎಳನೀರನ್ನು ನೀಡಿ, ಗೌರವಿಸಿ, ಬಂಗಾರದ ಪದಕ ನೀಡಲಾಗುತ್ತದೆ. ಕಂಬಳ ನಡೆದ ಗದ್ದೆಯಲ್ಲಿ ಅರಿಸಿನ ಬಣ್ಣದ ಹೂ, ನಿಂಬೆಹಣ್ಣುಗಳಿಂದ ಅಲಂಕರಿಸಲ್ಪಟ್ಟ ಕಂಬವನ್ನು ನೆಡುತ್ತಾರೆ. ಕಂಬಳದ ಯಜಮಾನ ಇದನ್ನು ಮುಟ್ಟಿ, 'ಪೊಕರೆ ಪಾಡುನ' ಎಂಬ ವಿಧಿಯನ್ನು ಪೂರೈಸುತ್ತಾನೆ. ಧಾರ್ಮಿಕ ಆಯಾಮವನ್ನೂ ಹೊಂದಿರುವ ಕಂಬಳದ ಮುಕ್ತಾಯ ಬಹಳ ಸ್ವಾರಸ್ಯವಾಗಿದೆ. ಈ ಹಂತದಲ್ಲಿ ಸ್ಪರ್ಧೆ ನಡೆದ ಗದ್ದೆಯಲ್ಲಿ

ಬಹಿಷ್ಠೆಯಾಗಿರುವ ಹೆಂಗಸರು ಹಾಗೂ ಸೂತಕದ ಮನೆಯವರು ಭತ್ತದ ಸಸಿಗಳನ್ನು ನೆಡುತ್ತಾರೆ. ಧಾರ್ಮಿಕ ವಿಧಿಯಾದ ಕುದುರೆ ರೇಸಿನಷ್ಟೇ ಪ್ರಮುಖವಾಗಿ ಕಂಬಳ ಈಗ ವಾಣಿಜ್ಯೀಕರಣಗೊಂಡಿದೆ.

## ಚೆನ್ನೆಮಣೆ

ಹೊರಾಂಗಣ ಕ್ರೀಡೆಗಳಾದ ಕಂಬಳ, ಕಬಡ್ಡಿ, ಕೋಳಿ–ಅಂಕ ಮುಂತಾದವುಗಳೊಡನೆ ಒಳಾಂಗಣ ಕ್ರೀಡೆಗಳಾದ ಚೆನ್ನೆಮಣೆ ಚದುರಂಗ, ಕವಡೆ ಹಾಗೂ ಗಜ್ಜುಗದಾಟಗಳಿಗೆ ಈ ಪ್ರಾಂತದಲ್ಲಿ ಜನಪ್ರಿಯತೆ ಗಳಿಸಿವೆ. ಚೆನ್ನೆಮಣೆ ಒಂದು ಪ್ರಾಚೀನ ಸಾಂಪ್ರದಾಯಿಕ ಆಟವಾಗಿದ್ದು, ಹಲವಾರು ಪಾಟ್ದನಗಳಲ್ಲಿ ಇದರ ಉಲ್ಲೇಖವಿದೆ. ವಯಸ್ಸು, ಲಿಂಗ ಭೇದವಿಲ್ಲದೆ ಇದನ್ನು ಎಲ್ಲರೂ ಆಡುತ್ತಾರೆ. ಪ್ರಪಂಚದ ತೀರ ಪ್ರಾಚೀನ ಕ್ರೀಡೆಗಳಲ್ಲಿ ಚೆನ್ನೆಮಣೆ ಸೇರಿತ್ತೆಂದೂ, ಆಫ್ರಿಕಾ ದೇಶದಲ್ಲಿ ಈ ಆಟ ಸುಮಾರು ೩,೦೦೦ ವರ್ಷಗಳ ಇತಿಹಾಸ ಹೊಂದಿದೆ ಎಂದೂ ಸಮಾಜಶಾಸ್ತ್ರಜ್ಞ ಡಾ. ಪೀಟರ್ ಜೆ. ಕ್ಲಾಸ್ ಅಭಿಪ್ರಾಯಪಡುತ್ತಾರೆ. ಕರ್ನಾಟಕದಲ್ಲಿ ಗುಡ್ಡಗಾಡು ಜನ ವಾಸಿಸುತ್ತಿದ್ದ ಬಂಡೆಗಳಲ್ಲಿ ಚೆನ್ನೆಮಣೆಯ ಗುಳಿಗಳು ಕೊರೆಯಲ್ಪಟ್ಟಿದ್ದುದರ ಬಗ್ಗೆ ಮಾಹಿತಿ ಇದೆ. ೧೨x೧೮ ಇಂಚು ಉದ್ದವಿರುವ ಎರಡು ಸಾಲುಗಳಿರುವ, ೧೪ ಗುಳಿಗಳನ್ನು ಹೊಂದಿರುವ ಮರ, ಲೋಹ ಅಥವಾ ಮಾರ್ಬಲ್ ಕಲ್ಲಿನಿಂದ ಮಾಡಲ್ಪಟ್ಟ, ಮಡಚಿ ಇಡಬಹುದಾದ ಚೆನ್ನೆಮಣೆಯಲ್ಲಿ ಹುಣಸೆಬೀಜ ಅಥವಾ ಗುಲಗಂಜಿಗಳನ್ನು ಹಾಕಿ ಇಬ್ಬರು ಹಲವಾರು ರೀತಿಯ ಆಟಗಳನ್ನಾಡುತ್ತಾರೆ. ಜನರ ಬದುಕಿನೊಡನೆ ಬೆಸೆದು ಹೋಗಿರುವ ಚೆನ್ನೆಮಣೆಯಾಟ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳೆಂದು ಆಡಲ್ಪಡುತ್ತದೆ. ಸಾಮಾನ್ಯವಾಗಿ ಚೆನ್ನೆಮಣೆಯು ಪೂಜ್ಯವಾಗಿ ಗೌರವಿಸಲ್ಪಡುತ್ತದೆ. ಇದನ್ನು ಜನ ಕಾಲಿನಿಂದ ತುಳಿಯುವುದಿಲ್ಲ. ಪ್ರಸ್ತುತ ಮರದಿಂದ ಮಾಡಲ್ಪಟ್ಟ ಚೆನ್ನೆಮಣೆ ಜನಪ್ರಿಯವಾಗಿದೆ.

## ಕುಟ್ಟಿದೊಣ್ಣೆ

ಹಳೆ ಮೈಸೂರು ಪ್ರಾಂತದ 'ಗಿಲ್ಲಿ–ದಾಂಡು' ಹೋಲುವ ಈ ಪ್ರದೇಶದ ಪ್ರಮುಖ ಸ್ಥಳೀಯ ಕ್ರೀಡೆ 'ಕುಟ್ಟಿದೊಣ್ಣೆ' ಇಂದಿಗೂ ಜನಾನುರಾಗಿಯಾಗಿದೆ. ಜಾಗತಿಕ ಪ್ರಪಂಚದ ಕ್ರಿಕೆಟ್ ಆಟಕ್ಕೆ ಹತ್ತಿರದ ಸಾಮ್ಯವಿರುವ ಈ ಆಟದಲ್ಲಿ 'ಕುಟ್ಟಿ' (ಸಣ್ಣ ಕೋಲು) ಹಾಗೂ 'ದೊಣ್ಣೆ' (ದೊಡ್ಡಕೋಲು)ಗಳನ್ನು ಬಳಸಲಾಗುತ್ತದೆ. ಕ್ರಿಕೆಟ್‌ನಂತೆಯೇ ಈ ಆಟದಲ್ಲಿಯೂ ಎರಡು ತಂಡಗಳಿರುತ್ತವೆ. ಓಟವೂ, ಅಂಕಗಳೂ, ದಾಂಡಿಗನ ಹೊಡೆತ ಅಂಕಗಳಿಸುವಲ್ಲಿ ಅಡ್ಡಿ, ಎಲ್ಲವೂ ಉಂಟು. ಆಟದಲ್ಲಿ 'ಔಟ್' ಆಗುವುದನ್ನು 'ಬಾದ್' ಆಗುವುದು ಎನ್ನುತ್ತಾರೆ. ಮೈದಾನದ ಮಧ್ಯದ ಕೇಂದ್ರಬಿಂದುವಾದ 'ಗುಳಿ' ಯಿಂದ 'ಕುಟ್ಟಿ'ಯನ್ನು 'ದೊಣ್ಣೆ'ಯಿಂದ ವಿರೋಧಿಗಳೆಡೆ ಹೊಡೆಯುತ್ತಾನೆ. ಎದುರು ಗುಂಪಿನವರು ಕುಟ್ಟಿಯನ್ನು 'ಕ್ಯಾಚ್' ಮಾಡಿ ದೂರದಿಂದ ಬಿಸಾಡಿ 'ಗುಳಿ'ಯ ಎರಡು ಗೇಣು ಪರಿಧಿಯೊಳಗೆ ಬೀಳುವಂತೆ ಮಾಡಿದರೆ, ದೊಣ್ಣೆ ಹಿಡಿದವ 'ಬಾದ್' ಆಗುತ್ತಾನೆ. 'ಬಾದ್' ಆಗುವುದನ್ನು ತಪ್ಪಿಸಿಕೊಳ್ಳಲು ದೊಣ್ಣೆ ಬೀಸಿದವ ತನ್ನ ದೊಣ್ಣೆಯಿಂದ ಮಾತ್ರ ಕುಟ್ಟಿಯನ್ನು ತಡೆಯಬಹುದು. ಕೈಕಾಲುಗಳಿಂದ ಅದನ್ನು ತಡೆಯುವಂತಿಲ್ಲ. ಗೆದ್ದ ತಂಡ ಸೋತ ತಂಡಕ್ಕೆ ಶಿಕ್ಷೆ ನೀಡುವ ಪದ್ಧತಿ ಈ ಆಟದಲ್ಲಿದೆ. ಸೋತ ತಂಡವು ದೂರಕ್ಕೆ ಹೊಡೆಯಲ್ಪಟ್ಟ ಕುಟ್ಟಿಯನ್ನು ಒಂದೇ ಉಸಿರಿನಲ್ಲಿ "ಏಕಿಟ್ಟಾ, ಸತ್ತಿಮೀರಾ, ನಗ್‌ರಾಮುಟ್ಟಿ, ನಲ್ಲಾಗೋಡಾ, ಐದಾಗೋಣಿ, ಆರೆಂಕಿ, ಚುಕ್ಕಿ" ಎಂಬ ಹಾಡನ್ನು ಹಾಡುತ್ತಾ ಗುಳಿಯ ಕೇಂದ್ರದಲ್ಲಿಡಬೇಕು. ಅರ್ಧದಲ್ಲಿ ಉಸಿರು ಬಿಟ್ಟರೆ, ಅಥವಾ ಕೇಂದ್ರದಲ್ಲಿಡಲು ತಪ್ಪಿದರೆ, ಕುಟ್ಟಿಯನ್ನು ಪುನಃ ಹೊಡೆಯಲಾಗುತ್ತದೆ ಮತ್ತು ಸೋತ ತಂಡ ಪುನಃ ಓಡಬೇಕಾಗುತ್ತದೆ.

## ಕೈ ಮಡಕೆ

ಹಳೆ ಮೈಸೂರು ಕಡೆಯ 'ಕೈ ಮಡಕೆ ಆಟ'ವನ್ನು ಹೋಲುವ ಚಿಪುಳು ಚಿಪುಳು ಆಟ ಮಕ್ಕಳ ಪ್ರಮುಖ ಆಟಗಳಲ್ಲೊಂದಾಗಿದೆ. ಅಂಗೈಯನ್ನು ನೆಲಕ್ಕೆ ಕವುಚಿ ಊರಿ, ಒಂದೊಂದೇ ಬೆರಳು ಮುಟ್ಟಿ

ಎಣಿಕೆ ಮಾಡುವಾಗ ಹೇಳುವ ಈ ಮುಂದಿನ ಪದಗಳು ರಂಜನೀಯ: "ಚಿಪುಳು ಚಿಪುಳು, ಪೆತ್ತಕಂಜಿ. ಬಾಳೆಕಂಬ, ಬೆಲ್ಲದೋಸೆ, ಬಜಿಲ್ ದೋಸೆ, ಗುಳಿಯಪ್ಪ, ಗುರುಗುಂಜಿ, ಗುಡುಗುಡು ಗುಮ್ಮ, ದೋಸೆ ಮಾಸುವೆ, ಚಾಂ, ಚೂಂ, ಚ್ಯೊ, ಚ್ಯೊ".

## ಗೋಪುರ ಆಟ

'ಗೋಪುರ ಆಟ'ದಲ್ಲಿ ಹಲವಾರು ಮಕ್ಕಳು ಎದುರು ಬದರಾಗಿ ಚಕ್ರಾಕಾರದಲ್ಲಿ ಕುಳಿತು, ತಮ್ಮ ಮುಷ್ಟಿಗಳನ್ನು ಪೇರಿಸಿ ಒಂದೇ ಮುಷ್ಟಿಹಿಡಿದವ ಒಬ್ಬ ಗೋಪುರ ಮಾಡಿ, ಮೇಲಿಂದ ಒಂದು ಕಲ್ಲುಹಾಕುತ್ತಾನೆ. ಆ ಕಲ್ಲನ್ನು ಯಾವುದೋ ಮುಷ್ಟಿ ಹಿಡಿಯುತ್ತದೆ. ಯಾರ ಮುಷ್ಟಿಯಲ್ಲಿ ಕಲ್ಲು ಇದೆ ಎಂಬುದನ್ನು ಪತ್ತೆ ಮಾಡಿದವನ ಮುಷ್ಟಿಗಳು ಹೊರಕ್ಕೆ ಬರುತ್ತವೆ. ಇದೇ ರೀತಿ 'ದೋಸೆ ಆಟ', 'ಮದುವೆ ಆಟ', 'ಮನೆಯಾಟ', 'ಅಡುಗೆ ಆಟ' ಮುಂತಾದ ಮಕ್ಕಳ ಒಳಾಂಗಣ ಕ್ರೀಡೆಗಳು ಸಾಮಾನ್ಯವಾಗಿ ಎಲ್ಲಾ ಮನೆಗಳ ಮಕ್ಕಳೂ ಅರಿತಿರುವ ಕ್ರೀಡೆಗಳ. ಹಳೆ ಮೈಸೂರು ಕಡೆಯ ಕಣ್ಣಾಮುಚ್ಚಾಲೆ ಆಟಕ್ಕೆ ಹಾಡಲ್ಪಡುವ "ಕಣ್ಣಾಮುಚ್ಚೆ ಕಾಡೇಗೂಡೇ---" ದಕ್ಷಿಣ ಕನ್ನಡ ಜಿಲ್ಲೆಯಲ್ಲಿ "ಕಣ್ಣಾಮುಚ್ಚೆ ಕಾಟೂರಮ್ಮೆ, ಬೊಳ್ಳಿಮೂಡೆ ಬೊಳ್ಳೀರಮ್ಮೆ, ತಪ್ಪುಗುಪೋತ, ಜೋಕುಲು ಮಾತ ನಾಡೊಂದು ಬಲ್ಲೆ, ಬುಡ್ಯೇ ಬುಡ್ಯೇ---" ಎಂದು ಎಲ್ಲರ ಒಪ್ಪಿಗೆಯನ್ನು 'ಕೂ' ಎಂಬ ಕೂಗಿನ ಮೂಲಕ ಪಡೆದು, ಹುಡುಕಬೇಕಾದವರ ಕಣ್ಣು ಬಿಡಲಾಗುವುದು.

## ಕಕ್ಕೆ ಗಿಳಿ

ಬಹುಶಃ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾದ ಒಳಾಂಗಣ ಕ್ರೀಡೆ "ಕಕ್ಕೆ ಗಿಳಿ" ಆಟ. ವರ್ತುಲಾಕಾರದಲ್ಲಿ ನಿಂತ ಹೆಣ್ಣುಮಕ್ಕಳು (ಹಲವೆಡೆ ಗಂಡು ಮಕ್ಕಳೂ) ತಮ್ಮ ತೋರು ಬೆರಳು ಹಾಗೂ ಹೆಬ್ಬೆರಳನ್ನು ಉಂಗುರಾಕಾರ ಮಾಡಿ ಬಾಯಿಯಿಂದ ಒಂದು ಅಡಿ ದೂರ ಹಿಡಿದು ಅದರೊಳಕ್ಕೆ ಎಂಜಲು ಉಗುಳುವರು. ಉಗುಳು ಸಿದಾ ನೆಲಕ್ಕೆ ಬಿದ್ದರೆ, ಆಕೆ ಗಿಳಿ. ಬೆರಳಿಗೆ ತಾಕಿದರೆ, 'ಕಕ್ಕೆ' (ಕಾಗೆ) ಇದರ ನಂತರ ಕಕ್ಕೆಗಳು ಒಂದೆಡೆ, ಗಿಳಿಗಳು ಒಂದೆಡೆ ಸೇರುತ್ತಾರೆ. ಗಿಳಿಗಳನ್ನು ಕಕ್ಕೆಗಳು ಅಟ್ಟಿಸಿಕೊಂಡು ಹೋಗಿ ಹಿಡಿಯಬೇಕು. ಓಡದ ಗಿಳಿಗಳನ್ನು ಕಕ್ಕೆಗಳು "ಸೋತು ಸೋತು ಸುಕ್ಕುಂಡೆ, ಕೂತು ಕೂತು ಕುಕ್ಕುಂಡೆ" ಎಂದು ಹಂಗಿಸುತ್ತಾರೆ. ಹದಿವಯಸ್ಸಿನ ಪಡ್ಡೆ ಹುಡುಗರು ಆಡುವ ಆಟಗಳಲ್ಲಿ ಪಲ್ಲಿ, ಗೋಳಿಯಾಟ, ಕುಟ್ಟಿದೊಣ್ಣೆ, ಬುಗುರಿ ಹಾಗೂ ತಪ್ಪಂಗಾಯಿ ಜನಪ್ರಿಯವಾದವು. ಉಡುಪಿ ಜಿಲ್ಲೆಯ ಹೆಣ್ಣು ಮಕ್ಕಳು ಗಜ್ಜುಗದ ಕಾಯಿಗಳಿಂದ 'ಪೊಕ್ಕು' ಎಂಬ ಆಟವಾಡುತ್ತಾರೆ. ಹಲವೆಡೆ ಇದನ್ನು 'ಕಲ್ಲಾಟ' 'ಅಪ್ಪದ ಆಟ' ವೆಂದೂ ಕರೆಯಲಾಗುತ್ತದೆ.

## ತಾಲೀಮು

ದೇಹಬಲ ಸಾಹಸ ಹಾಗೂ ಚಮತ್ಕಾರಗಳ ಸಂಗಮವಾದ ತಾಲೀಮು ಒಂದು ರೋಮಾಂಚಕಾರಿ ಗ್ರಾಮೀಣ ಕ್ರೀಡೆ ಇದನ್ನು ಬೈಕಾಡಿಯ ಯೂಸುಫ್ ಸಾಹೇಬರು ಶಾಸ್ತ್ರೀಯವಾಗಿ ಕಲಿತಿದ್ದು, ಉಪ್ಪೂರಿನ ಕೃಷಿಕ ಜನಾರ್ದನ ಸೇರ್ವೆಗಾರರಿಗೆ ಕಲಿಸಿದ್ದಾರೆ. ತಾಲೀಮು ಮಾಸ್ತರೆಂದೇ ಜನಪ್ರಿಯರಾದ ಜನಾರ್ದನ ಅವರು ಇದನ್ನು ನೂರಾರು ಮಂದಿಗೆ ಕಲಿಸಿದ್ದಾರೆ. ಅವರ ಮಕ್ಕಳಾದ ದಿನಕರ, ಸುಧಾಕರ ಹಾಗೂ ಜಯಕರ ಇವರು ತಂದೆಯ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಗರಡಿಮನೆ ಹಾಗೂ ವ್ಯಾಯಾಮ ಶಾಲೆಗಳಲ್ಲಿ ಈ ಕ್ರೀಡೆ ನಡೆಯುತ್ತದೆ.

## ಕುಸ್ತಿ

ಜಿಲ್ಲೆಯ ಮತ್ತೊಂದು ಜನಪ್ರಿಯ ವ್ಯಾಯಾಮ ಕ್ರೀಡೆ. ಜಿಲ್ಲೆಯಲ್ಲಿ ಈ ಕ್ರೀಡೆಯಲ್ಲಿ ಜನಪ್ರಿಯಗೊಳಿಸಿದವರಲ್ಲಿ ಪ್ರಮುಖರು ಪಲಿಮಾರು ಸಂಕಪ್ಪ ಸುವರ್ಣ ಕುದ್ರೋಳಿಯಲ್ಲಿ 'ರಾಮಾಂಜನೇಯ ವ್ಯಾಯಾಮ ಶಾಲೆ'ಯೇ ಅಲ್ಲದೆ ಮತ್ತೆರಡು ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವ ಮೂಲಕ ಈ ಕ್ರೀಡೆಯ ಜನಪ್ರಿಯತೆಗೆ ಕಾರಣರಾಗಿದ್ದಾರೆ. ಉಳ್ಳಾಲದ ಆನಂದಪ್ಪ ಕಾಂಚನ ಅಗ್ರಗಣ್ಯ ಕುಸ್ತಿಪಟು

ಇವರು ಹಲವಾರು ವ್ಯಾಯಾಮ ಶಾಲೆಗಳನ್ನು ಸ್ಥಾಪಿಸಿದ್ದಾರೆ. ಕುಸ್ತಿ ಕಲೆಯನ್ನು ಪ್ರೋತ್ಸಾಹಿಸುವ ಸಲುವಾಗಿಯೇ "ದಕ್ಷಿಣ ಕನ್ನಡ ಜಿಲ್ಲಾ ಕುಸ್ತಿ ಸಂಘ" ಅಸ್ತಿತ್ವಗೊಂಡಿತು. ವರ್ಷಂಪ್ರತಿ ಇದು ಕುಸ್ತಿ ಪಂದ್ಯಗಳನ್ನೇರ್ಪಡಿಸಿ, ವಿಜೇತರಿಗೆ 'ತುಳುನಾಡು ಕುಮಾರ್' 'ತುಳುನಾಡು ಕೇಸರಿ' ಮುಂತಾದ ಪ್ರಶಸ್ತಿಗಳನ್ನು ನೀಡುತ್ತದೆ.

**ಪುಟ್‌ಬಾಲ್**

ಕಾಲ್ಚೆಂಡಾಟ ಕರಾವಳಿ ಜಿಲ್ಲೆಗಳ ಹಳೆಯ ರಾಷ್ಟ್ರೀಯ ಕ್ರೀಡೆ, ರಾಜ್ಯ ಕರಾವಳಿ ಮತ್ತು ಮುಂಬಯಿ ಪ್ರಾಂತ್ಯಗಳ ಜನರ ಪರಿಚಯ ೧೫೦ಕ್ಕೂ ವರ್ಷಗಳಿಗೆ ಮಿಗಿಲಾಗಿ ಜನಜೀವನದಲ್ಲಿ ಸಮ್ಮಿಳಿತಲಾಗಿದೆ. ಕ್ರೀಡಾರಂಗದಲ್ಲಂತೂ ಮುಂಬಯಿಯ ಪ್ರಭಾವ ಹಾಸು ಹೊಕ್ಕಾಗಿದೆ. ಮುಂಬಯಿಯಲ್ಲಿ ೧೯೨೫ರ ಸುಮಾರಿನಲ್ಲಿ ಹಲವು ದಕ್ಷಿಣ ಕನ್ನಡ ಯುವಕರು "ಎಸ್.ಕೆ. ಪುಟ್‌ಬಾಲ್ ಅಸೋಸಿಯೇಷನ್" ಮಹಾರಾಷ್ಟ್ರದಲ್ಲಿ ಕರ್ನಾಟಕದ ಕ್ರೀಡಾಜ್ಯೋತಿ ಬೆಳಗಿಸಿದ ಪ್ರಥಮ ಸಂಸ್ಥೆ ಎನ್ನಬಹುದು. ಮುಂಬಯಿಯಲ್ಲಿ ನಡೆದ ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಪಾಲ್ಗೊಂಡ ಈ ಸಂಸ್ಥೆ ದೇಶಕ್ಕೆ ಹಲವಾರು ಖ್ಯಾತನಾಮರಾದ ಕ್ರೀಡಾಪಟುಗಳನ್ನು ನೀಡಿದೆ. ಪಶ್ಚಿಮ ಭಾರತದ ಚೆಂಡಾಟಗಳ ಅಧಿಕೃತ ಸಂಸ್ಥೆಯಾದ 'ವೆಸ್ಟರ್ನ್ ಇಂಡಿಯಾ ಪುಟ್‌ಬಾಲ್ ಅಸೋಸಿಯೇಷನ್' (ಡಬ್ಲ್ಯು.ಐ.ಎಫ್.ಎ.) ಪ್ರತಿಸ್ಪರ್ಧಿಯಾಗಿ 'ದೇವ್ಜೀಸ್ ಕೆನರಾ' ಹುಟ್ಟಿಕೊಂಡರೂ ದಕ್ಷಿಣ ಕನ್ನಡ ಕ್ರೀಡಾ ಚಟುವಟಿಕೆಗಳ ಪ್ರಾತಿನಿಧಿಕ ಸಂಸ್ಥೆಯಾಗಿ 'ಎಸ್.ಕೆ.ಎಫ್.ಎ.' ಉಳಿದುಕೊಂಡು, ಆಟಗಾರರೆಲ್ಲ ಇದರ ಸೂತ್ರಕ್ಕೇ ಕಟ್ಟುಬಿದ್ದ ಬಳಿಕ ದೇವ್ಜೀಸ್ ಕೆನರಾ ಪಂಗಡ ಇಲ್ಲವಾಯಿತು. ಟಾಟಾ ಸಂಸ್ಥೆಯ ಉದ್ಯೋಗಿಯಾಗಿದ್ದ ಡಿ. ಎಂ. ಮೆಂಡನ್ ಚೆಂಡಾಟದ ಭೀಷ್ಮ ಎಂದೇ ಮುಂಬಯಿಯ ಕ್ರೀಡಾ ವಲಯಗಳಲ್ಲಿ ಪ್ರಸಿದ್ಧರು. ಲಂಡನ್‌ನಲ್ಲಿ ಈ ಕ್ರೀಡೆಯ ಪರಿಣತಿ ಪಡೆದ ಇವರು ೧೧೦ ಗಜ ದೂರಕ್ಕೆ ಚೆಂಡನ್ನು ಒದೆಯುತ್ತಿದ್ದುದು ಒಂದು ಸಾಧನೆಯಾಗಿದ್ದಿತು. ಇದನ್ನು 'ಮೆಂಡನ್‌ಕಿಕ್' ಎಂದೇ ಇಂದಿಗೂ ನೆನೆಯುತ್ತಾರೆ. ಮೆಂಡನ್‌ರೊಂದಿಗೇ ಪಳಗಿದ ಮತ್ತೊಬ್ಬ ಖ್ಯಾತನಾಮರೆಂದರೆ, ಕೆ.ಜೆ. ಸಾಲಿಯಾನ್ ತಮ್ಮ ತಲೆಯಿಂದ ಚೆಂಡನ್ನು ಬೇಕೆಂದೆಡೆ ಹಾರಿಸುವುದರಲ್ಲಿ ನಿಷ್ಣಾತರಾದ ಇವರ ಪೀಳಿಗೆಯ ಇತರೆ ಜನಪ್ರಿಯ ಚೆಂಡಾಟಗಾರರೆಂದರೆ, ಡೀಯ ಸುವರ್ಣ, ಎಂ. ಆರ್. ಶ್ರೀಮಾನ್, ಎನ್. ಕೆ. ಉಚ್ಚಿಲ್ ಅಂತಾರಾಷ್ಟ್ರೀಯ ಖ್ಯಾತಿಯ ರೆಫರಿ ಸಹ ಆಗಿದ್ದರು. ವರದರಾಜ ಆದ್ಯ ಮತ್ತು ಶಿವರಾಮ ಡಿ. ಕಾಂಚನ್‌ರ ಪರಿಶ್ರಮದಿಂದ ಸ್ವಾತಂತ್ರ್ಯಾನಂತರ ಎಸ್.ಎಫ್.ಎಫ್.ಎ. ಹೆಸರು ಕರ್ನಾಟಕ ಸ್ಪೋರ್ಟಿಂಗ್ ಅಸೋಸಿಯೇಷನ್ ಎಂದು ಪುನರ್ನಾಮಕರಣ ಗೊಂಡು, ಎಲ್ಲಾ ಕನ್ನಡಿಗರಿಗೂ ಸದಸ್ಯತ್ವ ನೀಡಿತು. ಇದೇ ವರ್ಷ ಭಾರತ ಮೊದಲ ಬಾರಿಗೆ ಒಲಿಂಪಿಕ್ಸ್ ಕ್ರೀಡಾಕೂಟದ ಚೆಂಡಾಟದಲ್ಲಿ ಭಾಗವಹಿಸಿತು.

**ಬ್ಯಾಡ್ಮಿಟನ್**

ಜಿಲ್ಲೆಯ ಹೆಮ್ಮೆಯ ಪುತ್ರ ವಿಶ್ವವಿಖ್ಯಾತ ಬ್ಯಾಡ್ಮಿಟನ್‌ಪಟು ಪ್ರಕಾಶ್ ಪಡುಕೋಣೆಯವರು ಉಡುಪಿ ತಾಲೂಕಿನ ಪಡುಕೋಣೆಗೆ ಸೇರಿದವರು. ೧೯೭೦ರಲ್ಲಿ ರಾಷ್ಟ್ರೀಯ ಜ್ಯೂನಿಯರ್ ಚಾಂಪಿಯನ್‌ಷಿಪ್ ಪಡೆದು, ಮರುವರ್ಷವೇ ಸೀನಿಯರ್ ಚಾಂಪಿಯನ್‌ಷಿಪ್ ಅನ್ನೂ ತಮ್ಮದಾಗಿಸಿಕೊಂಡರು. ಮುಂದಿನ ಒಂಬತ್ತು ವರ್ಷ ರಾಷ್ಟ್ರೀಯ ಬ್ಯಾಡ್ಮಿಟನ್ ರಂಗದಲ್ಲಿ ಸೀನಿಯರ್ ಚಾಂಪಿಯನ್ ಆಗಿ ಮೆರೆದ ಇವರು ಯುವಜನಾಂಗಕ್ಕೆ ಒಂದು ಆದರ್ಶ. ಇವರ ವಿಜಯಗಳಿಗೆ ಪ್ರಶಸ್ತಿಗಳ ಸರಮಾಲೆ ದೊರೆತಿದೆ. ೧೯೭೮ರಲ್ಲಿ ಕೆನಡಾ ಕಾಮನ್‌ವೆಲ್ತ್ ಪಂದ್ಯಾವಳಿಯಲ್ಲಿ ಸ್ವರ್ಣ ಪದಕ, ೧೯೮೦ರಲ್ಲಿ ಡೆನಿಸ್‌ನಲ್ಲಿ ನಡೆದ ಓಪನ್ ಬ್ಯಾಡ್ಮಿಟನ್‌ನಲ್ಲಿ ಇಂಗ್ಲೆಂಡ್ ಚಾಂಪಿಯನ್‌ಷಿಪ್, ೧೯೮೧ರಲ್ಲಿ ಮಲೇಷಿಯಾದಲ್ಲಿ ಜರುಗಿದ ಆಲ್ಫಾವರ್ಡ್ ಕಪ್ ಜಯ, ೧೯೮೨ರಲ್ಲಿ ಹಾಂಕಾಂಗ್‌ನಲ್ಲಿ ನಡೆದ ಓಪನ್ ಬ್ಯಾಡ್ಮಿಟನ್ ವಿಜಯ–ಇವು ಇವರ ಪ್ರಮುಖ ಪ್ರಶಸ್ತಿಗಳು. ಅಲ್ಲದೇ ಇವರು ೧೯೭೨ರಲ್ಲಿ ಅರ್ಜುನ್ ಪ್ರಶಸ್ತಿ ಹಾಗೂ ೧೯೮೨ರಲ್ಲಿ ಪದ್ಮಶ್ರೀ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

**ಮ್ಯಾರಥಾನ್ ಓಟ**

ಜಿಲ್ಲೆಯ ಬಿಜೈನ್ ಸಿಲ್ವೆಸ್ಟರ್ ಪಿರೇರಾ (೧೯೫೯) ಅಂತಾರಾಷ್ಟ್ರೀಯ ಮಟ್ಟದ ಮ್ಯಾರಥಾನ್ ಓಟಗಾರ. ಉದ್ಯೋಗಾರ್ಥವಾಗಿ ಓಮೆನ್‌ನಲ್ಲಿ ನೆಲೆಸಿ, ಲಂಡನ್ನಿನಲ್ಲಿ ನಡೆದ ವಿಶ್ವ ಮ್ಯಾರಥಾನ್ ಸ್ಪರ್ಧೆಯಲ್ಲಿ

ಆ ದೇಶದ ಪರವಾಗಿ ಪಾಲ್ಗೊಂಡಿರುತ್ತಾರೆ. ಇವರಿಗೆ ತರಬೇತಿ ನೀಡಿದ ಪುರಂದರ ಕದ್ರಿ ಜಿಲ್ಲೆಯ ಮತ್ತೊಬ್ಬ ಉಲ್ಲೇಖನೀಯ ಮ್ಯಾರಥಾನ್ ಪಟು.

## ಯೋಗಾಸನ

ಪ್ರಾಚೀನ ಭಾರತೀಯ ಕಲೆಯಾದ ಯೋಗಾಸನ ಇತ್ತೀಚಿನ ದಶಕಗಳಲ್ಲಿ 'ವಿಶ್ವದಾದ್ಯಂತ ಜನಪ್ರಿಯತೆ, ಕ್ರೀಡಾ ಮೌಲ್ಯಗಳಿಸಿರುವ ಕಲೆಯಾಗಿದೆ. ಕಾರ್ಕಳದ ಅತ್ತೂರು ನಾಗೇಂದ್ರ ಕಾಮತರು ವಿಶ್ವಮಟ್ಟದ ಯೋಗಾಸನ ಪಟು, ಪ್ರಶಸ್ತಿ ವಿಜೇತ ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಗಳಿಗೆಂದೇ ಇವರು ವಿಶಿಷ್ಟವಿನ್ಯಾಸದ ೨೦ ಆಸನಗಳನ್ನು ಸ್ವತಂತ್ರವಾಗಿ ಶೋಧಿಸಿದ್ದಾರೆ.

## ರೋಲರ್ ಸ್ಕೇಟಿಂಗ್

ಬ್ರಹ್ಮಾವರದ ಚಂದ್ರಕಾಂತರಾವ್ ರೋಲರ್ ಸ್ಕೇಟಿಂಗ್ ಮಾಡಿಕೊಂಡು ೧೬ ದಿನಗಳ ಕಾಲ ೯೯೨ ಕಿ.ಮೀ. ಪ್ರಯಾಣ ಮಾಡಿ ಬ್ರಹ್ಮಾವರದಿಂದ ಬ್ರಹ್ಮಾವರಕ್ಕೇ ವಾಪಸ್ಸು ಬಂದ ಸಾಧನೆ ಮಾಡಿರುತ್ತಾರೆ.

## ಕರಾವಳಿ ಆಟೋಮೋಟಿವ್ ಸ್ಪೋರ್ಟ್ಸ್ ಕ್ಲಬ್

ಸಾಹಸ ಜಲ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಈ ಸಂಸ್ಥೆ ಎರಡು ಹಾಗೂ ನಾಲ್ಕು ಚಕ್ರದ ವಾಹನಗಳ ರ್‍ಯಾಲಿಗಳನ್ನು ಏರ್ಪಡಿಸುತ್ತದೆ. ಸಮುದ್ರ ತೀರದಲ್ಲಿ ದ್ವಿಚಕ್ರ ವಾಹನಗಳ ಸರ್ಫ್ ಟ್ರ್ಯಾಕ್ ರ್‍ಯಾಲಿಗಳನ್ನು ನಡೆಸುತ್ತದೆ. ಸಮುದ್ರ ಕಿನಾರೆಯ ಮರಳಿನ ಮೇಲೆ ಅಪ್ಪಳಿಸುವ ಅಲೆಗಳಿಗೆ ಸಿಕ್ಕಿ ಸಾಗುವ ಈ ಕ್ರೀಡೆ ನಿಜಕ್ಕೂ ಸಾಹಸಮಯವಾದುದು. ರಾಷ್ಟ್ರದ ರ್‍ಯಾಲಿಗಳ ಗುಂಪಿಗೆ ಈ ಕ್ರೀಡೆ ಜಿಲ್ಲೆಯ ಕೊಡುಗೆಯಾಗಿದೆ.

## ಗ್ಲೈಡಿಂಗ್

ಮಂಗಳೂರಿನ ನೆವಿಲೆ ರಾಡ್ರಿಗ್ಸ್ ಅವರು ೨.೫ ಅಶ್ವಶಕ್ತಿಯ ೬೦ ಕೆ.ಜಿ. ತೂಕ ಹೊರಬಲ್ಲ ಸಿಂಗಲ್ ಫ್ಲೀಚರ್ ಹ್ಯಾಂಗ್ ಗ್ಲೈಡ್‌ನಲ್ಲಿ ಮಂಗಳೂರಿನಿಂದ ಮಣಿಪಾಲಕ್ಕೆ ೬೨ ಕಿ.ಮೀ. ದೂರವನ್ನು ೧½ ಗಂಟೆಗಳಲ್ಲಿ ಗ್ಲೈಡಿಂಗ್ ಮಾಡಿ, ದಾಖಲೆ ನಿರ್ಮಿಸಿದ್ದಾರೆ.

## ಕ್ರೀಡಾಂಗಣಗಳು

ಕ್ರೀಡೆಗಳ ಉತ್ತೇಜನಕ್ಕಾಗಿ ಸರಕಾರ ರಾಜ್ಯದ ಎಲ್ಲೆಡೆ ಉತ್ತಮ ಸೌಲಭ್ಯಗಳ ಕ್ರೀಡಾಂಗಣಗಳನ್ನು ನಿರ್ಮಿಸಿ ಅವುಗಳ ಆಡಳಿತ ಹಾಗೂ ನಿರ್ವಹಣೆಯನ್ನು ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಗೆ ವಹಿಸಿದೆ. ಇದಕ್ಕಾಗಿ ಒಬ್ಬ ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿ ಜಿಲ್ಲಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಾರೆ. ೨೦೦೬ ರಿಂದ ಈ ಅಧಿಕಾರಿಯ ಸ್ಥಾನವನ್ನು ಕಿರಿಯ 'ಎ' ದರ್ಜೆಗೆ ಏರಿಸಿ, ಪದನಾಮವನ್ನು 'ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡೆ' ಎಂದು ಕರೆಯಲಾಗಿದೆ. ಉಡುಪಿಯ ಎಂ.ಜಿ.ಎಂ. ಕ್ರೀಡಾಂಗಣ ಪ್ರಸ್ತುತ ೧೦,೦೦೦ ಪ್ರೇಕ್ಷಕರಿಗೆ ಸ್ಥಳಾವಕಾಶವನ್ನು ಹೊಂದಿದ್ದು, ಜಾಗತಿಕ ಪ್ರಪಂಚದ ಕ್ರೀಡೆಗಳಿಗೆ ಪ್ರೋತ್ಸಾಹದಾಯಕವಾದ ಸುಸಜ್ಜಿತ ಕ್ರೀಡಾಂಗಣವಾಗಿ ಮಾರ್ಪಡುತ್ತಿದೆ. ಇದು ೪೦೦ ಮೀ. ಮಡ್‌ಟ್ರ್ಯಾಕ್ ಹೊಂದಿದ್ದು, ವಾಲಿಬಾಲ್, ಅಥ್ಲೆಟಿಕ್ಸ್‌ಗಳಿಗಾಗಿ ಪ್ರತ್ಯೇಕ ಕೋಚ್‌ಗಳನ್ನು ನೇಮಿಸಿಕೊಂಡಿದೆ. ಕಾಲಕಾಲಕ್ಕೆ ಗ್ರಾಮೀಣ, ದಸರಾ ಹಾಗೂ ಮಹಿಳಾ ಕ್ರೀಡಾಕೂಟಗಳನ್ನು ಏರ್ಪಡಿಸುತ್ತದೆ. ತಾಲೂಕು, ಜಿಲ್ಲಾ, ವಿಭಾಗೀಯ ಹಾಗೂ ರಾಜ್ಯಮಟ್ಟಗಳಲ್ಲಿ ಯುವಜನ ಮೇಳಗಳನ್ನೂ, ಯುವಜನೋತ್ಸವಗಳನ್ನೂ ನಡೆಸುತ್ತದೆ. ಕಾರ್ಕಳದಲ್ಲಿ ೪೦೦ ಮೀ. ಓಟದ ಮಡ್‌ಟ್ರ್ಯಾಕ್ ಹೊಂದಿರುವ ಕ್ರೀಡಾಂಗಣ ೩೬ ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಕುಂದಾಪುರದಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ.

* * * * *